ಶ್ರೀ ಟಿ. ಚೌಡಯ್ಯ.—ಅಧ್ಯಕ್ಷರೆ, ತಾವು ನೆನ್ನೆಯ ದಿವಸ ಎಲ್ಲವನ್ನೂ ಕನ್ನಡದಲ್ಲಿಯೇ ನಡೆಸುವುದಾಗಿ ಆಶ್ವಾಸನೆ ಕೊಟ್ಟಿದ್ದೀರಿ. ಈಗ 'ಎಸ್ ಹ್ಯಾವ್ ಇಟ್' ಎಂದು ಹೇಳುತ್ತಿದ್ದೀರಿ. ದಯವಿಟ್ಟು ಕನ್ನಡದಲ್ಲಿಯೇ ನಡೆಸಬೇಕೆಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು.—ಈ ವಿಚಾರ ಬೆಳಿಗ್ಗೆ ೧೦ ಗಂಟೆಯವರಿಗೂ ಆಗಿದೆ. ನಾಳೆಯಿಂದ ಪೂರ್ತಿ ಕನ್ನಡದಲ್ಲಿಯೇ ಮಾಡೋಣ.

Notice of Adjournment motions
Police firing near HAL Area

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೆ, ನಾವು ವಿರೋಧ ಪಕ್ಷದ ನಾಯಕರೆಲ್ಲರೂ ಸೇರಿ ತಮಗೆ ಸೂಕ್ತವಾದ ಕಾಲದಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.—ತಾವು ಒಂದು ನೋಟೀಸ್ ಪ್ರತ್ಯೇಕವಾಗಿ ಕೊಟ್ಟಿದ್ದೀರಿ. ಮಾನ್ಯ ಬೊಮ್ಮಾಯಿ ಅವರ ವಿಷಯ ಬೇರೆ ಇದೆ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ ನಾನು ಪ್ರಸ್ತಾಪ ಮಾಡುತ್ತಾ ಇರತಕ್ಕದ್ದು ಒಂದು ಖಚಿತವಾದ ವಿಚಾರ. ಹೆಚ್ಎಎಲ್ ಬಳಿ ಗುಂಡು ಹಾರಿಸಿರುವುದಕ್ಕೆ ಸಂಬಂಧಪಟ್ಟಂತೆ ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳಾದ ಬೊಮ್ಮಾಯಿಯವರು, ಸಾಗರ್‌ರವರು, ಬಾಕಿ ಸದಸ್ಯರು ಕೊಟ್ಟಿರತಕ್ಕದ್ದರಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಪ್ರಸ್ತಾಪವಾಗಿದೆ.

ಶ್ರೀ ಡಿ ದೇವರಾಜ ಅರಸ್.—ನಾನು ಈಗ ಹೆಚ್ಎಎಲ್ ಬಳಿಯಲ್ಲಿ ನಡೆದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಮೊದಲು ನಾನು ಕಳುಹಿಸಿರತಕ್ಕ ನಿಲುವಳಿ ಸೂಚನೆಯನ್ನು ತಮ್ಮ ಗಮನಕ್ಕೆ ತರಬೇಕಾಗಿರತಕ್ಕದ್ದು ನನ್ನ ಜವಾಬ್ದಾರಿ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕದ ೮ನೇ ಅಧ್ಯಾಯದಲ್ಲಿ ಸಾರ್ವಜನಿಕ ದೃಷ್ಟಿಯಿಂದ ಮುಖ್ಯವಾದ ಒಂದು ವಿಷಯದಲ್ಲಿ ನಿಲುವಳಿ ಸೂಚನೆಯನ್ನು ತರುವುದಕ್ಕೆ ಅವಕಾಶವಿದೆ. ನಿಯಮ ೫೦–೫೧ರ ಪ್ರಕಾರ ಇದೆ.

ಅಧ್ಯಕ್ಷರು.—ಎರಡು ಗಂಟೆ ಮುಂಚೆ ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಒಂದಕ್ಕಿಂತಲೂ ಹೆಚ್ಚಾದ ವಿಷಯಗಳು ಇನ್ನೊಂದರಲ್ಲಿ ಪ್ರಸ್ತಾಪವಾಗಿದೆ ಎಂದು ತಾವು ಸೂಕ್ಷ್ಮವಾಗಿ ಹೇಳಿದಿರಿ.

ಅಧ್ಯಕ್ಷರು.—ವ್ಯತ್ಯಾಸ ಇರತಕ್ಕದ್ದನ್ನು ತಮ್ಮ ಗಮನಕ್ಕೆ ತಂದೆ.

ಶ್ರೀ ಡಿ. ದೇವರಾಜ ಅರಸ್.—ವ್ಯತ್ಯಾಸ ಇರುವುದು ನನಗೆ ಸ್ಪಷ್ಟವಾಗಿ ಅರ್ಥವಾಗಿದೆ.

ಅಧ್ಯಕ್ಷರು.—ತಾವು ಕೊಟ್ಟಿರತಕ್ಕದ್ದು ಪ್ರತ್ಯೇಕ ನಿಲುವಳಿ ಸೂಚನೆಯಾಗಿ ಬರುತ್ತದೆ. ಇನ್ನೊಂದು ಒಟ್ಟಿಗೆ ಕೊಟ್ಟಿರತಕ್ಕದ್ದು ಬೇರೆ ವಿಷಯಗಳು ಪ್ರಸ್ತಾಪವಾಗಿದೆ.

ಶ್ರೀ ಡಿ. ದೇವರಾಜ ಅರಸ್.—ನಾನು ತಮ್ಮ ಮುಂದೆ ನಿಲುವಳಿ ಸೂಚನೆ ಮಂಡಿಸುವುದಕ್ಕೆ ಕೇಳಿಕೊಳ್ಳತಕ್ಕದ್ದು ಇದು ಒಂದೇ ವಿಚಾರ. ಚಿಂತಾಮಣಿಯ ವಿಚಾರ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿರತಕ್ಕ ವಿಚಾರ ಇವೊತ್ತಿನ ದಿವಸದ ಅಜೆಂಡಾದಲ್ಲಿ ಇದೆ.

ಶ್ರೀ ಡಿ. ದೇವರಾಜ ಅರಸ್.—ಅದು ಗಮನ ಸೆಳೆಯುವ ಸೂಚನೆ. ಅದು ಬೇರೆ ವಿಚಾರ. ನೀವು ಏತಕ್ಕೆ ಸೇರಿಸಿದ್ದೀರಾ ಅದು ನನಗೆ ಗೊತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ರೂಲ್ಸ್ ಪ್ರಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತಿನ ಅಜೆಂಡಾದಲ್ಲಿ ಪೋಲೀಸ್ ಫೈರಿಂಗ್ ಬಗ್ಗೆ ವಿಚಾರ ಇದೆ.

ಶ್ರೀ ಡಿ. ದೇವರಾಜ ಅರಸ್.—ತಾವು ವಾಸ್ತವಿಕವಾಗಿ ಹೇಳಿದ್ದೀರಿ. ಆ ವಿಚಾರವನ್ನು ನಾನು ನೋಡಿಕೊಂಡಿದ್ದೇನೆ. ಅದನ್ನು ನೋಡಿಕೊಂಡು ಈಗ ಪ್ರಾರಂಭ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೆನಪಿಗಾಗಿ ಹೇಳಿದೆ.

ಶ್ರೀ ಡಿ. ದೇವರಾಜ ಅರಸ್ —ಬಹಳ ಸಂತೋಷ. ನನ್ನ ಸ್ಮೃತಿ ಅಷ್ಟೊಂದು ಕೆಟ್ಟಿಲ್ಲ. ನಿಮಗೆ ಎಲ್ಲಿ ಮರೆತು ಹೋಗಿದೆ ಅದನ್ನು ನಾನು ಹೇಳುತ್ತೇನೆ, ಈಗ ನಾನು ಹಾಗೆ ಕೊಟ್ಟಿಲ್ಲ. ಒಂದೇ ಒಂದು ನಿರ್ದಿಷ್ಟವಾದ ವಿಚಾರವನ್ನು ತಿಳಿಸಿದ್ದೇನೆ. ಎರಡು ಮೂರು ವಿಚಾರಗಳನ್ನು ಸೇರಿಸಿಲ್ಲ. ಜನವರಿ ೨೧ನೇ ತಾರೀಖು ಬೆಂಗಳೂರು ಬಂದ್ ಆಚರಿಸಲಾದ ದಿವಸ ನಗರದ ಹೆಚ್‌ಎಎಲ್ ಬಳಿ ನಡೆದಂಥ ಪ್ರಕರಣದಲ್ಲಿ ಪೋಲೀಸರು ವಿನಾ ಕಾರಣ ಗುಂಡು ಹಾರಿಸಿದ ಪರಿಣಾಮ ಮೂರು ಜನರು ಸಾವಿಗೀಡಾದರು ಎಂಬ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಕಳುಹಿಸಿಕೊಟ್ಟಿದ್ದೇನೆ. ಇದು ಅರ್ಜೆಂಟ್ ಆದ ವಿಚಾರವಾಗಿದೆ ಎನ್ನುವುದರ ಮೇಲೆ ಹೆಚ್ಚಿಗೆ ಚರ್ಚೆ ಮಾಡಬೇಕಾಗಿಲ್ಲ. ಏಕೆಂದರೆ ಈ ಪ್ರಕರಣ ಇದೇ ತಿಂಗಳು ೨೧ನೇ ತಾರೀಖು ನಡೆದಿದ್ದು ಆ ಸಂದರ್ಭದಲ್ಲಿ ೩ ಕೊಲೆಗಳಾಗಿವೆ. ನಾವು ಇಲ್ಲಿ ೨೮ನೇ ತಾರೀಖಿನ ದಿವಸ ಸಭೆ ಸೇರಿದ್ದೇವೆ. ಆದ್ದರಿಂದ ಇದು ಪಬ್ಲಿಕ್ ಇಂಪಾರ್ಟೆನ್ಸ್ ಕೂಡ ಆಗಿದೆ. ಇನ್ನೊಂದು ಏನೆಂದರೆ, ನಮ್ಮ ಬೆಂಗಳೂರಿನಲ್ಲಿರುವ ೫ ಕೇಂದ್ರ ಕೈಗಾರಿಕಾ ಕಾರ್ಖಾನೆಗಳ ನೌಕರರು ಮುಷ್ಕರವನ್ನು ಕಳೆದ ಒಂದು ತಿಂಗಳಿಂದಲೂ ನಡೆಸುತ್ತಿದ್ದಾರೆ. ೨೧–೧–೧೯೮೧ ರಂದು ಬೆಂಗಳೂರು ಬಂದ್ ಆಚರಣೆ ಮಾಡಿದ್ದಾರೆ, ಆಗ ಪೋಲೀಸರಿಂದ ಫೈರಿಂಗ್ ಆಗಿ ಈ ಘಟನೆ ನಡೆದಿದೆ. ರೂಲ್ ೫೨ರಲ್ಲಿ,

> 'not mɔre than one such motion shall be made at the same sitting'

> 'not more than one matter shall be discussed on the same moti o

ಎಂದು ಇದೆ. ಇದರ ಪ್ರಕಾರ ನಾವು ಈ ಅಧಿವೇಶನದಲ್ಲಿ ಕೇವಲ ಒಂದೇ ಒಂದು ನಿಲುವಳಿ ಸೂಚನೆಯನ್ನು ನಾವು ಇಲ್ಲಿ ತಂದಿದ್ದೇವೆ. ಇನ್ನು,

> 'the motion shall be restricted to a specific matter of recent occuɪrence'

ಎಂದು ಇದೆ. ಇದು ಇತ್ತೀಚೆಗೆ ನಡೆದಿದ್ದು ಗುಂಡೇಟಿನಿಂದ ೩ ಜನ ಸತ್ತಿರುವುದು ನಿರ್ವಿವಾದವಾದ ಸಂಗತಿಯಾಗಿದೆ, ಸ್ಪೆಸಿಫಿಕ್ ಮ್ಯಾಟರ್ ಆಗಿದೆಯೋ ಎಂದರೆ ಪೋಲೀಸ್ ಫೈರಿಂಗ್‌ನಲ್ಲಿ ೩ ಜನ ಸತ್ತಿರುವುದರಿಂದ ಇದು ಸ್ಪೆಸಿಫಿಕ್ ಆಗಿಯೇ ಇದೆ. ಇನ್ನು

> 'the motion shall not revive discussion on a matter which has been discussed in the same session'

ಎಂದು ಇದೆ. ಇದರ ಪ್ರಕಾರ ನೋಡಿದರೂ ಕೂಡ ಹಿಂದೆ ಯಾವಾಗಲೂ ಇದನ್ನು ಈ ಅಧಿವೇಶನದಲ್ಲಿ ಚರ್ಚಿಸಿ ಈಗ ಮುಂದುವರಿಸುತ್ತಿಲ್ಲ.

ಅಧ್ಯಕ್ಷರು.—ಟೆಕ್ನಿಕಲ್ ಆಗಿ ತಮ್ಮ ಅಭಿಪ್ರಾಯ ಏನಿದೆ ಎಂಬುದನ್ನು ಹೇಳಿ. ಅದು ಆ ವ್ಯಾಪ್ತಿಯಲ್ಲಿ ಬರುತ್ತದೆ. ಈ ವಿಚಾರದಲ್ಲಿ ತಾವು ಏನಾದರೂ ಪ್ರಸ್ತಾಪ ಮಾಡುವುದಾದರೆ ಮಾಡಿ,

SRI D. DEVARAJ URS.—Sir, I am very grateful to you. You have pointed out and made clear that technically it is within the purview of rules. That one point you have made clear. We are very thankful to you for it.

SRI M. VEERAPPA MOILY.—If the Hon. Speaker has given...

SRI D. DEVARAJ URS.—Sir, this type of interruption is not fair.

SRI M. VEERAPPA MOILY.—Sir, when the Leader of the Opposition assumes something, I have to say something.

SRI D. DEVARAJ URS. - Sir, unless I yield......

SRI M. VEERAPPA MOILY.—I am sorry...

MR. SPEAKER.—I have not given consent.

SRI D. DEVARAJ URS.—Nor did I quote and say you have given consent. Technically it comes within the purview of rules. Therefore, I have got something to submit.

SRI A. LAKSHMI SAGAR.—Sir, the Leader of the Opposition will have his opportunity to have his say, I really do not understand the purpose behind frequent interruptions.

MR. SPEAKER.—Let us not make the case worse.

SRI A. LAKSHMI SAGAR.—It is not worse. If it is worse, it is worse.

ಶ್ರೀ ಡಿ. ದೇವರಾಜ ಅರಸ್.—ಒಂದು ರೀತಿಯಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಸ್ವಲ್ಪ ಆತುರವಾಗಿ ಮಾತನಾಡುವಾಗ ಅವರ ಮನಸಿನಲ್ಲಿ ಏನಿದೆ ಎಂಬುದನ್ನು ಹೇಳಿದ್ದು ಒಳ್ಳೆಯದೇ ಆಯಿತು.

ಮಾನ್ಯ ಅಧ್ಯಕ್ಷರು.—ನಾನು ರೂಲನ್ನು ಓದಿದ್ದೇನೆ. ತಾವು ಹಿರಿಯ ಸದಸ್ಯರು, ತಾವೂ ಕೂಡ ರೂಲನ್ನು ಚೆನ್ನಾಗಿಯೇ ಓದಿದ್ದೀರಿ. ಇದು ರೂಲ್‌ನ ವ್ಯಾಪ್ತಿಯಲ್ಲಿ ಬರುತ್ತದೆಂದು ನಾನು ಹೇಳಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ತಾವು ಅನುಮತಿಯನ್ನು ಕೊಟ್ಟಿದ್ದೀರೆಂದು ನಾನು ತಿಳಿದು ಕೊಂಡರೆ ಅದು ತಪ್ಪಾಗುತ್ತದೆ. I am really justified in making out the case as to how this motion comes within the rules, The Hon. Finance Minister has already started telling, no, no. Objection is there. ಸ್ವಾಮಿ, ನಾನು ಎಲ್ಲ ವಿಚಾರವನ್ನೂ ತಮಗೆ ಹೇಳುತ್ತಿದ್ದೇನೆಯೇ ಹೊರತು ಮಾನ್ಯ ಮೊಯ್ಲಿಯವರಿಗೆ ಹೇಳುತ್ತಿಲ್ಲ. ಶ್ರೀಮಾನ್ ಮೊಯ್ಲಿಯವರೇನೂ ಹೊಸಬರಲ್ಲ. Technically, it may not be out of place ಎಂದು ಹೇಳುವುದನ್ನು ಅವರು ಸೂಕ್ಷ್ಮವಾಗಿ ಈಗಲೇ ಹೇಳಿದ್ದಾರೆ. ಇನ್ನು ೫೨ನೇ ರೂಲ್‌ನ ೫ನೇ ಉಪ ನಿಬಂಧನೆ,

> 'motion shall not revive discussion on a matter which has been discussed in the same session'

ರ ಪ್ರಕಾರ ಈಗತಾನೆ ಪ್ರಸ್ತಾಪವಾಗಿದೆ. ಆದರೆ ಈ ವಿಚಾರ ಪ್ರಸ್ತಾಪವಾಗಿಲ್ಲ.

ಅಧ್ಯಕ್ಷರು.—ಈ ಉಪ ನಿಬಂಧನೆ ನಿಮಗೆ ಸ್ವಲ್ಪ ಅಡ್ಡಿಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಈ ನಿಬಂಧನೆ ಅಡ್ಡಿಬರುತ್ತದೆಂದು ತಮ್ಮ ಅಭಿಪ್ರಾಯ ಇದ್ದರೆ ಅದನ್ನು ನಾನು ಪರಿಹಾರ ಮಾಡುತ್ತೇನೆ. ತಾವು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೀರೆಂದು ನನಗೆ ತಿಳಿದಿದೆ. ಈ ಸಂದರ್ಭದಲ್ಲಿ ನೂರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಬೇಕಾದರೂ ಬರಬಹುದು. ಆದರೆ ಅದಕ್ಕೂ, ನಾನು ಕಳುಹಿಸಿರುವ ಅಡ್ಜರ್ನ್‌ಮೆಂಟ್ ಮೋಷನ್‌ಗೂ ಸಂಬಂಧವಿಲ್ಲ.

ಅಧ್ಯಕ್ಷರು.—ರೂಲ್‌ನಲ್ಲಿ ಬಹುಪಾಲು ಟೆಕ್ನಿಕಲ್ ಆಗಿ ನಿಲುವಳಿ ಸೂಚನೆ ಇದೆ ಎಂದು ನಾನು ಹೇಳಿದೆ ಅಷ್ಟೆ. I did not say that it totally bars you.

SRI D. DEVARAJ URS.—Just to overcome the difficulty of discussing, ಈ ರೀತಿ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅಡ್ಡಬರುತ್ತದೆಂದು ಹೇಳುವುದು ಸರಿಯಲ್ಲ. ಇನ್ನು

'motion shall not anticipate a matter which has been previously appointed for consideration. In determining on the ground of anticipation, regard...

ನಾವು ಇದನ್ನು ಕಳುಹಿಸಿದ್ದ ದಿವಸ ಕಾಲಿಂಗ್ ಅಟೆನ್‌ಷನ್ ಮೋಷನ್ ಇತ್ತೆ ? ನಾವು ಇದನ್ನು ಮೊನ್ನೆ ದಿವಸ ಕಳುಹಿಸಿದ್ದೇವೆ. ನಾವು ಕಳುಹಿಸಿದ್ದನ್ನು ತಿಳಿದು ಬೇರೆಯವರೂ ಕಳುಹಿಸಿರಬಹುದು. ನಾವು ನಿಯಮದ ಪ್ರಕಾರ ೨ ಗಂಟೆ ಮುಂಚಿತವಾಗಿಯೇ ಕಳುಹಿಸಿಕೊಟ್ಟಿದ್ದೇವೆ. ತಡವಾಗಿ ಏನೂ ಇದು ಬಂದಿಲ್ಲ. ಇನ್ನು,

"on the ground of anticipation regard shall be had by the Speaker to the probability of the matter anticipated being brought before the Assembly within a reasonable time"

ಅಂದರೆ ಅಂಥಾದ್ದು ಏನೂ ಇಲ್ಲ. ಇನ್ನು,

"motion shall not deal with any matter which is under adjudication by a court of law having jurisdiction in any part of India"

ಎಂದು ನೋಡಿದರೆ ಇದೂ ಕೂಡ ಅಡ್ಡಬರುವುದಿಲ್ಲ. ಇದು ನಿನ್ನೆಯ ದಿವಸ ಮೇಲ್ಮನೆಯಲ್ಲಿ ನಡೆದದ್ದು ಅದು ಪತ್ರಿಕೆಯಲ್ಲೂ ಕೂಡ ಬಂದಿದೆ. ಅದರ ಪ್ರಕಾರ ಮೆಜೆಸ್ಟೀರಿಯಲ್ ಎನ್‌ಕ್ವೈರಿಗೆ ಹಾಕಿದ್ದೇವೆಂದು ಹೇಳಿದ್ದೀರಿ. ಸಾಮಾನ್ಯವಾಗಿ ಇಂಥಾದ್ದು ನಡೆದಾಗಲೆಲ್ಲಾ ಮೆಜೆಸ್ಟೀರಿಯಲ್ ಎನ್‌ಕ್ವೈರಿ ಆಗುತ್ತದೆ. ಆದರೆ ಮೆಜೆಸ್ಟೀರಿಯಲ್ ಎನ್‌ಕ್ವೈರಿಗೂ ಜುಡಿಷಿಯಲ್ ಎನ್‌ಕ್ವೈರಿಗೂ ವ್ಯತ್ಯಾಸವಿದೆ. ಲಾ ಓದಿರುವವರು ಇದನ್ನು ಹೇಳುತ್ತಾರೆ. ತಾವು ವಕೀಲರಾಗಿ ಕೆಲಸ ಮಾಡಿರುವುದರಿಂದ ಇದು ತಮಗೆ ಗೊತ್ತಿದೆ.

ಅಧ್ಯಕ್ಷರು.—ತಾವು ಕೂಡ ಮುಖ್ಯ ಮಂತ್ರಿಗಳಾಗಿ ಅದನ್ನು ಸಮರ್ಥನೆ ಕೂಡ ಮಾಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ನಾನು ಬಿ.ಎಸ್.ಸಿ., ಓದಿದೆ. ಆದರೆ ಎಲ್.ಎಲ್.ಬಿ. ಓದುವುದಕ್ಕೆ ಸಾಧ್ಯವಾಗಲಿಲ್ಲ.

10-30 A.M.

Then, (viii)

The motion shall not raise any question which under the Constitution or these rules can only be raised on a distinct motions by a notice given in writing to the Secretary.

ಅಂಥ ರಿಸ್ಟ್ರಿಕ್ಷನ್ ಏನೂ ಇಲ್ಲ. ಇದಕ್ಕೆ ಈಗ ೫೩ರಲ್ಲಿ ಏನು ಹೇಳಿದೆ ಎಂದರೆ

53. No motion which seeks to raise discussion on a matter pending before any statutory tribunal or statutory authority performing any judicial or quasi-judicial functions or any commission or court of enquiry appointed to enquire into or investigate any matter shall ordinarily be permitted to be moved. ಅಂಥ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಇದೆ.

ನಾವು ತಮಗೆ ಕಳುಹಿಸಿಕೊಟ್ಟಿರತಕ್ಕಂಥ ನಿಲುವಳಿ ಸೂಚನೆ ರೂಲ್ಸ್ ಆಫ್ ಬಿಸಿನೆಸ್, ರೂಲ್ಸ್ ಆಫ್ ಪ್ರೊಸೀಜರ್, ಕಂಡಕ್ಟ್ ಆಫ್ ಪ್ರೊಸೀಜರ್ ೫೨–೫೩ ಚಾಪ್ಟರ್ ೮ರಲ್ಲಿ ಕಲಮ್ ಪ್ರಕಾರ ಎಲ್ಲ ರೀತಿಯಲ್ಲಿಯೂ ಈ ನಿಲುವಳಿ ಸೂಚನೆ ಅರ್ಹತೆಯನ್ನು ಪಡೆದಿದೆ. ಅರ್ಹತೆಯನ್ನು ಪಡೆದಿದ್ದು ಈ ಸಭೆಯ ಮಾನ್ಯ ಅಧ್ಯಕ್ಷರಾದ ತಮ್ಮ ಒಪ್ಪಿಗೆ ಇದಕ್ಕೆ ಪಡೆಯದ ಹೊರತು ನಾವು ಮಂಡಿಸುವುದಕ್ಕೆ ಸಾಧ್ಯವಿಲ್ಲ. ಈಗ ತಾವು ನಿನ್ನೇ ತಾನೆ ಅಧ್ಯಕ್ಷ ಪದವಿಗೆ ಸರ್ವಾನುಮತದಿಂದ ಆಯ್ಕೆಯಾಗಿದ್ದೀರಿ. ನನಗೆ ಬಹಳ ಸಂತೋಷ. ತಾವು ನ್ಯಾಯವಾದಿಗಳಾಗಿ ಕೆಲಸ ಮಾಡಿದ್ದೀರಿ, ಮಾನ್ಯ ಸಭೆಯ ವಿರೋಧ ಪಕ್ಷದವರಾಗಿಯೂ ಕೆಲಸ ಮಾಡಿದ್ದೀರಿ. ಆಳುವ ಪಕ್ಷದಲ್ಲಿದ್ದು ಮಂತ್ರಿಗಳಾಗಿಯೂ ಕೆಲಸ ಮಾಡಿದ್ದೀರಿ. ಎಲ್ಲ ರೀತಿಯ ಅನುಭವ ತಮಗೆ ಇದೆ. ಇದು ಒಂದು ಹೆಚ್ಚಿನ ವಿಷಯ. ಇಷ್ಟೆಲ್ಲ ಗುಣಗಳು ತಮಗೆ ಸೇರಿರುವುದರಿಂದ ನಾನು ತಿಳಿಯುತ್ತೇನೆ. ತಾವು ಈ ಸದನದಲ್ಲಿ ಎರಡೂ ಕಡೆಯ ಪಕ್ಷಗಳು ಅಂದರೆ ಒಂದು ಎಡಪಕ್ಷ ಮತ್ತು ಬಲಪಕ್ಷ ಎರಡನ್ನೂ ಸಮಾನವಾಗಿ ತಕ್ಕಡಿಯಲ್ಲಿ ತೂಗಿ, ಯಾರ ಒಬ್ಬ ಪಕ್ಷಕ್ಕೂ ಕೂಡಿಕೊಳ್ಳದೆ ಪಕ್ಷಾತೀತವಾಗಿ ತಾವು ತೀರ್ಮಾನವನ್ನು ಕೊಡುತ್ತೀರಿ ಎನ್ನುವ ವಿಶ್ವಾಸ ನಮಗೆ ಇದೆ. ಏತಕ್ಕೆಂದರೆ ತಾವು ಎಲ್ಲ ರೀತಿಯ ಶಾಸನದಲ್ಲಿ ಒಂದು ಸದೃಢವಾದ ಪಾತ್ರವನ್ನು ವಹಿಸಿ ಕೆಲಸ ಮಾಡತಕ್ಕಂಥ ವಿಶ್ವಾಸದಿಂದ ಈ ಸದನದ ಅಧ್ಯಕ್ಷರಾಗಿ ಕುಳಿತಿದ್ದೀರಿ. ನಾನು ತಮ್ಮನ್ನು ಅರ್ಥಮಾಡಿಕೊಂಡಿದ್ದೇನೆ. ತಾವು ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಕಾರಣದಿಂದ ಧೈರ್ಯಮಾಡಿ ಈ ವಿಷಯವನ್ನು ತಮ್ಮ ಮುಂದಿಡುತ್ತಿದ್ದೇನೆ. ಮತ್ತೆ ಈ ವಿಷಯಕ್ಕೆ ಏತಕ್ಕೆ ಇಷ್ಟೊಂದು ಮಹತ್ವ ಬಂದಿದೆ ಎಂದರೆ ಒಂದನೆಯದಾಗಿ ಸ್ವಾಮಿ ಬೆಂಗಳೂರು ನಗರದಲ್ಲಿ ಕೇಂದ್ರ ಸರ್ಕಾರದಿಂದ ಹಣ ಒದಗಿಸಿ ಸ್ಥಾಪನೆ ಮಾಡಿರತಕ್ಕಂಥ ಕಾರ್ಖಾನೆಗಳಿವೆ. ಈ ಕಾರ್ಖಾನೆಗಳ ಪೈಕಿ ಐದು ಕಾರ್ಖಾನೆಗಳು ಏನು ಇವೆ ಅವು ಮಾಲೀಕತ್ವದ ಬಗ್ಗೆ ಸ್ಟ್ರೈಕ್ ಹೂಡಿದ್ದಾರೆ. ಅವು ಯಾವುವೆಂದರೆ ಬಿ.ಇ.ಎಲ್., ಬಿ.ಇ.ಎಂ.ಎಲ್., ಐ.ಟಿ.ಐ., ಎಚ್.ಎ.ಎಲ್., ಮತ್ತು ಎಚ್.ಎಂ.ಟಿ., ಬೆಂಗಳೂರು ನಗರದಲ್ಲಿ ಸೇರಿದಂಥ ಬ್ರಾಂಚ್‌ಗಳನ್ನೂ ಸೇರಿಸಿದರೆ ಸುಮಾರು ಒಂದು ಲಕ್ಷ ಇಪ್ಪತ್ತೈದು ಸಹಸ್ರ ಕಾರ್ಮಿಕರು ಈ ಒಂದು ಮುಷ್ಕರದಲ್ಲಿ ಭಾಗಿಗಳಾಗಿದ್ದಾರೆ ಈ ರೀತಿಯಾಗಿ ಮುಷ್ಕರ ಹೂಡಿ ಒಂದು ತಿಂಗಳ ಮೇಲಾಗಿರುತ್ತದೆ. ಇದರಲ್ಲಿ ಒಂದು ವಿಚಾರವನ್ನು ತಮ್ಮ ಮುಖೇನ ಮಾನ್ಯ ಸಭೆಯ ಗಮನಕ್ಕೆ ತರುವುದೇನೆಂದರೆ ಈ ಕಾರ್ಖಾನೆಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಂಥವುಗಳಾಗಿವೆ. ಇವು ಕೇಂದ್ರ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು ಕೇಂದ್ರದ ಮಂತ್ರಿಗಳ ಮೇಲ್ವಿಚಾರಣೆಗೆ ಒಳಪಟ್ಟಿರುತ್ತವೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರದ ಹತೋಟಿ ಅದರ ಮೇಲೆ ಇರುವುದಿಲ್ಲ. ಅದು ನಿಜ. ಆ ಒಂದು ತತ್ವವನ್ನು ನಾವು ಎಲ್ಲರೂ ಒಪ್ಪತಕ್ಕಂಥಾದ್ದಾಗಿರುತ್ತದೆ. ಆದರೆ ಒಂದು ವಿಚಾರವನ್ನು ಇಲ್ಲಿ ಹೇಳಬೇಕೆಂದಿರುತ್ತೇನೆ. ನಮ್ಮ ಲೇಬರ್ ಮಿನಿಸ್ಟರ್ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರ ಆರೋಗ್ಯ ಚೆನ್ನಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಆಗಲಿ ಪರವಾಗಿಲ್ಲ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇರುತ್ತಾರೆ. ಆದರೆ ಅವರೇ ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಏತಕ್ಕೆಂದರೆ ನಮ್ಮ ಕೈಗಾರಿಕೆಗಳ ವಿಚಾರ ಮತ್ತು ಕಾರ್ಮಿಕರ ವಿಚಾರ ತಿಳಿದುಕೊಳ್ಳಬೇಕಾದರೆ ಲೇಬರ್ ಮಿನಿಸ್ಟರ್ ಯಾರು ಇರುತ್ತಾರೆಯೋ ಅವರು ಇದರಲ್ಲಿ ಬಹಳ ಶ್ರದ್ಧೆ ವಹಿಸಬೇಕಾಗಿದೆ. ಈ ಒಂದು ಮುಷ್ಕರ ಹೂಡಿದ ಮೇಲೆ ಲೇಬರ್ ಪೋರ್ಟ್‌ಫೋಲಿಯೋ ಬದಲಾವಣೆಯಾಗಿದೆಯೆಂದು ಕಾಣುತ್ತದೆ. ಒಂದು ತಿಂಗಳು ಆಗಿಲ್ಲ ಪಾಪ ಪತ್ರಿಕೆಯಲ್ಲಿ ಓದಿದೆ. ಆ ಪ್ರಕಾರ ಕೇಂದ್ರದ ಮಂತ್ರಿಗಳು ಬಂದಿದ್ದಾಗ ಈ ವಿಚಾರ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಶ್ರೀಮಾನ್ ಸ್ಟೀಫನ್‌ನವರು ಎಂದು ಕಾಣುತ್ತದೆ, ಲೇಬರ್ ಮಿನಿಸ್ಟರ್ ನಾನು ಬಂದು ಮೂರು ದಿವಸಗಳಾಯಿತು, ನನಗೆ ಏನೂ ಗೊತ್ತಿಲ್ಲವೆಂದು ಹೇಳಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿರುತ್ತದೆ. ಇರಲಿ ತಪ್ಪೇನು ಇಲ್ಲ.

ಅಧ್ಯಕ್ಷರು.—ವಾಸ್ತವಾಂಶವನ್ನೇ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ವಾಸ್ತವಾಂಶವೇ, ಇಲ್ಲವೆಂದು ಹೇಳುತ್ತಿಲ್ಲ. ಆದರೆ ವಾಸ್ತವಾಂಶದಿಂದ ಉದ್ಭವವಾದಂಥ ಘಟನೆಯಿದೆಯಲ್ಲ ಇದು ನಮಗೆ ತಲೆನೋವಾಗಿದೆ. ಹಾಗಾದರೆ ನಾನು ಬಂದು ಮೂರು ದಿವಸಗಳಾಗಿರುತ್ತದೆ ನನಗೆ ಏನು ಗೊತ್ತಿಲ್ಲವೆಂದರೆ ಏನಾದರೂ ಆಗಲಿ ಎಂದು ಹೇಳುತ್ತೀರಾ

ಹಾಗೆ ಅನ್ನುವುದಕ್ಕೆ ಆಗುವುದಿಲ್ಲ. ಇಲ್ಲಿ ಏನು ಹೇಳಬೇಕಾಗಿದೆ ಎಂದರೆ ಒಂದು ಮುಖ್ಯವಾದ ವಿಷಯ ವನ್ನು ಸಭೆಯ ಗಮನಕ್ಕೆ ತರುವುದೇನೆಂದರೆ ಸೆಂಟ್ರಲ್ ರಿಲೇಷನ್ ಶಿಫ್ ಏನು ಇದೆ, ಒಂದು ಕಡೆ ಮ್ಯಾನೇಜ್‌ಮೆಂಟ್, ಒಂದು ಕಡೆ ಕಾರ್ಮಿಕರು ಈ ಇಬ್ಬರಲ್ಲಿಯೂ ಆಗಿಂದಾಗ್ಗೆ ಉದ್ಭವವಾಗತಕ್ಕಂಥ ವಾದವಿವಾದಗಳು ಇರುತ್ತವೆ. ಕೇಂದ್ರ ಸರ್ಕಾರ ಹಣವನ್ನು ಕೊಟ್ಟು ಸ್ಥಾಪಿಸಿದಂಥ ಕಾರ್ಖಾನೆಯಾಗಲಿ, ನಮ್ಮ ರಾಜ್ಯ ಸರ್ಕಾರ ಸ್ಥಾಪನೆ ಮಾಡಿದ ಕಾರ್ಖಾನೆಯಾಗಲಿ, ಅಥವಾ ಖಾಸಗಿ ಸಂಸ್ಥೆಯವರು ಸ್ಥಾಪನೆ ಮಾಡಿದಂಥ ಯಾವುದೇ ಕಾರ್ಖಾನೆಯಾಗಿರಲಿ ನಮ್ಮ ಲೇಬರ್ ಆಕ್ಟ್ ಪ್ರಕಾರ ಏನು ಇದೆ, ಬಂಡವಾಳ ಯಾರೇ ಹಾಕಿದ್ದರೂ ಮಾಲೀಕತ್ವವನ್ನು ಯಾರೇ ಪಡೆದಿದ್ದರೂ ನಮ್ಮ ರಾಜ್ಯ ದಲ್ಲಿ ಯಾವುದೇ ಕಾರ್ಖಾನೆ ಇರಲಿ, ಎಲ್ಲ ಕಾರ್ಖಾನೆಗಳ ಮೇಲಿನ ಹತೋಟಿ, ಮ್ಯಾನೇಜ್‌ಮೆಂಟ್ ಅಂದರೆ ಕನ್ನಡದಲ್ಲಿ ಆಡಳಿತ ವರ್ಗಕ್ಕೂ ಮತ್ತು ಕಾರ್ಮಿಕ ವರ್ಗಕ್ಕೂ ಇರತಕ್ಕಂಥ ಒಂದು ಮಧುರ ಸಂಬಂಧ ಅದನ್ನು ಎಚ್ಚರಿಕೆಯಿಂದ ಕೆಡದಂತೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿ, ಕಾನೂನು ಪ್ರಕಾರ, ಲೇಬರ್ ಆಕ್ಟ್ ಪ್ರಕಾರ ನಮ್ಮ ರಾಜ್ಯ ಸರ್ಕಾರಕ್ಕೆ ಇದೆ. ಈ ವಿಷಯವನ್ನು ಕೇಂದ್ರ ಸರ್ಕಾರದಲ್ಲಿ ಮೊದಲನೆಯದಾಗಿ ಸ್ಪಷ್ಟಪಡಿಸಬೇಕಾಗಿದೆ. ಈ ರಾಜ್ಯ ಸರ್ಕಾರ ಹೇಗೆ ಇದೆ ಎಂದರೆ, ಯಾವುದಾದರೂ ಒಂದು ಎಚ್.ಎ.ಎಲ್., ಎಚ್.ಎಂ.ಟಿ. ಇಂತಹ ಕಾರ್ಖಾನೆಗಳಲ್ಲಿ ಯಾವುದೇ ಒಂದು ಸಂದರ್ಭದಲ್ಲಿ ಗಲಾಟೆ ಪ್ರಾರಂಭವಾಗುತ್ತದೆ. ಈ ಕಾರ್ಖಾನೆಗಳಲ್ಲಿ ಆಡಳಿತ ವರ್ಗದವರಿಗೂ ಕಾರ್ಮಿಕ ವರ್ಗದವರಿಗೂ ಒಪ್ಪಂದ ಏರ್ಪಡುವುದಿಲ್ಲವೆಂದು ಇಟ್ಟುಕೊಳ್ಳೋಣ. ಆಗ ಇದಕ್ಕೆ ಮಧ್ಯಸ್ಥಿಕೆ ಮಾಡುವವರು ಯಾರು ಸ್ವಾಮಿ ? ರಾಜ್ಯ ಸರ್ಕಾರವೇ ಹೊರತು ಕೇಂದ್ರ ಸರ್ಕಾರವಲ್ಲ. ರಾಜ್ಯ ಸರ್ಕಾರಕ್ಕೆ ಮಧ್ಯ ಪ್ರವೇಶ ಮಾಡುವುದಕ್ಕೆ ಕಾನೂನು ರೀತ್ಯ ಅಧಿಕಾರ ಇದೆ. ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಅಧಿಕಾರ ಇಲ್ಲ. ನಮ್ಮ ಮಂತ್ರಿಗಳು ಯಾರಿದ್ದಾರೆ, ಮುಖ್ಯಮಂತ್ರಿಯವರಾದಿಯಾಗಿ, ಕಾರ್ಮಿಕ ಮಂತ್ರಿಗಳನ್ನು ಒಳಗೊಂಡು ಇವರುಗಳು ಈ ವಿಚಾರವನ್ನು ತೆಗೆದುಕೊಳ್ಳಬಹುದು. ಸೂಕ್ತವಾದ ರೀತಿಯಲ್ಲಿ ಮಧ್ಯಸ್ಥಿಕೆ ವಹಿಸಲು ಮೊದಲು ಮಧ್ಯಸ್ಥಿಕೆಯ ಅಧಿಕಾರಿಗಳು ಬರುತ್ತಾರೆ. ಅವರು ಆಡಳಿತ ವರ್ಗ ಹಾಗೂ ಕಾರ್ಮಿಕ ವರ್ಗದವರಿಬ್ಬರನ್ನೂ ಈ ಬಗ್ಗೆ ಕೇಳಬೇಕಾಗುತ್ತದೆ. ಅವರು ಇಬ್ಬರನ್ನೂ ಕರೆದು.........

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಪಾಠ ಹೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಮಂತ್ರಿಗಳು ತಾವು ಅಧಿಕಾರವನ್ನು ವಹಿಸಿಕೊಂಡು ೩ ದಿವಸ ಆಯಿತು ಎಂದು ಹೇಳಿದ್ದರಿಂದ ನಾನು ಆ ವಿಷಯವನ್ನು ಸ್ಪಷ್ಟಪಡಿಸೋಣವೆಂದು ಹೇಳು ತ್ತಿದ್ದೇನೆ. ನಾನು ನಿಮಗೆ ಪಾಠವನ್ನು ಹೇಳುವುದಕ್ಕೆ ನೀವು ನಮ್ಮ ಶಿಷ್ಯರೇನೂ ಅಲ್ಲ.

ಅಧ್ಯಕ್ಷರು.—ಈಗ ಸೂಚನಾ ವಿಷಯಕ್ಕೆ ಬರೋಣ. ಮಧ್ಯದಲ್ಲಿ ಈ ರೀತಿ ಪ್ರಸ್ತಾಪಗಳು ಇಲ್ಲದಿದ್ದರೆ ಸ್ವಾರಸ್ಯ ಇರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಮಂತ್ರಿಗಳು ತಮ್ಮ ಶಿಷ್ಯರೇನೂ ಅಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಆದರೆ ಅವರು ಒಂದು ಕಾಲದಲ್ಲಿ ಇವರ ಶಿಷ್ಯರಾಗಿದ್ದರೆಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ವಿಷಯಕ್ಕೆ ಬರೋಣ. ಇದು ನಮ್ಮ ರಾಜ್ಯ ಸರ್ಕಾರದ ಜವಾಬ್ದಾರಿ ಇದೆ. ನಮ್ಮ ಕಾರ್ಮಿಕ ಮಂತ್ರಿಗಳ ಜವಾಬ್ದಾರಿ ಇದೆ. ಇವರು ಈ ಒಂದು ಗಲಾಟೆ ಯಲ್ಲಿ ಮಧ್ಯಸ್ಥಿಕೆ ವಹಿಸಬೇಕಾಗುತ್ತದೆ. ಕೇಂದ್ರ ಸರ್ಕಾರದ ಮಂತ್ರಿಗಳು ಯಾರೇ ಇರಲಿ ಕಾರ್ಮಿಕ ಕಲಾಪದ ವಿಚಾರವಾಗಿ ಅವರು ನಮ್ಮ ರಾಜ್ಯ ಸರ್ಕಾರದ ಅಧೀನಕ್ಕೆ ಒಳಪಟ್ಟವರೆಂದು ನಾನು ಸ್ಪಷ್ಟ ವಾಗಿ ಹೇಳಬೇಕಾಗಿದೆ. ಇಲ್ಲಿ ಏನಾಗಿದೆ ? ಕೇಂದ್ರ ಸರ್ಕಾರದ ಮಂತ್ರಿಗಳು ಬಂದು ಇಲ್ಲಿ ಇದ್ದಾಗ, ಇವತ್ತು ಈ ಸಂದರ್ಭದಲ್ಲಿ.........

ಅಧ್ಯಕ್ಷರು.— ತಾವು ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ದೊರೆ ಯುತ್ತದೆ. ಈ ಸಮಯದಲ್ಲಿ ನಾನು ತಮ್ಮ ಭಾಷಣದ ಮಧ್ಯೆ ಬರುವುದಕ್ಕೆ ಇಷ್ಟಪಡುವುದಿಲ್ಲ. ಈ ಸಮಯದಲ್ಲಿ ವಿಷಯದ ಚರ್ಚೆಗೆ ಅವಕಾಶ ಕೊಡಬೇಕೇ ಬೇಡವೇ ಅಷ್ಟಕ್ಕೆ ಮಾತ್ರ ಚರ್ಚೆ ಸೀಮಿತವಾಗಿರ ತಕ್ಕದ್ದು.

SRI D. DEVARAJ URS.—That is why to facilitate you to come to a conclusion, I am just trying to give the back ground and the principal on which the industrial disputes are to be tackled and settled according to law. ಅದಕ್ಕೆ ಇಲ್ಲಿ ಫೈರಿಂಗ್ ಏಕೆ ಆಯಿತು ಎಂದು ಕೇಳುತ್ತಿದ್ದೇನೆ. Otherwise I would not have brought all these things here. ಈ ಕಾರ್ಮಿಕರು ಸತ್ಯಾಗ್ರಹ ಮಾಡಿದರು. ಈ ಪರಿಣಾಮವಾಗಿ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ರಾಜಧಾನಿಗೆ ಹೋಗಿ ಬಂದರು. ಇವರು ಅಲ್ಲಿಗೆ ಹೋಗಿ ಈ ಬಗ್ಗೆ ಶ್ರಮಿಸಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಒಪ್ಪಲಿಲ್ಲವೆಂದಾಯಿತು. ಇದಾದ ಮಾರನೆಯ ದಿನ ಕಾರ್ಮಿಕರು [illegible]ನೇ ತಾರೀಖು ಇಡೀ ಬೆಂಗಳೂರನ್ನು ಬಂದ್ ಮಾಡಿದರು. ಅದರ ಪರಿಣಾಮವಾಗಿ ಗೋಲಿಬಾರ್ ಆಯಿತು. ಅದು ಯಾತಕ್ಕೆ ಆಯಿತು ಎಂದು ಪ್ರಸ್ತಾಪ ಮಾಡುತ್ತಾ ಇಲ್ಲ. ಅವರ ಡಿಮ್ಯಾಂಡ್ ಏನು? ಅದನ್ನು ಬಗೆ ಹರಿಸುವ ಬಗ್ಗೆ ನಾನು ಈಗ ಪ್ರಸ್ತಾಪ ಮಾಡುತ್ತಾ ಇಲ್ಲ. ಇವತ್ತು ಇಲ್ಲಿ ಕೆಲವು ಬೇಸಿಕ್ ಪಾಯಿಂಟ್ ಗಳು ಏನು ಇದೆ ಅವನ್ನು ತಮಗೆ ಅರಿಕೆ ಮಾಡುತ್ತಿದ್ದೇನೆ. ಏಕೆಂದರೆ ಇದು ಉದ್ಭವವಾಗುವುದಕ್ಕೆ ಕಾರಣ ಏನು ಎಂಬುದನ್ನು ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿಗೆ ಸ್ಟೀಫನ್ ಸಾಹೇಬರು ಬಂದು ನಾನು ಕೊಡುವುದು ಇಷ್ಟೇ ಎಂದು ಹೇಳಿ ಹೋದರು. ಇಲ್ಲಿ ಏನಾಯಿತು? ಅದಾದಮೇಲೆ ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಕಾರ್ಮಿಕ ನಾಯಕರನ್ನು ಕರೆಸಿ ಮಾತನಾಡಿರಬಹುದೆಂದು ಕಾಣು ತ್ತದೆ. ಅವರುಗಳ ಡಿಮ್ಯಾಂಡ್‌ಗಳು ಏನು ಎಂಬುದನ್ನು ಇಟ್ಟರು ಎಂದು ಕಾಣುತ್ತದೆ. ಅದನ್ನು ಕೇಂದ್ರ ಸರ್ಕಾರದ ಮಂತ್ರಿಗಳಿಗೆ ತಿಳಿಸಿ ಮಾತನಾಡಿಕೊಂಡು ಬರೋಣವೆಂದು ಅಲ್ಲಿಗೆ ಮಾನ್ಯ ಮುಖ್ಯ ಮಂತ್ರಿಯವರು ಹೋದರೆಂಬ ವಿಷಯವನ್ನು ನಾನು ಪತ್ರಿಕೆಗಳಲ್ಲಿ ಓದಿದೆ. ಡಿಫೆನ್ಸ್‌ಗೆ ಸಂಬಂಧಪಟ್ಟ ಕೈಗಾರಿಕೆಗಳು ಪ್ರಧಾನಮಂತ್ರಿಯವರ ಕೈಯಲ್ಲಿದೆ. ಸ್ಟೀಫನ್‌ರವರು ಕೇಂದ್ರ ಕೈಗಾರಿಕಾ ಮಂತ್ರಿಗಳಾಗಿ ದ್ದಾರೆ. ಶ್ರೀ ಎನ್.ಡಿ. ತಿವಾರಿಯವರು ಕಾರ್ಮಿಕ ಮಂತ್ರಿಗಳಾಗಿದ್ದಾರೆ. ಈ ವಿಷಯದ ಬಗ್ಗೆ ಶ್ರೀ ತಿವಾರಿಯವರು ನಮಗೆ ಯಾವ ಸಂಬಂಧವೂ ಇಲ್ಲ ಎಂದು ಹೇಳಿದ್ದು ಕಾನೂನು ಪ್ರಕಾರ ಸರಿ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಅವರು ಕೇಂದ್ರದ ಕಾರ್ಮಿಕ ಮಂತ್ರಿಯಾಗಿದ್ದರೂ ಸಹಾ ಕಾನೂನು ಪ್ರಕಾರ ಅವರು ನಮ್ಮ ರಾಜ್ಯ ಸರ್ಕಾರದಲ್ಲಿ ಇಂಟರ್‌ಫಿಯರ್ ಆಗುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯ ಸರ್ಕಾರದ ಮಂತ್ರಿಗಳಿಗೆ ಅಧಿಕಾರ ಇದೆ. ಒಂದು ವೇಳೆ ಸಂಬಂಧಪಟ್ಟ ಕಾರ್ಖಾನೆಗಳ ಮೇಲ್ವಿಚಾರಕ ರಾಗಿರತಕ್ಕವರು ಅವರು ಪ್ರಧಾನ ಮಂತ್ರಿಯವರೇ ಆಗಿರಲಿ ಸ್ಟೀಫನ್‌ರವರೇ ಆಗಿರಲಿ ಅಥವಾ ಯಾರೇ ಮಂತ್ರಿಗಳಾಗಿರಲಿ ಅವರುಗಳು ಈ ಕೈಗಾರಿಕಾ ವಿವಾದ ಬಂದಾಗ As a Labour Minister of the State. you have every right to say that they are no better than a party of the management. That is all.. ಆಗ ನಾವು ಏನು ಮಾಡಬೇಕು? ಮೇನೇಜ್‌ಮೆಂಟ್ ನವರನ್ನು ಕರೆಸುತ್ತೇವೆ. ಕಾರ್ಮಿಕ ಮುಖಂಡರನ್ನು ಕರೆಸುತ್ತೇವೆ. ಇಬ್ಬರನ್ನೂ ಕೇಳುತ್ತೇವೆ. ನಮ್ಮ ದೃಷ್ಟಿಯಲ್ಲಿ ನಮ್ಮ ಸರ್ಕಾರ ಮಾಡಬೇಕಾದುದು ಯಾವುದು ಸೂಕ್ತ ಕಾಣುತ್ತದೆ ಅದನ್ನು ಉಭಯತ್ರರಿಗೂ ಹೇಳಬೇಕಾಗುತ್ತದೆ. ಒಂದು ವೇಳೆ ಅವರುಗಳು ಒಪ್ಪಲಿಲ್ಲವೆಂದು ಹೇಳಿದರೆ ನಂತರ ಕಾನೂನು ಇದೆ. ಕಾನೂನು ಏನು ಹೇಳುತ್ತದೆಂದರೆ, ಕನ್ಸಿಲಿಯೇಷನ್ ಫೇಲ್ಯೂರ್ ಆದರೆ ಉಳಿದಿರ ತಕ್ಕದ್ದು ಮುಂದಿನ ದಾರಿ ಏನು? Reference to the Court, ಲೇಬರ್ ಡಿಸ್‌ಪ್ಯೂಟ್‌ಗೆ ಸ್ಪೆಷಲ್ ಕೋರ್ಟ್ ಇವೆ. ನಮ್ಮ ರಾಜ್ಯದಲ್ಲೂ ಅವು ಇವೆ. ಆಗ ನೀವು ಅಲ್ಲಿಗೆ ರೆಫರ್ ಮಾಡ ಬಹುದು. ಅದನ್ನು ಮಾಡುವಾಗ ಒಂದು ಮಾತನ್ನು ಹೇಳಬಹುದು ನಾನು ಇಲ್ಲಿ ಪಾಠ ಹೇಳುವುದಕೆ ಹೋಗುವುದಿಲ್ಲ ಈ ಬಗ್ಗೆ ನನಗೆ ಏನೇನು ವಿಷಯಗಳು ತಿಳಿದಿವೆ ಅದನ್ನು ಹೇಳುತ್ತಿದ್ದೇನೆ. ಇವು ಗಳನ್ನು ತಿಳಿದುಕೊಂಡು ಸರ್ಕಾರ ಈ ಬಗ್ಗೆ ಶಕ್ತಿಯುತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿ ಎನ್ನುವ ಆಸೆಯಿಂದ ಹೇಳುತ್ತಿದ್ದೇನೆ.

MR SPEAKER.—I do not think that you should take it so seriously The Minister used it in a lighter vein.

SRI D. DEVARAJ URS.—I am not taking any objection. I am trying to point out to strengthen the hands of the State Government I am trying to point out certain things which according to statutes

and rules, come within the purview of the State Government and what authority the State Government have got.

SRI R. GUNDU RAO.—The State Government know its authority. ಮಾನ್ಯ ಮಂತ್ರಿಗಳು ನಾನು ಅಧಿಕಾರ ವಹಿಸಿಕೊಂಡು ೩-೪ ದಿವಸ ಆಯಿತು ಎಂದು ಹೇಳಿದ್ದನ್ನೇ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಹಾಗೆ ಹೇಳತಕ್ಕದ್ದು ಸ್ವಾಭಾವಿಕ. ಆದರಲ್ಲಿ ಏನು? ಸರ್ಕಾರಕ್ಕೆ ವಿಚಾರ ಗೊತ್ತಿದೆ. ಲೇಬರ್ ಮಂತ್ರಿಗಳಿಗೆ ಏನು ಅಧಿಕಾರ ಇದೆ, ಕಾರ್ಯದರ್ಶಿಯವರಿಗೆ ಏನು ಅಧಿಕಾರ ಇದೆ, ಲೇಬರ್ಸ್‌ಗೆ ಏನು ಅಧಿಕಾರ ಇದೆ, ಮಂತ್ರಿಗಳಿಗೆ ಏನು ಅಧಿಕಾರ ಇದೆ ಎಂಬುದೆಲ್ಲಾ ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ, ನಾನು ಆ ಇಲಾಖೆಯನ್ನು ಕೈಗೆತ್ತಿ ಕೊಂಡು ೩ ದಿನಗಳಾದವು ಎಂದು ಹೇಳುವುದು ಸ್ವಾಭಾವಿಕ. ವಿರೋಧ ಪಕ್ಷದ ನಾಯಕರು ಹೇಳುವು ದಕ್ಕೆ ರಿಲವೆನ್ಸ್ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅವರ ದೃಷ್ಟಿಯಿಂದಲೇ ರಿಲವೆನ್ಸ್ ಇದೆಯಲ್ಲಾ. ರಿಲವೆನ್ ಇಲ್ಲಾ ಎಂದಿದ್ದರೆ......

ಶ್ರೀ ಆರ್. ಗುಂಡೂರಾವ್.—ಆ ವಿಷಯಕ್ಕೆ ಇನ್ನೊಂದು ನಿಲುವಳಿ ಸೂಚನೆ ತರಲಿ.

ಶ್ರೀ ಡಿ. ದೇವರಾಜ ಅರಸ್.—ಗುಂಡು ಹೊಡೆದದ್ದು ಏತಕ್ಕೆ ? ನಿಮಗೆ ರಿಲವೆನ್ಸ್ ಗೊತ್ತಾಗಲಿಲ್ಲ. ನಿಮಗೆ ಗೊತ್ತಿಲ್ಲದಿದ್ದರೆ ಬಿಟ್ಟುಬಿಡಿ. ನೀವು ತಿಳಿದಿರುವುದೇ ಸರಿ ಎಂದು ಇಟ್ಟುಕೊಂಡುಬಿಡಿ. Please allow me to give my reasons as to why such a situation has taken place in this State.

SRI KAGODU THIMMAPPA.—Let it be consistent at this stage.

ಅಧ್ಯಕ್ಷರು.—ನಾವು ವಿಷಯವನ್ನು ಆಳವಾಗಿ ಪ್ರಸ್ತಾಪ ಮಾಡತಕ್ಕ ಸಮಯದಲ್ಲಿ ತಮಗೆ ಹೇಳುವು ದಕ್ಕೆ ಅವಕಾಶ ದೊರೆಯುತ್ತದೆ. ತಾವು ಈಗ ಬಹಳ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ನಾನು ಮೊದಲೇ ತಮಗೆ ಅರಿಕೆ ಮಾಡಿಕೊಂಡೆ, ನಾನು ಡಿಮ್ಯಾಂಡ್ಸ್ ಬಗ್ಗೆ ಮಾತನಾಡಲಿಕ್ಕೆ ಹೋಗಿಲ್ಲ, ಪೋಲೀಸ್ ಫೈರಿಂಗ್ ವಿಚಾರ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ನಾನು ಅದನ್ನೇ ಹೇಳುತ್ತಾ ಇರುವುದು, ಬಹುಶಃ ಈಗ ತಾವು ವಿವರವಾಗಿ ಏನು ಹೇಳುತ್ತಿದ್ದೀರೋ ಅದು ಅನಾವಶ್ಯಕ ಎಂದು ನನಗೆ ಕಾಣುತ್ತದೆ. ಕಾರಣ ತಮ್ಮ ಹೇಳಿಕೆ ಕನ್‌ಸೆಂಟ್ ಪಾಯಿಂಟ್‌ಗೆ ಮಾತ್ರ ಸಂಬಂಧಿಸಿದ್ದಾಗಿರಬೇಕು. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ವಿಷಯದಲ್ಲಿ ಬಹುಪಾಲು ಭಾಗ ಈ ಅಜೆಂಡಾದ ಮೊದಲನೇ ಭಾಗದ ವ್ಯಾಪ್ತಿಯಲ್ಲೇ ಬರುತ್ತದೆ ಎನ್ನುವುದನ್ನು ಒಪ್ಪಿಕೊಂಡೇ ನಾನು ಸ್ವಲ್ಪ ಮಾತನಾಡಲು ತಮಗೆ ಅವಕಾಶ ಕೊಟ್ಟೆ.

ಎರಡನೆಯದಾಗಿ ತಾವು ಈಗ ಕೇಳತಕ್ಕಂಥಾ ಪ್ರಶ್ನೆ ಇದಕ್ಕೆ ಅನುಮತಿ ಕೊಡತಕ್ಕಂಥಾ ಪ್ರಶ್ನೆ ಬರುತ್ತದೆ. ಅದು ಸಮರ್ಥನೀಯವೇ ಅಲ್ಲವೇ ಅನ್ನುವ ಪ್ರಶ್ನೆ ಬರುವುದರಿಂದ ಅದಕ್ಕೆ ಮಾತ್ರ ಸೀಮಿತ ವಾಗಿರಬೇಕು.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಸಮರ್ಥನೆ ಮಾಡುವುದಕ್ಕೇನೇ, ಅದಕ್ಕೆ ನಿಮ್ಮ ಅನುಮತಿ ಕೇಳುವುದಕ್ಕೇನೇ, ತಾತ್ವಿಕವಾಗಿ ಏನು ವಿಚಾರ ಇದೆ ಅದನ್ನು ಮಾತ್ರ ಹೇಳುತ್ತೇನೆ. ಸ್ವಾಮಿ, ತಮಗೆ ಹೇಳಬೇಕಾದರೆ ಕಾರ್ಮಿಕರ ಸ್ಟ್ರೈಕ್ ಆಯಿತು, ಸ್ಟ್ರೈಕ್ ಆದದ್ದರಿಂದಲೇನೇ ಬಂದ್ ಆಯಿತು. ಆ ಬಂದ್ ಆದದ್ದರಿಂದಲೇನೇ ಪೋಲೀಸ್ ಫೈರಿಂಗ್ ಆದದ್ದು. ಸ್ಟ್ರೈಕ್ ಆಗುವುದು ಅದರ ಅಗತ್ಯ ಇತ್ತೇ ಇಲ್ಲವೇ ಎನ್ನುವುದು ಮುಖ್ಯ ಅಂತವಾಗುವುದಿಲ್ಲ, ಕಾನೂನು ಪ್ರಕಾರ ಇಂತಹ ಸಂದರ್ಭ ಬಂದಾಗ ಮೊಟ್ಟಮೊದಲು ಸರ್ಕಾರದವರು ಕನ್ಸಿಲಿಯೇಷನ್ ಮಾಡುತ್ತಾರೆ, ಆ ಕನ್ಸಿಲಿಯೇಷನ್ ಫೈಲ್ಯೂರ್ ಆದರೆ ಲೇಬರ್ ಕೋರ್ಟಿಗೆ ರೆಫರ್ ಮಾಡುತ್ತಾರೆ, ಆ ಲೇಬರ್ ಕೋರ್ಟಿನಲ್ಲೂ ಅದು ಫೈಲ್ಯೂರ್ ಆದರೆ ಆ ಸ್ಟ್ರೈಕ್ ಅನ್ನು ಬ್ಯಾನ್ ಮಾಡುವುದಕ್ಕೆ ಅವಕಾಶ ಇದೆ. ಹೀಗಿರುವಾಗ ಒಂದು ತಿಂಗಳಾದರೂ ಕೂಡ ರಾಜ್ಯ ಸರ್ಕಾರ ತನ್ನ ಕರ್ತವ್ಯ ಮಾಡಲಿಲ್ಲಾ ಎಂದರೆ ಅದನ್ನೇ ನಾನು ಈಗ ಹೇಳತಕ್ಕಂಥಾ ವಿಚಾರ. ಏತಕ್ಕೆ ಸ್ಟ್ರೈಕ್ ಆಯಿತು, ಹೇಗೆ ಆಯಿತು ಅದನ್ನು ನಾವು ವಿಚಾರ ಮಾಡಬೇಕಾಗಿದೆ. ನಾನು ಮೊದಲೇ

ಹೇಳಿದ ಹಾಗೆ ಇವೆಲ್ಲಾ ಕಾನೂನು ಪ್ರಕಾರ ಮಾಡಿದ ಮೇಲೆ ಮತ್ತೇನಾದರೂ ಕಾರ್ಮಿಕರು ಸ್ಟ್ರೈಕ್ ಮಾಡಿದರೆ ಆಗ ತಪ್ಪು ಕಾರ್ಮಿಕರ ಮೇಲೆ ಬರುತ್ತದೆ. ಅದರಿಂದ ನಮ್ಮ ಸರ್ಕಾರದವರು ಮೊಟ್ಟ ಮೊದಲು ಆ ಬಗ್ಗೆ ಕನ್ಸಿಲಿಯೇಷನ್ ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಹೇಳುವುದು ತಪ್ಪೋ ಅಥವಾ ಸರಿಯೋ ಗೊತ್ತಿಲ್ಲ.........

ಅಧ್ಯಕ್ಷರು.—ನಾನು ತಮಗೆ ಹೇಳುವುದು ರಾಜ್ಯಪಾಲರ ಭಾಷಣ ಬಂದಾಗ ಈ ಬಗ್ಗೆ ವ್ಯಾಪಕವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆಯಲ್ಲಾ.

ಶ್ರೀ ಡಿ. ದೇವರಾಜ ಅರಸ್.—ಈ ಸ್ಟ್ರೈಕ್ ಕಂಟಿನ್ಯೂ ಆದುದ್ದು ತಮಗೆ ಗೊತ್ತೇ ಇದೆ. ನಮ್ಮ ಲೇಬರ್ ಕಮೀಷನರೂ ಸಹ ಅವರು ಕೇಳತಕ್ಕಂಥಾ ಡಿಮ್ಯಾಂಡ್‌ನಲ್ಲಿ ನ್ಯಾಯ ಇದೆ ಎಂದು ಹೇಳಿದ್ದಾರೆ ಎಂದು ನಾನು ಕೇಳಿದ್ದೇನೆ. I do not know. I may be wrong. That is only an information. ಸರ್ಕಾರದ ದೃಷ್ಟಿಯಲ್ಲಿ ಇದು ಸರಿ ಇರಬಹುದು. ಅಥವಾ ಸರಿ ಇಲ್ಲದೇ ಇರಬಹುದು. ಇದನ್ನೇನೂ ಅವರು ಹೇಳಿಕೊಂಡು ಹೋಗಿಲ್ಲಾ. ಆದರೆ ಈ ಸ್ಟ್ರೈಕ್ ಮುಂದುವರೆದಿದ್ದರಿಂದಲೇನೇ ಇದರ ಪರಿಣಾಮವಾಗಿ ಒಂದುದಿವಸ ಬಂದ್ ಆಯಿತು, ಅದರಿಂದ ಗುಂಡು ಹಾರಿಸಬೇಕಾಗಿ ಬಂತು, ಅದರ ಪರಿಣಾಮವಾಗಿ ಬೆಂಗಳೂರಿನಲ್ಲಿ ಮೂರು ಜನ ಸತ್ತಿದ್ದಾರೆ ಎಂದು ಹೇಳಿದ್ದಾರೆ. ನಾನು ಈ ಬಗ್ಗೆ ನಿಲುವಳಿ ಸೂಚನೆ ಏತಕ್ಕೆ ತರಬೇಕಾಯಿತು ಎಂದರೆ, ಇದನ್ನು ಬೇರೆ ರೂಪದಲ್ಲಿ ಏತಕ್ಕೆ ತರಬಾರದು ಅನ್ನುವುದಾಗಲಿ, ಅಥವಾ ರಾಜ್ಯಪಾಲರ ಭಾಷಣದಲ್ಲಿ ಈ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡಬಾರದು ಅನ್ನುವುದಾಗಲಿ ಅಥವಾ ಕಾಲಿಂಗ್ ಅಟೆನ್‌ಷನ್ ಮುಖಾಂತರ ಏತಕ್ಕೆ ತರಬಾರದು ಅನ್ನುವುದಾಗಲಿ ಅಂತ ಹೇಳುವುದಾದರೆ ಅದರ ಬಗ್ಗೆ ಬೇಕಾದರೆ ಓದುತ್ತೇನೆ. ಯಾವುದರಲ್ಲಿ ಇಂತಹ ನಿಲುವಳಿ ಸೂಚನೆ ತರಬೇಕು ಬೇರೆ ರೂಪದಲ್ಲಿ ಇಂತಹ ವಿಷಯಗಳನ್ನು ಏತಕ್ಕೆ ತರಬಾರದು ಅನ್ನುವ ವಿಚಾರವನ್ನು ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು.—ನಾನು ತಮಗೆ ಹೇಳುವುದು ಏನೆಂದರೆ ಈವೊತ್ತಿನ ಸಭೆಯ ಕಾರ್ಯಕಲಾಪದ ಪಟ್ಟಿಯಲ್ಲಿ ಇದಕ್ಕೆ ಸಂಬಂಧಪಟ್ಟಂತೇನೇ ವಿಚಾರಗಳು ಬಂದಿರುವುದರಿಂದ ಇನ್ನು ಇದರ ಬಗ್ಗೆ ವ್ಯಾಪಕವಾಗಿ ಹೇಳುವುದು ಈಗ ಅವಶ್ಯಕ ಇಲ್ಲ ಎಂದು ತಮ್ಮ ಗಮನಕ್ಕೆ ತಂದರೆ ಬಹುಮಟ್ಟಿಗೆ ತಾವು ಒಪ್ಪುತ್ತೀರಿ ಎಂದು ಹೇಳಿದ್ದೇನೆ. ಅಷ್ಟೆ. ತಮಗೆ ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ೧೯೫೫ನೇ ಇಸವಿಯಲ್ಲಿ ಸದಸ್ಯರಾಗಿದ್ದೀರಿ. ಆವಾಗ ವಿರೋಧ ಪಕ್ಷದ ನಾಯಕರೂ ಮತ್ತು ಇತರ ನಾಯಕರೂ ಸಹ ಸೇರಿ ಇಂತಹದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ, ಇಂತಹದೇ ಒಂದು ನಿಲುವಳಿ ಸೂಚನೆಯನ್ನು ತಂದಾಗ ತಮ್ಮ ಗಮನವನ್ನು ಹರಿಸಿರುವುದನ್ನು ನೋಡಿದ್ದೇನೆ. ಇನ್ನು ಅದರ ಹಿಂದೆ ನೋಡಿದರೆ ೧೯೫೦ರಲ್ಲಿ ನೋಡಿದರೆ ಇಂಥಾಹದೇ ಒಂದು ಪ್ರಸಂಗ ಬಂದಾಗ ಅದನ್ನು ನಾಳೆ ನಾಳಿದ್ದರಲ್ಲಿ ಅಂತ ತೆಗೆದುಕೊಳ್ಳುವುದು ಯೋಗ್ಯವೇ ಅಥವಾ ಆ ದಿನದ ಸಭೆಯಲ್ಲಿ ನಿಗದಿಯಾಗಿರತಕ್ಕಂಥಾ ಕಾರ್ಯಕ್ರಮಗಳನ್ನು, ಬಿಟ್ಟು ಅದೇ ದಿನ ತೆಗೆದುಕೊಳ್ಳುವುದು ಯೋಗ್ಯವೇ ಎನ್ನುವ ಪ್ರಶ್ನೆ ಬಂತು, ಈ ವಿಚಾರ ಬೇರೆ ಯಾವ ಸಭೆಯಲ್ಲೂ ಅಲ್ಲ, ಇದೇ ಸಭೆಯಲ್ಲಿ ಆ ವಿಚಾರ ಬಂದು ಆ ಬಗ್ಗೆ ಏನು ತೀರ್ಮಾನ ಮಾಡಿದ್ದಾರೆ ಅದನ್ನು ತಮ್ಮ ಗಮನಕ್ಕೆ ತಂದರೆ ತಮಗೇನಾದರೂ ಅನುಕೂಲವಾದೀತು ಎನ್ನುವ ಒಂದು ದೃಷ್ಟಿಯಿಂದ ಈ ವಿಚಾರವನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದರಲ್ಲಿರುವ ಸಬ್‌ರೂಲ್ ಶಿಗ ಪ್ರಕಾರ ಹೇಳಬೇಕಾದರೆ ಈ ವಿಷಯವನ್ನು ತಾವು ಕಾಲಿಂಗ್ ಅಟೆನ್‌ಷನ್ ಮುಖಾಂತರ ಪ್ರಸ್ತಾಪ ಮಾಡಬಹುದು, ಆ ಬಗ್ಗೆ ಸರ್ಕಾರ ಏನು ಹೇಳುತ್ತದೋ ಕೇಳಬೇಕು. ತಾವು ಈ ಕ್ಷಣದಲ್ಲೇ ಆಗಬೇಕು ಎಂದರೆ ಈಗ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವಾಗ ಅದರಲ್ಲಾದರೂ ಪ್ರಸ್ತಾಪ ಮಾಡಬಹುದು. ತಾವು ಅದಕ್ಕೆ ಬೇಕಾದರೆ ಒಂದು ಅಮೆಂಡ್‌ಮೆಂಟ್ ಕಳುಹಿಸಿ ವಿಷಯ ಪ್ರಸ್ತಾಪ ಮಾಡಬಹುದು. ತಾವು ಈಗ ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ, ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಏನು ಪ್ರಸ್ತಾಪ ಮಾಡುತ್ತಾ ಇದ್ದೀರಿ ಆ ಸಂದರ್ಭದಲ್ಲಿ ಅವುಗಳನ್ನು ಟೀಕೆ ಮಾಡುವುದಷ್ಟೇ ಅಲ್ಲ ತಮ್ಮಲ್ಲಿರತಕ್ಕಂಥಾ ಅಂಕಿಅಂಶಗಳನ್ನು ಮುಂದಿಟ್ಟು ಈ ಸಭೆಯಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಈವೊತ್ತು ಈ ಒಂದು ನಿಲುವಳಿ ಸೂಚನೆ ಏನು ಇದೆ ಸರ್ಕಾರ ತನ್ನ ಕೆಲಸದಲ್ಲಿ ಚ್ಯುತಿ ಮಾಡಿದೆ ಎಂದು ಏನು ತಾವು ಪ್ರಸ್ತಾಪ ಮಾಡುತ್ತಾ ಇದ್ದೀರಿ, ಕನ್ಸಿಲಿಯೇಷನ್ ಮಾಡಿದ್ದೀರಾ ಅನ್ನುವುದಾಗಲಿ ಅಥವಾ ಸ್ಟ್ರೈಕ್, ಬಂದ್ ವಿಷಯದಲ್ಲಾಗಲಿ ಏನು ಪ್ರಸ್ತಾಪ ಮಾಡುತ್ತಾ ಇದ್ದೀರಿ ಫೈರಿಂಗ್ ವಿಚಾರದಲ್ಲಿ ವಿವರವಾಗಿ ಏನು ಪ್ರಸ್ತಾಪ ಮಾಡುತ್ತಾ

ಇದ್ದೀರಿ ಅದು ಈ ಪ್ರ್ಯಾಕ್ಟೀಸಿನಲ್ಲಿ ಬರುವುದಕ್ಕೆ ಅವಕಾಶ ಇಲ್ಲ ಎಂದು ಕಾಣುತ್ತದೆ, ಅದನ್ನೆಲ್ಲಾ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ ಅಥವಾ ಕಾಲಿಂಗ್ ಅಟೆನ್‌ಷನ್ ಮುಖಾಂತರ ತೆಗೆದುಕೊಳ್ಳುವುದಕ್ಕೂ ಸಹ ಅವಕಾಶ ಇದೆ. ಹಾಗಿರುವಾಗ ಈಗ ತಾವು ತಂದಿರುವ ಈ ಒಂದು ನಿಲುವಳಿ ಸೂಚನೆ ಏತಕ್ಕೆ ಬೇಕು ಎಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಎರಡು ವಿಷಯಗಳು ಇವೆ. ಮೊದಲನೆಯದಾಗಿ ಇಂತಹ ವಿಷಯಗಳು ಬಂದಾಗ ಏನು ಮಾಡಬೇಕು ಎನ್ನುವ ವಿಷಯ ತೀರ್ಮಾನವಾಗಿದೆ. ಸ್ಟ್ರೈಕ್ ವಗೈರೆ ಇಂತಹ ವಿಚಾರಗಳು ಇಲ್ಲಿ ಬಂದಾಗ ನಿಲುವಳಿ ಸೂಚನೆ ಅಂತಹ ವಿಷಯಗಳನ್ನು ಕೇಳಬಾರದು, ಅದಕ್ಕೆ ಸಂಬಂಧಪಡುವುದಿಲ್ಲ ಅಂತ ಇದೆ. ಏತಕ್ಕೆಂದರೆ ಇವೆಲ್ಲಾ ಲಾ ಅಂಡ್ ಆರ್ಡರ್‌ಗೆ ಸಂಬಂಧಪಟ್ಟದ್ದು ಎನ್ನುವ ಪ್ರಶ್ನೆ ಬರುತ್ತದೆ. ಆದುದರಿಂದ ಇಂತಹ ವಿಷಯಗಳು ನಿಲುವಳಿ ಸೂಚನೆಗೆ ಒಳಪಡುವುದಿಲ್ಲ ಹಾಗೂ ಇದನ್ನೇ ಮುಂದುವರೆಸಿಕೊಂಡು ಹೋಗ ತಕ್ಕದು ಸರಿಯಲ್ಲ. ಈಗ ಸಭೆಯ ಮುಂದಿರತಕ್ಕಂಥಾ ಪ್ರಶ್ನೆ ಈ ಒಂದು ನಿಲುವಳಿ ಸೂಚನೆಗೆ ಕನ್‌ಸೆಂಟ್ ಕೊಡಬೇಕೇ ಇಲ್ಲವೇ ಎನ್ನುವುದು. ಈ ತರಹದೇ ಒಂದು ಪ್ರಸಂಗ ಹಿಂದೆ ಬಂದಾಗ ಅದರಲ್ಲಿ ಏನು ತೀರ್ಮಾನ ಕೊಟ್ಟಿದ್ದಾರೆ ಅನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆ ಪುಸ್ತಕ ಇಲ್ಲಿ ಇದೆ. ತಾವು ಅದನ್ನು ಓದಿ ಎಂದು ಹೇಳಿದರೆ ಓದುತ್ತೇನೆ. ಆದರೆ ಅದನ್ನು ಓದಿದರೆ ಈ ಸಭೆಯ ಕಾರ್ಯಕಲಾಪಗಳು ಸ್ವಲ್ಪಮಟ್ಟಿಗೆ ವ್ಯರ್ಥವಾಗಬಹುದು. ಬೇಕಾದರೆ ತಮಗೇನೇ ಆ ಪುಸ್ತಕವನ್ನು ಕೊಡುತ್ತೇನೆ, ಅದನ್ನು ಓದಿದರೆ ತಮಗೆ ಸ್ವಲ್ಪ ಅನುಕೂಲವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಆ ಪುಸ್ತಕದಲ್ಲಿರುವುದನ್ನು ಓದಿದ ನಂತರ ಹೇಳುತ್ತೇನೆ. ಅಲ್ಲದೆ ಈ ಬಗ್ಗೆ ಕನ್‌ಸೆಂಟ್ ಕೊಡತಕ್ಕಂಥಾ ಜವಾಬ್ದಾರಿಯೂ ಕೂಡ ನನ್ನ ಮೇಲೆ ಇದೆ. ಆದುದರಿಂದ ಮೊದಲು ಅದನ್ನು ಓದಿಕೊಂಡರೆ ತಮಗೆ ಅನುಕೂಲವಾಗಬಹುದು.

ಶ್ರೀ ಡಿ. ದೇವರಾಜ ಅರಸ್.—ಆ ಪುಸ್ತಕವನ್ನು ನನ್ನ ಕೈಯಲ್ಲೇ ಕೊಡಿ ನಾನು ಓದಿಕೊಳ್ಳುತೇನೆ. ನಾನು ಇದರ ಬಗ್ಗೆ ನಾಲ್ಕು ಮಾತುಗಳನ್ನು ಮಾತ್ರ ಹೇಳುತ್ತೇನೆ. ೧೯೫೭ನೇ ಇಸವಿಯಲ್ಲಿ ಏನು ನಡೆದಿದೆ ಅದನ್ನು ತಾವು ಹೇಳಿದ್ದೀರಿ.

MR. SPEAKER.—The same thing happaned when a firing was resorted to in KGF.

ಶ್ರೀ ಡಿ. ದೇವರಾಜ ಅರಸ್.—ಆ ಸನ್ನಿವೇಶದಲ್ಲಿ ಏನು ತೀರ್ಮಾನವಾಗಿದೆ ಅನ್ನುವುದನ್ನು ತಾವು ಹೇಳಿದ್ದೀರಿ. ಅದನ್ನು ಯೋಚನೆ ಮಾಡೋಣ. ತಾವು ಅದನ್ನು ಹೇಳಿರುವುದರಲ್ಲಿ ನನ್ನ ಅಭ್ಯಂತರ ಇಲ್ಲ. ಈಗ ತಾವು ಹೇಳಿದ ಎರಡು ವಿಚಾರಗಳನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಮೊದಲನೆಯದಾಗಿ ರಾಜ್ಯಪಾಲರ ಭಾಷಣದ ಮೇಲೆ ಭಾಷಣ ಆಗುವುದು ಇದೆ ಆವಾಗ ಪ್ರಸ್ತಾಪ ಮಾಡಬಹುದು ಎಂದು. ಎರಡನೆಯದಾಗಿ ಈಗಾಗಲೇ ಈ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಇವೆ ಅಂತ ಹೇಳಿದ್ದೀರಿ. ಅದು ಈ ದಿನದ ಅಜೆಂಡಾದಲ್ಲಿರುವುದರಿಂದ ಆವಾಗ ಇದನ್ನು ಪ್ರಸ್ತಾಪ ಮಾಡಬಹುದು ಅಂತ ಹೇಳಿದ್ದೀರಿ ಆದರೆ ಈ ದಿನದ ಈ ಕಾಲಿಂಗ್ ಅಟೆನ್‌ಷನ್‌ಗೆ ಈಗ ನಾನು ಕಳುಹಿಸಿರತಕ್ಕಂಥಾ ಒಂದು ನಿಲುವಳಿ ಸೂಚನೆಗೆ ಅಡ್ಡಿ ಬರುವುದಿಲ್ಲ.

ನಾನು ಈ ಬಗ್ಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. Calling Attention cannot go on for days or hours. It may go on for half an hour or at the most an hour.

ಒಬ್ಬ ಸದಸ್ಯರು.—ಅದಕ್ಕೇನೂ ಟೈಂ ಲಿಮಿಟ್ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಕಾನೂನು ಪ್ರಕಾರ ಅದಕ್ಕೆ ಟೈಂ ಲಿಮಿಟ್ ಇದೆ. ಟೈಂ ಲಿಮಿಟ್ ಇಲ್ಲದೆ ಆ ರೀತಿ ಮಾತನಾಡಿಕೊಂಡು ನಾವೆಲ್ಲಾ ಬಂದಿದ್ದೇವೆ ಅಷ್ಟೆ. ಟೈಂ ಲಿಮಿಟ್ ಇದೆ ಎಂದು ಅಧ್ಯಕ್ಷರು ಹೇಳಿದಾಗ ಅದನ್ನು ನಾವು ವಿರೋಧ ಮಾಡುವುದಕ್ಕಾಗುವುದಿಲ್ಲ. ಟೈಂ ಲಿಮಿಟ್ ಇದೆ.

ಇನ್ನು ಎರಡನೆಯದಾಗಿ ರಾಜ್ಯಪಾಲರ ಭಾಷಣದ ಮೇಲೆ ಈ ಬಗ್ಗೆ ವಿವರವಾಗಿ ಹೇಳಬಹುದು ಎಂದು ನನಗೂ ಗೊತ್ತಿದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಕೇವಲ ಇದು ಒಂದೇ ವಿಷಯದಲ್ಲಿ

ಸೀಮಿತ ಮಾಡುವುದಕ್ಕಾಗುವುದಿಲ್ಲ. ಬೇಕಾದಷ್ಟು ವಿಚಾರಗಳು ಇವೆ. ಅವನ್ನೆಲ್ಲಾ ಹೇಳಬೇಕಾಗುತ್ತದೆ. ಈ ಅಡ್ಜರ್ನಮೆಂಟ್ ಮೋಷನ್ ಏತಕ್ಕೆ ಬೇಕಾಗಿತ್ತು ಎನ್ನುವುದಕ್ಕೆ ಅದಕ್ಕೇನಾದರೂ ಒಂದು ಜಸ್ಟಿಫಿಕೇಷನ್ ಇರಬೇಕಲ್ಲಾ.

ಅಧ್ಯಕ್ಷರು.—ಈವೊತ್ತಿನ ಕಾರ್ಯಕ್ರಮದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥಾ ಸನ್ನಿವೇಶ ಇರುವಾಗ ಅದರಲ್ಲೂ ಈ ವಿಷಯವನ್ನು ಪ್ರಸ್ತಾಪ ಮಾಡಬಹುದು, ಅಲ್ಲದೇ ಇದೇ ವಿಷಯ ಇನ್ನೊಂದು ರೂಪದಲ್ಲಿ ಅಂದರೆ ಕಾಲಿಂಗ್ ಅಟೆನ್‌ಷನ್ ರೂಪದಲ್ಲಿ ಬಂದಿದೆ. ಅದರಲ್ಲಾದರೂ ಕೂಡ ಈ ವಿಷಯವನ್ನು ಸ್ಪಷ್ಟವಾಗಿ ತರಬಹುದಲ್ಲಾ.

SRI D. DEVARAJA URS.—I totally rule out that Calling Attention has nothing to do with the adjournment motion. I again and again affirmatively say I can agree to an extent so far as the Governor's Address is concerned.......

11-00 A.M.

MR. SPEAKER.—Matters of strike and matters pertaining to law and order should not be encouraged to be raised by means of an adjournment Motion. That is the Ruling.

SRI D. DEVARAJ URS.—It is not a mere strike that I am discussing.

MR. SPEAKER.—The sum and substance of the Ruling is that the matters of strikes and of law and order should not be allowed to be raised as Adjournment Motions because they are the routine matters of administration. That is the Ruling.

ಶ್ರೀ ಡಿ. ದೇವರಾಜ ಅರಸ್.—ಈ ರೂಲಿಂಗ್‌ನ ಜೊತೆಗೆ ೧೯೫೩ ರಿಂದ ೧೯೭೦ ರವರೆಗೆ ಏನೇನಾಗಿದೆ ಎನ್ನುವುದನ್ನೂ ನೋಡಬೇಕಾಗುತ್ತದಲ್ಲವೆ ?

ಅಧ್ಯಕ್ಷರು.—೧೯೭೦ನೇ ಇಸವಿಯಲ್ಲಿ ಶ್ರೀ ಬೊಮ್ಮಾಯಿಯವರು ಹುಬ್ಬಳಿ-ಧಾರವಾಡದಲ್ಲಾದ ಘಟನೆ ಬಗ್ಗೆ ನಿಲುವಳಿ ಸೂಚನೆ ತಂದಿದ್ದರು. I was very cautiously going through his own statement. On 25th February, 1970 after the Question Hour, Hon. Member Sri S. R Bammai raised an Adjournment Motion regarding the incidents in Hubli and Dharwad and the lathi charge, and sought the permission of the Hon. Speaker to make a few remarks for admission of the Motion. The Speaker's ruling was :

> "It is a well known proposition that law and order cannot be the basis for an Adjournment Motion. Therefore, I cannot admit it and give my consent to the Motion. Secondly, the Members have an opportunity to speak on the boundary question while participating in the debate before the House. Therefore, I am sorry I cannot give consent to the motion."

ಈ ರೂಲಿಂಗ್‌ನಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಲಾಗಿದೆ. ಆದರೆ, ತಮ್ಮ ಹತ್ತಿರ ಕೊಟ್ಟಿರುವ ೧೯೫೩ನೇ ಇಸವಿಯಲ್ಲಿ ನೀಡಲಾದ ರೂಲಿಂಗ್‌ನಲ್ಲಿ ಇದನ್ನು ಹೆಚ್ಚು ವ್ಯಾಪಕವಾಗಿ ಪ್ರಸ್ತಾಪ ಮಾಡಲಾಗಿದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಉದಾಹರಿಸುತ್ತಿರುವ ಪ್ರಸಂಗದಲ್ಲಿ ಯಾರೂ ಸತ್ತಿಲ್ಲ. ಹುಬ್ಬಳ್ಳಿಯಲ್ಲಿ ಬರೀ ಲಾಠಿ ಚಾರ್ಜ್ ಮಾಡಲಾಗಿದೆ.

ಅಧ್ಯಕ್ಷರು.—ಕಾನೂನು ಮತ್ತು ಶಿಸ್ತುಪಾಲನೆ ವಿಚಾರ ಎಂದು ಹೇಳಿವೆ.

SRI D. DEVARAJ URS.—Lathi charge could be resorted to by the Police ; even tear gas will be done. Some times firing will take place. Here is a situation where it is not a question of a mere Lathi Charge. It is also not merely a question of tear-gas. But it is a case of firing and three people died out of whom, one innocent doctor who had nothing to do either with the strike or the Chaluvali, has been shot dead. ತಾವು ಉದಾಹರಿಸಿದ ಪ್ರಸಂಗದ ನಡವಳಿಕೆಗಳಿಗೆ ಮಾನ್ಯತೆ ಕೊಡಬಾರದೆಂದು ನಾನು ಹೇಳುತ್ತಿಲ್ಲ. ಆದರೆ, They do not stand on all fours with the present situation which we are discussing. ಇಲ್ಲಿ ವಿಚಾರ ಬೇರೆ ಇದೆ. ಆ ಕಾರಣದಿಂದಲೇ ಇದಕ್ಕೆ ಹೆಚ್ಚು ಮಹತ್ವ ಬಂದಿದೆ. ಮಹತ್ವವೇನೆಂದರೆ, ಇದು ಅತ್ಯಂತ ಪ್ರಾಮುಖ್ಯತೆ ಪಡೆದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಾದ ವಿಚಾರ. ಈ ಘಟನೆಯಲ್ಲಿ ಸತ್ತವರಲ್ಲಿ ಒಬ್ಬರು ನಮಗೆ ಚೆನ್ನಾಗಿ ಗೊತ್ತಿರುವ ವೈದ್ಯ ಶ್ರೀನಿವಾಸ್. ಲಾಠಿ ಚಾರ್ಜ್‌ನಿಂದ ಏಟು ತಿಂದ ಜನರನ್ನು ಚಿಕಿತ್ಸೆ ಮಾಡಿ ಬರುತ್ತಿದ್ದ ಡಾ॥ ಶ್ರೀನಿವಾಸ್ ಅವರಿಗೆ ಗುಂಡು ಹಾರಿಸಲಾಗಿದೆ. ಅವರು ಇದ್ದ ಜಾಗಕ್ಕೂ ಗಲಭೆ ನಡೆಯುತ್ತಿದ್ದ ಎಚ್.ಎ.ಎಲ್. ಪ್ರದೇಶಕ್ಕೂ ಸಂಬಂಧವಿಲ್ಲದಿದ್ದರೂ ಪೋಲಿಸರ ಗುಂಡಿನಿಂದ ಅವರು ಮರಣ ಹೊಂದಿದ್ದಾರೆ. ಈ ವಿಚಾರದಲ್ಲಿ ಏನು ಮಾಡಲಾಗಿದೆ? ಇದನ್ನು ಗಂಭೀರ ವಿಚಾರವೆಂದು ಸರ್ಕಾರವೇ ಪರಿಗಣಿಸಿ ನ್ಯಾಯಾಂಗ ತನಿಖೆಗೆ ಆದೇಶ ನೀಡಬಹುದಾಗಿತ್ತಲ್ಲವೆ ? ಹಾಗೆ ಮಾಡಿದ್ದರೆ, ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾದ ಪ್ರಮೇಯವೇ ಇರುತ್ತಿರಲಿಲ್ಲ. ಈ ಘಟನೆ ಬಗ್ಗೆ ಮ್ಯಾಜಿಸ್ಟ್ರಿಯಲ್ ಎನ್‌ಕ್ವಯರಿ ಮಾಡಲಾಗುವುದೆಂದು ಹೇಳಲಾಗಿದೆ. ಅಂದರೆ, ಜಿಲ್ಲಾಧಿಕಾರಿ, ಅಥವಾ ಜಿಲ್ಲಾ ನ್ಯಾಯಾಧೀಶರು ಅಥವಾ ಸಬ್ ಡಿವಿಜನಲ್ ಆಫೀಸರ್ ಅವರು ಈ ಘಟನೆಯನ್ನು ತನಿಖೆ ಮಾಡಬಹುದಾಗಿದೆ. ಇಂತಹ ಒಂದು ಪ್ರಕರಣದಲ್ಲಿ ಈ ರೀತಿ ಮಾಡಿದರೆ ಅದರಿಂದ ನ್ಯಾಯ ದೊರೆಯುತ್ತದೆಯೆ ? ನನಗೆ ಅನುಮಾನವಿದೆ. ಮಧುಗಿರಿ ಪ್ರಕರಣ ತಮಗೆ ಜ್ಞಾಪಕವಿಲ್ಲವೆ ? ಅದರ ಬಗೆ ನ್ಯಾಯಾಂಗ ತನಿಖೆ ಮಾಡಲಿಲ್ಲವೆ ?

ಅಧ್ಯಕ್ಷರು.—ನ್ಯಾಯಾಂಗ ತನಿಖೆ ಮಾಡಿಸುವುದರ ಸಲುವಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ತಮಗಿಲ್ಲ. ಹಾಗೆ ತರಬಾರದು ಅಥವಾ ಪ್ರಸ್ತಾಪ ಮಾಡಬಾರದೆಂದು ನಾನು ಹೇಳಲಿಲ್ಲ. ನಾನು ಏನು ಹೇಳಿದೆ ಎಂದರೆ, ಈಗ ತಕ್ಷಣದಲ್ಲಿಯೇ ಗಮನ ಸೆಳೆಯುವ ಸೂಚನೆ ಬರುತ್ತದೆ. ಅದರ ನಂತರ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ನಿರ್ಣಯ ಬರುತ್ತದೆ. ಆಗ ಈ ವಿಚಾರವಾಗಿ ವ್ಯಾಪಕ ಚರ್ಚೆ ಮಾಡಬಹುದು ಎಂದು. ಆದುದರಿಂದ, ಈ ಹಂತದಲ್ಲಿ ನಾನು ಉದಾಹರಿಸಿದ ರೂಲಿಂಗ್ ಶೇಕಡ ೧೦೦ರಷ್ಟು ಅನ್ವಯಿಸುತ್ತದೆ.

SRI D. DEVARAJ URS.—It applies cent percent only to the situations of that nature. It cannot apply to a situation of this nature. ಇಲ್ಲಿ ಹೆಚ್ಚು ಗಂಭೀರತೆ ಇದೆ. ಮಧುಗಿರಿ ಪ್ರಕರಣದಲ್ಲಿ ನ್ಯಾಯಾಂಗ ತನಿಖೆಯಾಗಿದೆಯೋ ಇಲ್ಲವೋ ? ಅದು ತಮಗೆ ಜ್ಞಾಪಕವಿದೆ ಎಂದು ಭಾವಿಸುತ್ತೇನೆ. ಆಗ ತಾವು ಈ ಭಾಗದಲ್ಲಿ ಕುಳಿತಿದ್ದಿರಿ ಎಂದು ಕಾಣುತ್ತದೆ. ಆಗ ಬಹಳಷ್ಟು ಗಲಾಟೆಯಾಯಿತು. ಸರ್ಕಾರವೂ ಒಪ್ಪಿತು. ನ್ಯಾಯಾಂಗ ತನಿಖೆಯಾಯಿತು. ಆದರೆ, ಅದರ ವರದಿ ಏನಾಯಿತೆನ್ನುವ ಪ್ರಶ್ನೆ ಈಗ ಬೇಡ.

ಶ್ರೀ ಕಾಗೋಡು ತಿಮ್ಮಪ್ಪ.—ಆಗ ಮುಷ್ಕರ ನಡೆಯಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಗ ರೈತರು ಕಬ್ಬು ಕೊಡುವುದಿಲ್ಲವೆಂದು ಮುಷ್ಕರ ಹೂಡಿದ್ದರು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿ ಶ್ರೀ ರಾಮ ರಾಯರು ಗೃಹಮಂತ್ರಿಗಳಾಗಿದ್ದಾಗ ಮಧುಗಿರಿ ಪ್ರಕರಣ ನಡೆದು ನ್ಯಾಯಾಂಗ ತನಿಖೆಯಾದ ಪ್ರಸಂಗ ಇದೆ.

ಅಧ್ಯಕ್ಷರು.—ಅದನ್ನು ಬೇಡವೆಂದು ನಾನು ಹೇಳಲಿಲ್ಲ. ತಮ್ಮ ವಿಚಾರವನ್ನು ಇನ್ನೂ ವ್ಯಾಪಕ ವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿರುವ ಸಮಯದಲ್ಲಿ ಗೊತ್ತಾದ ಕಾರ್ಯಕ್ರಮವನ್ನು ಮುಂದಕ್ಕೆ ಹಾಕಿ ಇದನ್ನು ತೆಗೆದುಕೊಳ್ಳುವುದು ಸೂಕ್ತವೇ ಎನ್ನುವುದನ್ನು ತಾವೇ ಹೇಳಬೇಕಾಗುತ್ತದೆ. ಈ ದೃಷ್ಟಿ ಯಿಂದಲೇ...

ಶ್ರೀ ಡಿ. ದೇವರಾಜ ಅರಸ್.—ನಿಲುವಳಿ ಸೂಚನೆಯನ್ನು ಸಮರ್ಥನೆ ಮಾಡಲು ನಾನು ಮನುಷ್ಯ ಪ್ರಯತ್ನ ಮಾಡುತ್ತೇನೆ. If there is apriori undertaking or an idea that this cannot be admitted, what is it that I can do ?

ಅಧ್ಯಕ್ಷರು.—ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೆ ಭಾವಿಸಬಾರದು, ತಾವು ಸಮರ್ಥನೆ ಮಾಡುವುದಕ್ಕೆ ಅನುಕೂಲವಾಗಲೆಂದೇ ಆ ರೂಲಿಂಗನ್ನು ತಮಗೆ ಕೊಟ್ಟಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಇನ್ನು ಹೇಗೆ ಸಮರ್ಥನೆ ಮಾಡಲಿ ? ನಮ್ಮ ನಿಯಮಗಳ ಪುಸ್ತಕ ದಲ್ಲಿ ನಿಲುವಳಿ ಸೂಚನೆಯ ಅಧ್ಯಾಯವೊಂದಿದೆ. ಇದನ್ನು ವಿಶೇಷ ಸಂದರ್ಭದಲ್ಲಿ ಉಪಯೋಗ ಮಾಡ ಬೇಕಾಗುತ್ತದೆ. ಅಲ್ಲಿರುವ ವಿಷಯಗಳ ವ್ಯಾಪ್ತಿಯೊಳಗೆ ನಾವು ನೀಡಿರುವ ನಿಲುವಳಿ ಸೂಚನೆ ಇದೆ, ಎಲ್ಲಕ್ಕಿಂತ ಮುಖ್ಯವಾಗಿ, ಈಗ ಸತ್ತಿರುವವರು ಯಾರ ಆಸ್ತಿಗೋ ಬೆಂಕಿ ಹಾಕುತ್ತಿದ್ದವರಲ್ಲ ಅಥವಾ ಯಾರನ್ನೋ ಕೊಲೆ ಮಾಡುತ್ತಿದ್ದವರಲ್ಲ. ಸತ್ತಿರುವ ಮೂರು ಜನಗಳ ಪೈಕಿ ಒಬ್ಬರು ಖಚಿತವಾಗಿ ನಮಗೆ ತಿಳಿದ ಹಾಗೆ, ಈ ಘಟನೆಗಳಿಗೆ ಯಾವ ಸಂಬಂಧವೂ ಇಲ್ಲದ ಮತ್ತು ಗಲಭೆಗಳಲ್ಲಿ ಗಾಯಗಳಾ ದವರಿಗೆ ಚಿಕಿತ್ಸೆ ನೀಡಿ ಹೊರಬರುತ್ತಿದ್ದ ವೈದ್ಯರಿಗೆ ಗುರಿಯಿಟ್ಟು ಗುಂಡು ಹೊಡೆದಿದ್ದಾರೆ. ಆದುದರಿಂದ ವಿಚಾರಣೆ ನ್ಯಾಯ ಬದ್ಧವಾದ ರೀತಿಯಲ್ಲಿ ಮತ್ತು ನಿಷ್ಪಕ್ಷಪಾತವಾಗಿ ನಡೆಯುವ ಅಗತ್ಯವಿರುವುದರಿಂದ ನಿಲುವಳಿ ಸೂಚನೆ ಮೂಲಕ ಅದನ್ನು ಸಭೆಯ ಮುಂದೆ ಪ್ರಸ್ತಾಪ ಮಾಡಬೇಕಾದ್ದು ಬಹಳ ಅಗತ್ಯವಿದೆ. ನಮಗಿರುವ ಅಸ್ತ್ರ ಇದೊಂದೇ. ಅದು ಬಿಟ್ಟು, ಇಲ್ಲ, ಮತ್ತೊಂದು ರೂಪದಲ್ಲಿ ಪ್ರಸ್ತಾಪ ಮಾಡಿ ಎಂದು ಕೇಳಿದರೆ, ನಾನು ಹೇಳುತ್ತೇನೆ :

MR. SPEAKER.—I was refering to the conventions that have been there.

SRI D. DEVARAJ URS.—There are conventions of both the types. ತಾವು ಒಂದು ಪ್ರಸಂಗವನ್ನು ನನ್ನ ಗಮನಕ್ಕೆ ತಂದಿರಿ. ಹಾಗೆಯೇ, ನಾನೊಂದು ಪ್ರಸಂಗವನ್ನು ತಮ್ಮ ಗಮ ನಕ್ಕೆ ತಂದಿದ್ದೇನೆ. ಮಧುಗಿರಿ ಪ್ರಕರಣವನ್ನು ನಾನು ಉದಾಹರಿಸಿದ್ದೇನೆ. ಯಾವುದೋ ಒಂದು ಕಾಲದಲ್ಲಿ ಒಂದು ರೂಲಿಂಗ್ ಕೊಟ್ಟಾಕ್ಷಣ ಅದು ಎಲ್ಲಾ ಕಾಲಕ್ಕೂ ಅನ್ವಯವಾಗುವುದಿಲ್ಲವೆನ್ನುವುದು ಅದರಿಂದಲೇ ಸ್ಪಷ್ಟವಾಗುತ್ತದೆ. Depending on the merit of the case if you take a different decision, surely the House cannot blame the Speaker that the Speaker is going out of the way or he is not following or honouring the previous conventions. ಇದನ್ನು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿ ಯಿಂದ ಇವತ್ತಿನ ದಿವಸ ಇರುವ ಸನ್ನಿವೇಶ ಬಹಳ ಕೆಟ್ಟ ಪರಿಣಾಮವನ್ನುಂಟು ಮಾಡುವುದಾಗಿದೆ. ಈ ಸನ್ನಿವೇಶ ನಮ್ಮ ರಾಜ್ಯದಲ್ಲಿ, ವಿಶೇಷವಾಗಿ ಬೆಂಗಳೂರಿನಲ್ಲಿ ಇದೆ. ಅದರಲ್ಲೂ ಬೆಂಗಳೂರು ನಗರದ ಐದು ಕಾರ್ಖಾನೆಗಳ ಸ್ಟ್ರೈಕ್ ನಡೆಯುತ್ತಿರತಕ್ಕಂಥದ್ದು ಕರ್ನಾಟಕದ ಚರಿತ್ರೆಯಲ್ಲಿ ಇದೇ ಪ್ರಥಮ. ಇದು ವರೆಗೂ ಇಂತಹದ್ದು ಆಗಿಲ್ಲ. ಹಿಂದೆ ಐ.ಟಿ.ಐ. ಕಾರ್ಖಾನೆಯ ಕಾರ್ಮಿಕರು ಮುಷ್ಕರ ಹೂಡಿದ್ದರು. ನಾನು ಆಗ ಲೇಬರ್ ಮಂತ್ರಿಯಾಗಿದ್ದೆ. ಆ ವಿಚಾರವನ್ನು ಸಂದರ್ಭ ಬಂದಾಗ ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಹಿಂದಿನ ಕಾಲದಲ್ಲಿ ಈ ತರಹ ಲೀಡರ್‌ಗಳು ಇರಲಿಲ್ಲ......

ಶ್ರೀ ದೇವರಾಜ ಅರಸ್.—ಈಗ ವಿಚಿತ್ರವಾದ ಮಂತ್ರಿಗಳು ಬಂದಿರುವುದರಿಂದ ಈ ರೀತಿಯಾಗು ತ್ತಿದೆ.

SRI R. GUNDU RAO.—It tells the capacity of the trade union leaders.

ಶ್ರೀ ಡಿ. ದೇವರಾಜ ಅರಸ್.—ನಾನು ಏನು ಮಾತನಾಡಲಿಲ್ಲ ಯಾಕೆ ಕೋಪ ಬರುತ್ತದೆಯೋ ಗೊತ್ತಿಲ್ಲ ?

ಶ್ರೀ ಆರ್. ಗುಂಡೂರಾವ್.—ವಿಚಿತ್ರವಾದ ಮಂತ್ರಿಗಳು ಬಂದಿರುವುದರಿಂದ ಎಂದು ಹೇಳುತ್ತಿರುವುದರಿಂದ.

SRI D. DEVARAJ URS.—Let us not go to that extent. Let not the Chief Minister say lightly about labour leaders.

SRI R GUNDU RAO.—I know what you have said about labour leaders. I can quote.

SRI D. DEVARAJ URS.—You quote.

SRI M VEERAPPA MOILY.—You initated the discussion. ವಿಚಿತ್ರವಾದ ಮಂತ್ರಿಗಳು ಬಂದಿರುವುದರಿಂದ ಎಂದು ಹೇಳಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು. You must be prepared to take back.

SRI D. DEVARAJ URS.—Why do you call the labour leaders 'vichithra' ? When you say like that, I have the right to tell the same thing about you. ನಾನು ಒಪ್ಪಿಕೊಳ್ಳುತ್ತೇನೆ, ಬೇಡವೆಂದರೆ ಬೇಡ.

MR. SPEAKER.—Let us confine to the debate.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ನನ್ನ ಕೋಳಿಯಿಂದಲೇ ಬೆಳಕು ಹರಿಯುತ್ತದೆಂದು ತಿಳಿದುಕೊಂಡಿದ್ದರೆ ಅದು ತಪ್ಪು.

ಅಧ್ಯಕ್ಷರು.—ಈಗ ಅದೆಲ್ಲಾ ಬೇಡ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಮುಖ್ಯ ಮಂತ್ರಿಯವರ ಕೋಳಿಯಿಂದಲೇ ಬೆಳಕು ಹರಿಯುತ್ತಿದೆ.

MR. SPEAKER.—I request the Leader of the House and the Leader of the Opposition, to confine their remarks to the subject.

SRI D. DEVARAJ URS.—Repartee is a part of the debate. If the Chief Minister wants to have a dig at me, will you say that I do not have the right to have a dig at him.

MR. SPEAKER.—It should not be, but that has already been done.

SRI D.DEVARAJ URS.—Please ask the Chief Minister to keep quiet. If he wants to have a dig at me, I can have hundred digs at him.

SRI R. GUNDU RAO.—I can have thousand digs at you.

SRI D. DEVARAJ URS.—Then, I will have one more than whatever number you have.

SRI R. GUNDU RAO.—My limit is sky.

SRI D. DEVARAJ URS.—There is something beyond the sky also.

SRI R. GUNDU RAO.—Even there, I will be there.

SRI D. DEVARAJ URS.—By then, you won't be there at all. ಅವರು ಹೇಳುವುದೇ ಸರಿಯೆಂದು ಹೇಳಿದ್ದಾರೆ. ನಾವು ಹೇಳುವುದನ್ನು ಹೇಳಬೇಡಿ ಎಂದು ಹೇಳುವುದಕ್ಕೆ ಅವರಿಗೇನು ಅಧಿಕಾರವಿದೆ.

ಶ್ರೀ ಆರ್. ಗುಂಡೂರಾವ್.—ಗುಂಡು ಹಾಕಿದ್ದು ಸರಿಯೋ ತಪ್ಪೋ ಎಂದು ಹೇಳುತ್ತಿದ್ದೇನೆ.

ಶ್ರೀ ಜೆ.ಎಚ್. ಪಟೇಲ್.—ಸರಿಯಲ್ಲವೆಂದು ಹೇಳಿದರೆ ಗುಂಡು ಹಾಕುವುದನ್ನು ಬಿಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇಂತಹ ಪರಿಸ್ಥಿತಿ ಇರುವುದರಿಂದ ನಿಲುವಳಿ ಸೂಚನೆಯನ್ನು ತಾವು ಮಾನ್ಯ ಮಾಡಬೇಕಾಗುತ್ತದೆ. ಅದರ ಜಾರಿಗೆ ಅವಕಾಶ ಕೊಡಬೇಕೆಂದು ನಾನು ವಿನಯದಿಂದ ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಮತ್ತು ನನ್ನ ಗೆಳೆಯರು ನಿಲುವಳಿ ಸೂಚನೆ ಬಗ್ಗೆ ನೋಟೀಸು ಕೊಟ್ಟಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ನೋಟೀಸಿನಲ್ಲಿ ಅಂತಹ ಹೇಳತಕ್ಕಂಥಹ ವ್ಯತ್ಯಾಸಗಳೇನು ಹೆಚ್ಚು ಕಡಿಮೆ ಏನು ಇಲ್ಲ.

> "Due to brutal use of police force and resorting to firing, three persons were killed in Chintamani and three persons in Bangalore on 2 st January 1981. This is an uncalled for action taken by police to suppress the legitimate, peaceful agitation by the Public Sector Industries workers and also the agitation by the students and the public at Chintamani. Because of this action of the police, the law and order situation had become very tense in Bangalore city and in Chinthamani and other places. The agitation is taking a very serious turn. Therefore we move this adjournment motion to postpone the business of the House."

Sir, at the outset, I would like to get your consent for making preliminary observation. Firstly, the incidents of firing have taken place in the State on the same day. The causes may be different. If there are 10 firings or 12 firings in different places in the State, there cannot be 10 or 12 adjournment motions. For each firing there cannot be an adjournment motion. Therefore, if firings have taken place on the same day, they could be clubbed in one adjournment motion and could be discussed. That is my submission.

So far as my adjournment motion is concerned, there is a definite matter. 'The matter' is a firing by the State Police ending in deaths of so many persons. Places may be different,

MR. SPEAKER.—The cause of firing in Chintamani was quite different.

SRI S.R. BOMMAI.—The causes may be different ; the reasons may be different ; the question is Police Firing.

MR. SPEAKER.—The adjournment motion was regarding bundh and firing. Here, this is different.

† SRI S.R. BOMMAI.—In Chinthamani also, there was a bundh against the bus fare hike. My only submission would be, if there are firings in different places, on the same day, should we have to move hundred adjournment motions? That won't stand to reason at all. They could be clubbed and they could be discussed in one adjournment motion. So far as the rulings given by earlier Speakers in this House is concerned, we also know that the Speaker in some cases have permitted and given the consent for adjournment motions. Much water has flown from 1953 to 1980. Those circumstances have changed; norms have changed; the standard, method and the mannerism of the debote have changed. Now the question is, whether in a given circumstance, such adjournment motion can be given consent by the Speaker or not. That is a simple question. I would say, the State Government has utterly failed to discharge its obligations under the Labour Act to refer the matter to the Conciliation. This is my first charge. Having failed, the public sector industries workers, whose strength is more than one lakh, had given a call for Bangalore Bundh and the Bangalore people cooperated. The entire bundh was peaceful. For 35 days agitation had been carried or by the workers peacefully, in a disciplined manner without any unwarranted incidents. Then, why there was firing in HAL area? Sir, the press reports are there. Eye witnesses are there. The photographs have been published in the Press. I was very very sorry to note that the Press reports, eye witnesses, statements, the letters published in the Press, have not been seriously taken by the Government. The family members of the deceased doctor belonging to Scheduled Caste, Dr. M.Srinivas actually came and represented how that occurred. The story told by them and the evidence told by the eye witnesses clearly indicate that it is a murder, intentional murder. It is not a stray incident. I am speaking with responsibility.

ಅಧ್ಯಕ್ಷರು.—ಈ ಸಭೆಯಲ್ಲಿ ಪದಗಳನ್ನು ಬಳಸುವಾಗ Let us be careful.

SRI S.R. BOMMAI.—I am careful.

ಅಧ್ಯಕ್ಷರು.—ತಾವು ಬಹಳ ಬಾವೋದ್ರೇಕದಿಂದ ಮಾತನಾಡುತ್ತಿದ್ದೀರಿ. ಮತ್ತು You are depending upon the hearsay.

SRI S.R. BOMMAI.—Sir, not hearsay.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾರೇ ಆಗಲಿ, ಒಂದು ವಿಚಾರವನ್ನು ಪ್ರಸ್ತಾಪ ಮಾಡುವಾಗ ಇಲ್ಲವೇ ಯಾವುದೇ ಒಂದು ಹೇಳಿಕೆ ಕೊಡುವಾಗ ಅದನ್ನು ಹೊರಗಿನ ಸಾರ್ವಜನಿಕರು ಕೇಳುತ್ತಾರೆ. ಆದಕಾರಣ ನೋಟೀಸ್‌ನಲ್ಲಿ ಇಲ್ಲದಿರುವ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ. ಮರ್ಡರ್ ಮಾಡಿದ್ದಾರೆಂಬ ವಿಚಾರ ಈಗ ಸಭೆಯ ಮುಂದೆ ಇಲ್ಲ.

SRI S.R. BOMMAI.—The Hon. Minister for Finance is aware that everything cannot be put in a Notice of Adjournment Motion.

ಅಧ್ಯಕ್ಷರು.—ಇಂತಹ ಶಬ್ದಗಳನ್ನು ಉಪಯೋಗ ಮಾಡುವುದರಿಂದ ನಾಳೆದಿವಸ ಅದು ಪತ್ರಿಕೆಗಳಲ್ಲಿ ಬಂದರೂ ಬರಬಹುದು, ಆದ್ದರಿಂದ ......

ಶ್ರೀ ಎಸ್.ಆರ್. ಬೊಮ್ಮಾಯಿ.—ನಡೆದಿರುವ ಸಂಗತಿಯನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು.—ಆದರೂ ತಾವು ಸಾಧ್ಯವಾದ ಮಟ್ಟಿಗೆ ಕೆಲವು ಶಬ್ದಗಳನ್ನು ಉಪಯೋಗಿಸದಿರುವುದು ಒಳ್ಳೆಯದು. ಏಕೆಂದರೆ ಮರ್ಡರ್ ಆಗಿರುವುದು ನನಗೂ ಗೊತ್ತಿಲ್ಲ, ನಿಮಗೂ ಗೊತ್ತಿಲ್ಲ. ಜೊತೆಗೆ ತಾವು ಲಾಯರ್ ಇದ್ದೀರಿ. ಆದಕಾರಣ ತಾವು ಮರ್ಡರ್ ಎಂಬ ಪದವನ್ನು ಬಳಸುವುದು ಬೇಡ.

ಶ್ರೀ ಅಜೀಜ್ ಸೇಠ್.—ಮೋಲ್ಮನೆಯಲ್ಲಿ ಇದೇ ವಿಚಾರ ಪ್ರಸ್ತಾಪವಾಗಿ ಪತ್ರಿಕೆಗಳಲ್ಲಿಯೂ ಬಂದಿದೆ. ಆದರೆ ಇಲ್ಲಿ ಮಾತನಾಡಬೇಡ ಎಂದರೆ ಹೇಗೆ? ಗುಂಡು ಹಾಕುವುದು ಹಾಕಲಿ. ಇಲ್ಲಿ ಮಾತ್ರ ಮಾತನಾಡ ಬೇಡಿ ಎಂದು ತಾವು ಹೇಳಿದಂತೆ ಆಯಿತು.

ಅಧ್ಯಕ್ಷರು.—ಮಾತನಾಡುವುದು ಬೇಡ ಎಂದು ನಾನು ಹೇಳಲಿಲ್ಲ. ಕೆಲವು ಶಬ್ದಗಳನ್ನು ಬಳಸುವುದು ಬೇಡ ಎಂದು ನಾನು ಹೇಳಿದ್ದು.

SRI S. R. BOMMAI.—When the Speaker observes that there should be a basis before a statement is made.........

MR. SPEAKER.—In spite of it, let us avoid all those things. You have said completely that there has been firing, the doctor has died and all those things.

SRI S. R BOMMAI.—I met their family members. When they narrated the story clearly, is it not my duty to express it here? If you want the details.........

MR. SPEAKER.—You express. But, you are not justified in using the word 'intentional murder'.

SRI S. R. BOMMAI.—I have collected certain evidences, details. I cannot give when I am making a preliminary submission for getting your consent. If the evidence is necessary. If the circumstances are to be disclosed in detail, if you are kind enough to give consent I am in a position to produce all those evidences.

ಅಧ್ಯಕ್ಷರು.—ಅದು ಏನೇ ಇದ್ದರೂ ಸಹ ಅಂತಹ ಶಬ್ದಗಳನ್ನು ತಾವು ಬಳಸುವುದು ಬೇಡ ಎಂದು ನಾನು ಹೇಳಿದ್ದು.

SRI S.R. BOMMAI.—That is what they said. When serious allegations are made regarding police firing and particularly lathi charge, the hunting of the innocent people breaking open their doors peaceful citizens' life was made miserable in that area. Now is this matter not an important matter? Is it not a matter to be discussed by this House? Is it not......

SRI V. V. PATTAR.—I raise a Point of Order. Sir, whether the motion brought by the Opposition is falling within the scope of Rule 50 of the Rules of Procedure, is the question. The question is about the firing and death of certain persons. That is the matter. If the motion is to be brought about this matter. Sir, it is not only a matter

of public importance, but also a matter of urgency. This particular motion lacks urgency.

ಶ್ರೀ ಅಜೀಜ್‌ಸೇಟ್.—೨೧ನೇ ತಾರೀಖು ಫೈರಿಂಗ್ ಆಯಿತು; ಅದು ಆಗಿ ೮ ದಿವಸಗಳು ಕಳೆದು ಹೋಗಿರುವುದರಿಂದ ಇದಕ್ಕೆ ಅರ್ಜೆನ್ಸಿ ಇಲ್ಲ ; ಆದಕಾರಣ ಇಲ್ಲಿ ಏತಕ್ಕೆ ಪ್ರಶ್ನೆ ಮಾಡುತ್ತಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ ?

SRI V. V. PATTAR.—The question of urgency is narrated like, this.

> "The crucial stage always is as to whether question proposed to be raised has arisen suddenly, created an emergent situation of such a nature as a case of urgency and the House must, therefore, be convinced and take up the consideration of the urgent matter".

ಅಧ್ಯಕ್ಷರು.—ಈಗ ತಮ್ಮ ಕ್ರಿಯಾಲೋಪ ಏನಿದೆ, ಅದು should show how Sri Bommai's argument is not in order or submission is not relevant.

SRI V. V. PATTAR.—Yes, sir. It is not a matter of urgency. This is not an urgent matter of public importance.

MR. SPEAKER.—There is no Point of Order. You have not pointed out how he is not in order. Please resume your seat. Let us not take much time. It is now 11-30 A.M.

ಶ್ರೀ ಜೆ. ಎಚ್. ಪಟೇಲ್.—ಸ್ವಾಮಿ, ಆ ಕಡೆಯ ಸದಸ್ಯರಿಗೆ ಸರಿಯಾಗಿ ಪಾಠ ಹೇಳಿಕೊಡುವಂತೆ ಮಾನ್ಯ ಮಂತ್ರಿಗಳಿಗೆ ತಾವು ಸ್ವಲ್ಪ ಹೇಳಬೇಕು. ಏಕೆಂದರೆ, ಅವರು ಮನೆಯಲ್ಲಿ ಓದಿಕೊಂಡು ಬರದೆ, ಇಲ್ಲಿಯೇ ಓದಿ ಹೇಳಲು ಪ್ರಯತ್ನ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ತರಹದ ಪಾಠ ಹೇಳಿಕೊಡಲು ತಾವು ಪ್ರೈಮರಿ ಶಾಲೆಗೆ ಹೋಗುವುದು ಒಳ್ಳೆಯದು.

ಶ್ರೀ ಜೆ. ಎಚ್. ಪಟೇಲ್.—ಈ ಹುಡುಗರು ಆಗ ನನ್ನ ಹತ್ತಿರ ಅಲ್ಲಿಗೇ ಬರಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪಾಠ ಹೇಳಲು ಇಂತಹ ಹುಡುಗರನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧನಿಲ್ಲ.

11-30 A.M.

SRI S. R. BOMMAI.—I am aware that law and order situation cannot be a subject matter of an adjournment motion. The strike cannot be a matter of adjournment motion. Rules are there. But the important point that I would like to bring to your kind notice is, that the strike still continues. The situation in Bangalore City and in other places is very grave. The Union leaders are contemplating certain measures to achieve their objects, by organising rail bundh, road bundh and certain other things. Whether I agree with these things or not, is not a matter of grave concern. The State Government has failed effectively to conciliate and the Government of India has also failed to fulfil its promises given in 1978. The entire city is now

under the grip of tension. In my notice I have said that the situation has become very tense in Bangalore city and also in Chintamani and other places and agitation is taking a serious turn. The recent firing has resulted in death ; and the situation is going to be grave. It is not only question of law and order, but it is the question of every living of the citizens, safety of their lives and their property. The action of the police has created a reaction among the public. Therefore, in my humble opinion, this is a fit case wherein the Speaker should give his consent ; otherwise, I would strongly urge the Government that the Government should institute a Judicial Enquiry in such matters which may pacify the citizens to some extent. When there are serious allegations against the police, it is a fit case for a judicial probe and I would urge the Government to accept the suggestion, so that we may not allow further debate on this point. There are a number of details which we have to narrate, origin of the agitation, agreement between Government of India and the Labourers and details of incidents that took place on the 21st and police atrocities and brutalities.

MR. SPEAKER.—We are not concerned about all these things at the moment.

SRI S. R. BOMMAI.—Sir, about the photograph I would mention and complete my speech. A policeman throwing a stone is in the picture. But the Government have interpreted it to mean that he was looking and testing the stone. We cannot take lightly all the press reports and photographs. I don't say that everything that comes in the press is a perfect truth. When the press people took so much of risk and even... ... ...

ಶ್ರೀ ಕಾಗೋಡು ತಿಮ್ಮಪ್ಪ —ಬೇರೆಯವರು ಕಲ್ಲು ಹೊಡೆದಿಲ್ಲವೇ? ಅದರ ಫೋಟೋ ಇಲ್ಲವೇ?

SRI S. R. BOMMAI.—ಇಲ್ಲ. But I must congratulate that photographer (being a Reporter) who at the risk of his life has taken the photograph and published in the press. Press plays its own role in democracy and particularly, in a grave situation like this. We simply treat it in a lighter view such reports and photographs. Sir, it is not befitting the Government to ignore the factual reports that has appeared in the Press and letters from the public on such serious matters. There are a number of details which I can narrate if you give your consent. Lastly I would strongly urge that it is a fit case where judicial enquiry is necessary and I am sure, the Chief Minister will consider this and see that the people of the City and Chintamani get justice so far as the incidents are concerned.

† ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಸಾಕಷ್ಟು ವಿಷಯ ಪ್ರಸ್ತಾಪವಾಗಿದೆ. ಇವನ್ನು ನಿಲುವಳಿ ಸೂಚನೆಯಾಗಿ ಏತಕ್ಕೆ ಬೇರೆ ರೂಪದಲ್ಲಿ ಇದನ್ನು ಇಲ್ಲಿ ಚರ್ಚೆ ಮಾಡಬಹುದಾಗಿತ್ತಲ್ಲ ಎಂದು ಒಂದು ಪ್ರಶ್ನೆಯನ್ನು ಎತ್ತಿದರು. ಇಲ್ಲಿ ನಿಲುವಳಿ ಸೂಚನೆಯಾಗಿ ಏತಕ್ಕೆ ಚರ್ಚೆ ಆಗಬೇಕು ಎಂದರೆ ನಿಲುವಳಿ ಸೂಚನೆಗೂ ಗಮನಸೆಳೆಯುವ ಸೂಚನೆಗೂ ವ್ಯತ್ಯಾಸ ಇದೆ. ಇಲ್ಲಿ ಈ ಒಂದು ನಿಲುವಳಿಸೂಚನೆಯಾಗಿ ಚರ್ಚೆ ಮಾಡತಕ್ಕಂಥ ಸಂದರ್ಭ ಅಥವಾ ಸ್ಥಿತಿ ಈಗ ಇಲ್ಲದೇ ಇರಬಹುದು. ಈ ಸದನದಲ್ಲಿ ಒಂದು ಸಂದರ್ಭದಲ್ಲಿ ಏನಾದರೂ ಆದು ಅಂಗೀಕಾರವಾದರೆ ಈ ಸರ್ಕಾರದ ವಿರುದ್ಧ ತರತಕ್ಕಂಥ ಅವಿಶ್ವಾಸ ನಿರ್ಣಯದಷ್ಟೇ ಅದಕ್ಕೆ ಬೆಲೆ ಇದೆ. ಇದು ಹೌಸ್ ಆಫ್ ಕಾಮನ್ಸ್ ಪ್ರೊಸೀಜರ್ ಕೂಡ. ಈ ಅಡ್ಜರ್ನ್‌ಮೆಂಟ್ ಮೋಷನ್‌ನ ಗುರಿಯಾವರೂ ಕೂಡ ಏನಿದೆ ಎಂದರೆ virtually it is censuring the Government. ಸರ್ಕಾರದ ಗಮನವನ್ನು ಸೆಳೆಯುವ ಹಲವಾರು ಮಾರ್ಗಗಳ ಪೈಕಿ ಈ ನಿಲುವಳಿ ಸೂಚನೆಯನ್ನು ನಾವು ಏತಕ್ಕೆ ತಂದಿದ್ದೇವೆ ಎಂದರೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದಹಾಗೆ ಪೋಲೀಸರ ಗೋಲೀಬಾರ್‌ನಿಂದಾಗಿ ಅಲ್ಲಿ ೩ ಜನರ ಸಾವಾಗಿದೆ. ಈ ಬಗ್ಗೆ ವಿವರಗಳನ್ನೆಲ್ಲಾ ತಾವು ಅನುಮತಿ ಕೊಟ್ಟರೆ ಈ ಸದನದಲ್ಲಿ ಅದನ್ನು ಎಲ್ಲರೂ ಒಪ್ಪತಕ್ಕಂಥ ರೀತಿಯಲ್ಲಿ ಹೇಳಬಹುದು. ತಾವು ಅನುಮತಿ ಕೊಡುವದಕ್ಕಿಂತ ಮುಂಚೆ ಈವತ್ತಿನ ಅಜೆಂಡಾದಲ್ಲಿ ಕಾಲಿಂಗ್ ಅಟೆನ್‌ಷನ್ ಇದೆ, ಅದರ ಮೂಲಕ ಚರ್ಚೆ ಮಾಡಬಹುದಲ್ಲ ಎಂದು ಹೇಳಿದಾಗ ಈ ಮೂಲಕ ಚರ್ಚೆ ಮಾಡುವುದಕ್ಕೆ ಮತ್ತು ಆ ಮೂಲಕ ಚರ್ಚೆ ಮಾಡುವುದಕ್ಕೂ ವ್ಯತ್ಯಾಸ ಇದೆಯೆಂದು ನಾನಾಗಲೇ ಹೇಳಿದ್ದೇನೆ. The primary object of an adjournment motion is to draw the attention of the Government to matters of urgent public importance so as to influence the decision of the Government. ಇಲ್ಲಿ ಈಗ ಸರ್ಕಾರ 'ಈಗ' ಏನಾದರೂ ಇಲ್ಲಿ ಚರ್ಚೆ ಮಾಡುವುದು ಬೇಡ, ನಾವು ಅದಕ್ಕೆ ನ್ಯಾಯಾಂಗ ತನಿಖೆಗೆ ಏರ್ಪಾಡು ಮಾಡುತ್ತೇವೆ, ನ್ಯಾಯಾಂಗ ತನಿಖೆ ಮಾಡುವುದಕ್ಕೆ ಇದು ತಕ್ಕ ವಸ್ತುವಾಗಿದೆ, ತಪ್ಪು ಮಾಡಿದವರಿಗೆ ಶಿಕ್ಷೆಯಾಗುತ್ತದೆ ಎಂದು ಹೇಳಿದರೆ ಪರವಾಗಿಲ್ಲ, ಆ ರೀತಿ ನ್ಯಾಯಾಂಗ ತನಿಖೆಗೆ ಸರ್ಕಾರ ಒಪ್ಪಿಕೊಂಡು ವಿಚಾರಣೆ ಮಾಡಿದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ. ಅದು ಆಗಲೇಬೇಕು. ಅಲ್ಲಿ ವಿನಾಕಾರಣ ೩ ಜನರು ಸತ್ತಿದ್ದಾರೆ. ಒಬ್ಬ ಡಾಕ್ಟರ ಸಾವಂತೂ ದೊಡ್ಡ ದುರಂತ. ಡಾಕ್ಟರ ಬೆನ್ನು ಹತ್ತಿ ಹೋಗಿ ಅವರನ್ನು ಹೊಡೆದಿದ್ದಾರೆ. ಇದನ್ನು ಕೊಲೆ ಎಂದಾದರೂ ಕರೆಯಿರಿ ಅಥವಾ ಬೇರೆ ಏನಾದರೂ ಕರೆಯಿರಿ. ಪೋಲೀಸರು ಆ ಡಾಕ್ಟರು ಷಾಪನ್ನು ಕ್ಲೋಸ್ ಮಾಡುವ ಹೊತ್ತಿನಲ್ಲಿ ಗುರಿ ಇಟ್ಟು ಹೊಡೆದಿದ್ದಾರೆ. ಅವಶ್ಯಕತೆ ಬಿದ್ದರೆ ನಾನು ನಿಮ್ಮನ್ನು ಕರೆದುಕೊಂಡು ಹೋಗಿ ಈ ಬಗ್ಗೆ ತೋರಿಸುತ್ತೇನೆ. ಈರೀತಿ ನಡೆದಿರುವ ಘಟನೆಯನ್ನು ಸರ್ಕಾರ ಸರಿಯೆಂದು ಒಪ್ಪಿಕೊಂಡು ಬಿಟ್ಟರೆ ನ್ಯಾಯಾಂಗ ತನಿಖೆ ಮಾಡಿಸೋಣ. ನ್ಯಾಯಾಂಗ ತನಿಖೆ ಮಾಡಿಸುವುದರ ಬಗ್ಗೆ ವಿಚಾರ ಮಾಡುತ್ತೇವೆ, ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತೇವೆ ಎಂದು ಹೇಳಿದರೆ ಅದರಿಂದ ಜನರ ಕಣ್ಣೊರೆಸತಕ್ಕಂಥ ಕೆಲಸ ಆಗುತ್ತದೆಯೇ ಹೊರತು ತಪ್ಪಿತಸ್ಥರಿಗೆ ನಿಜವಾದ ಶಿಕ್ಷೆಯಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಇಂತಹ ವಿಷಯಗಳಲ್ಲಿ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ನೇರವಾಗಿ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಇವರಿಂದ ನಡೆಯುತ್ತಿರತಕ್ಕಂಥ ಆಡಳಿತ ಕ್ರಮ ಏನಿದೆ ಎಂದರೆ ಈ ರಾಜ್ಯ ಪೋಲೀಸ್ ರಾಜ್ಯ ಆಗಿರುವುದರಿಂದ, ಇಲ್ಲಿ ಪೋಲೀಸರೇ ರಾಜ್ಯ ಆಳುತ್ತಾ ಇರುವುದರಿಂದ ಪೋಲೀಸರನ್ನು ಇವರ ವಿರುದ್ಧ ಹಾಕಿಕೊಳ್ಳುವುದ್ದಕ್ಕೆ ತಯಾರು ಇಲ್ಲ, ಇದು ಮೂಲ ಕಾರಣ. ಇದಕ್ಕೋಸ್ಕರ ಈ ಒಂದು ನಿಲುವಳಿ ಸೂಚನೆಗೆ ತಾವು ಅನುಮತಿ ಕೊಟ್ಟರೆ ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಅನುಕೂಲವಾಗುತ್ತದೆ. ತಾವು ರಾಜ್ಯದಲ್ಲಿರತಕ್ಕಂಥ ಪರಿಸ್ಥಿತಿಯನ್ನು, ಪೋಲೀಸ್ ಕಾನೂನು ಮತ್ತು ಪರಿಸ್ಥಿತಿಯನ್ನು ನಾಳೆ ಗೌರ್ನರ್ ಅಡ್ರೆಸ್ ಮೇಲೆ ಮಾತನಾಡತಕ್ಕಂಥ ಕಾಲದಲ್ಲಿ ಮಾತನಾಡಿ ಎಂದು ಹೇಳಬಹುದು. ಆಗಲೂ ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ನಾನು ಈ ಬಗ್ಗೆ ಕಾಲಿಂಗ್ ಅಟೆನ್‌ಷನ್ ಮೂಲಕ ಮಾತನಾಡುವುದಕ್ಕೂ ಅಡ್ಜರ್ನ್‌ಮೆಂಟ್‌ಮೋಷನ್ ಮೂಲಕ ಮಾತನಾಡುವುದಕ್ಕೂ ಇರತಕ್ಕಂಥ ಸೂಕ್ಷ್ಮ ವ್ಯತ್ಯಾಸವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕಾಲಿಂಗ್ ಅಟೆನ್‌ಷನ್ ರೂಪದಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಯಾರೂ ಒಪ್ಪಿಕೊಳ್ಳದಿದ್ದರೆ ನಮ್ಮ ಡಿಮ್ಯಾಂಡ್ ಏನಿದೆ ಅದಕ್ಕೆ ತಮ್ಮ ಅನುಮತಿಯನ್ನು ಕೊಡಬೇಕು. ಇದರಿಂದ ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಅವಕಾಶವಾಗುತ್ತದೆ.

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಶ್ರೀಮಾನ್ ಬೊಮ್ಮಾಯಿಯವರು ಹಾಗೂ ನಾವೆಲ್ಲಾ ಸೇರಿ ಕಳಿಸಿರತಕ್ಕಂಥ ನಿಲುವಳಿಸೂಚನೆ ಏನಿದೆ ಅದನ್ನು ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳತಕ್ಕಂಥಾದಕ್ಕೆ ಈ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಬೇಕೆಂದು ನಾವು ತಮ್ಮ ಅನುಮತಿಯನ್ನು ಕೇಳುತ್ತಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ ಈ ನಿಲುವಳಿಸೂಚನೆಗೆ ಸಮ್ಮತಿ ಕೊಡತಕ್ಕಂಥಾದಕ್ಕೆ ಇರತಕ್ಕಂಥ ಅತಂಕ ಏನು ಎಂಬುದನ್ನು ತಾವು ಸೂಕ್ಷ್ಮವಾಗಿ ಹೇಳಿದ್ದೀರಿ. ಒಂದನೆಯದಾಗಿ ಕಾನೂನು ಪಾಲನೆಯ ವ್ಯವಸ್ಥೆ ಬಗ್ಗೆ ಮಾತನಾಡುವುದಕ್ಕೆ ನಿಲುವಳಿಸೂಚನೆಯನ್ನು ತರತಕ್ಕಂಥಾದಕ್ಕೆ ಸಾಧ್ಯವಾಗಬಾರದು, ಹಿಂದೆ ಕೊಟ್ಟಿರತಕ್ಕಂಥ ಸಭಾಧ್ಯಕ್ಷರ ಹಲವು ತೀರ್ಪುಗಳು ಏನಿದೆ ಅದಕ್ಕನುಗುಣವಾಗಿ ಅದು ಸಾಧ್ಯವಿಲ್ಲ ಎಂಬುದು ಮೊದಲನೆಯ ಮಾತು. ಈ ಮುಷ್ಕರಗಳ ಬಗ್ಗೆ ಮಾತನಾಡುವುದು ಈ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಾವು ಮತ್ತೊಂದು ಮಾತನ್ನು ಹೇಳಿದ್ದೀರಿ. ಅಲ್ಲದೇ ಇವತ್ತು ಈ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿರತಕ್ಕಂಥ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಏನಿದೆ ಅದರಲ್ಲಿ ಈ ವಿಷಯವನ್ನು ಸವಿಸ್ತಾರವಾಗಿ ಚರ್ಚೆ ಮಾಡಬಹುದು ಎಂದು ತಾವು ಹೇಳಿದ್ದೀರಿ. ಈಗ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಹಂತದಲ್ಲಿ ಅದನ್ನು ನಾನು ವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ತಮ್ಮ ಪೀಠದಲ್ಲಿ ಕುಳಿತಿದ್ದಂಥ ಸಭಾಧ್ಯಕ್ಷರು ಕೊಟ್ಟಿರತಕ್ಕಂಥ ಹಲವಾರು ತೀರ್ಪುಗಳನ್ನು ನಾನು ಈ ದಿವಸ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಂದೇ ಒಂದು ಪ್ರಕರಣವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಇದೇ ಸದನದಲ್ಲಿ ಕೊಲೆಗೆ ಸಂಬಂಧಪಟ್ಟ ಅಥವಾ ಪೋಲೀಸರ ಅತಿರೇಕದ ಸನ್ನಿವೇಶದಲ್ಲಿ ವ್ಯಕ್ತಿಗಳು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಆ ಕಾರಣಕ್ಕೋಸ್ಕರ ಅನುಮತಿಯನ್ನು ಕೊಡಬೇಕು ಎನ್ನುವ ವಾದವನ್ನು ಮಂಡನೆ ಮಾಡಿದ್ದೆವು ಅದೇ ವಾದವನ್ನು ಈಗ ಮಂಡನೆ ಮಾಡುವುದಿಲ್ಲ. ತಮಗೆ ಗೊತ್ತಿದೆ, ಎಲಿಗಾರ್ ತಿಮ್ಮಪ್ಪನವರು ಪೋಲೀಸರ ಕರ್ತವ್ಯ ಲೋಪದಿಂದ, ಪೋಲೀಸರ ಅತಿರೇಕದ ಸನ್ನಿವೇಶಕ್ಕೆ ತುತ್ತಾದರು. ಅದರ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಯಿತು. ಅದರ ಬಗ್ಗೆ ಜುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಈ ಸಭೆಯಲ್ಲಿ ನಿಲುವಳಿ ಸೂಚನೆ ಮುಖೇನ ತಂದಾಗ ಸರ್ಕಾರ ಒಪ್ಪತಕ್ಕಂಥ ಸನ್ನಿವೇಶ ಬಂದಿದ್ದು ತಮಗೆ ಗೊತ್ತಿದೆ. ಅದು ಮರ್ಡರ್ ಆಗಿಲ್ಲ, ಕೊಲೆ ಸನ್ನಿವೇಶ ಅಲ್ಲ, ಪೋಲೀಸರ ಅತಿರೇಕದಿಂದ, ಅವರು ಎಲ್ಲೆಕಟ್ಟು ಮೀರಿ ಕಾರ್ಯ ನಿರ್ವಹಣೆ ಮಾಡಿದ್ದರಿಂದ ಉಂಟಾದ ಘಟನೆ ಬಗ್ಗೆ ಈ ಸಭೆಯಲ್ಲಿ ಮುಷ್ಕರ ಆಯಿತು, ಧರಣಿ ಆಯಿತು. ಆಗ ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದರು. ಈ ಒಂದು ಸಂದರ್ಭದಲ್ಲಿ ತಮ್ಮ ಸ್ಥಾನದಲ್ಲಿದ್ದಂಥ ಅಧ್ಯಕ್ಷರು ಅದಕ್ಕೆ ಅನುಮತಿಯನ್ನು ಕೊಟ್ಟಿರತಕ್ಕಂಥಾದ್ದನ್ನು ತಮ್ಮ ಜ್ಞಾಪಕಕ್ಕೆ ತರುತ್ತಿದ್ದೇನೆ. ಹಿಂದೆ ಎರಡು ತೀರ್ಪುಗಳನ್ನು ಕೊಟ್ಟಿದೆ, ಒಂದು ಹುಬ್ಬಳ್ಳಿಯಲ್ಲಿ ನಡೆದಂಥ ಘಟನೆ ಬಗ್ಗೆ ಮತ್ತು ಇನ್ನೊಂದು ಮಧುಗಿರಿಯಲ್ಲಿ ನಡೆದಂಥ ಘಟನೆ ಬಗ್ಗೆ. ೧೯೭೩-೭೪ರಲ್ಲಿ ಪೋಲೀಸರ ಅತಿರೇಕದಿಂದ ಆದ ಸನ್ನಿವೇಶಗಳ ಬಗ್ಗೆ ಪ್ರಸ್ತಾಪವಾಗಿದೆ. ಪೋಲೀಸರ ಅತಿರೇಕದಿಂದ ತೊಂದರೆಯಾದ ಬಗ್ಗೆ ಈ ಸಭೆಯಲ್ಲಿ ತಂದ ನಿಲುವಳಿ ಸೂಚನೆಗೆ ಅನುಮತಿಯನ್ನು ಕೊಟ್ಟು ಚರ್ಚೆ ಮಾಡಿದ ಮೇಲೆ ನ್ಯಾಯಾಂಗ ವಿಚಾರಣೆ ಮಾಡಲಿಕ್ಕೆ ಒಪ್ಪಿದಂಥ ಸನ್ನಿವೇಶವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇವತ್ತಿನದಿವಸ ಈ ಒಂದು ಹಂತದಲ್ಲಿ ತಮ್ಮ ಅನುಮತಿಯನ್ನು ಕೊಡುವುದಕ್ಕೆ ತೊಡಕು ಇದೆ ಎಂದು ಹೇಳಿದಿರಿ, ಅದಕ್ಕೋಸ್ಕರ ಈ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಅದರಿಂದ ಈ ಒಂದು ಸಂಶಯ ನಿವಾರಣೆಯಾಗಬಹುದು ಎನ್ನುವುದು ನನ್ನ ಅಭಿಪ್ರಾಯ. ಇನ್ನೊಂದು ವಿಷಯ ಏನೆಂದರೆ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡುವಾಗ ಹೆಚ್ಚು ಸವಿಸ್ತಾರವಾಗಿ ಪ್ರಸ್ತಾಪಮಾಡಬಹುದು ಎಂದು ಹೇಳಿದಿರಿ ಅದನ್ನು ಒಪ್ಪಿಕೊಳ್ಳುತ್ತೇನೆ. ಚರ್ಚೆ ಮಾಡುವಾಗ ಕಾರ್ಮಿಕ ಇಲಾಖೆಯ ಆಡಳಿತ ವೈಖರಿ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಈ ಒಂದು ಎಲ್ಲೆಕಟ್ಟು ಏನಿದೆ ಇದರ ಬಗ್ಗೆ ಈ ಹಂತದಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ರಾಜ್ಯ ಸರ್ಕಾರ ಸಂವಿಧಾನಾತ್ಮಕವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸತಕ್ಕಂಥ ಕಾಲದಲ್ಲಿ ಕಾರ್ಮಿಕರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸುವುದು ಸರ್ಕಾರದ ಹೊಣೆಗಾರಿಕೆ ಎಂದು ಹೇಳಿದ್ದಾರೆ. ಅವರೂ ಕೂಡ ಇದರ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದರು, ಏಕೆ ಬರೆಯಬೇಕಾಗಿತ್ತು ? ಈ ಸಂದರ್ಭದಲ್ಲಿ ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಪ್ರಸ್ತಾಪ ಮಾಡಬಹುದು ಎಂದು ಹೇಳಿದಿರಿ. ರಾಜ್ಯಪಾಲರ ಭಾಷಣ

ಸರ್ಕಾರದ ನೀತಿಗೆ ಸಂಬಂಧಪಟ್ಟ ಭಾಷಣವೇ ಪರಂತು ಪೋಲೀಸರು ಗುಂಡು ಹಾರಿಸುತ್ತಾರೆ ಎಂದು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಮುಂದೆ ೧೯೮೧-೮೨ ರಲ್ಲಿ ಸರ್ಕಾರದ ಕಾರ್ಯಕ್ರಮಗಳೇನಿವೆ ಅವನ್ನು ರಾಜ್ಯಪಾಲರ ಭಾಷಣದಲ್ಲಿ ಹೆಚ್ಚು ಪ್ರಸ್ತಾಪ ಮಾಡತಕ್ಕಂಥಾದ್ದು ಸಾಮಾನ್ಯವಾದಂಥಾದ್ದು ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ರಾಜ್ಯ ಸರ್ಕಾರದ ನೀತಿ ಏನಿದೆ ಅದನ್ನು ನಮ್ಮ ರಾಜ್ಯಪಾಲರ ಮುಖೇನ ಹೇಳಿಸಕ್ಕಂಥಾದ್ದು, ಅದು ಸರ್ಕಾರದ ಭಾಷಣ. ಸರ್ಕಾರದವರು ತಯಾರು ಮಾಡಿರತಕ್ಕಂಥಾದ್ದನ್ನು ಅವರು ಬಂದು ಓದುತ್ತಾರೆ. ಗುಂಡು ಹಾರಿಸುತ್ತಾರೆ ಎಂದು ಹೇಳುವುದು ಸರ್ಕಾರದ ನೀತಿಯಲ್ಲ. ರಾಜ್ಯಪಾಲರ ಭಾಷಣದಲ್ಲಿ ಈ ವಿಷಯವನ್ನು ಚರ್ಚೆ ಮಾಡುವಂಥ ಕೆಲಸವನ್ನು ಕೈಗೊಳ್ಳುವುದಾದರೆ ವಿಷಯದ ಗಂಭೀರತೆ ಅದರಲ್ಲಿ ಸಾಧನೆಯಾಗುವುದಿಲ್ಲ ಆದುದರಿಂದ ಜುಡಿಶಿಯಲ್ ಪ್ರೋಬ್ ಮಾಡುವುದನ್ನು ಬಿಟ್ಟು ಬಿಟ್ಟು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ ಹಲವಾರು ಸಾರಿ ಇಂತಹ ಸನ್ನಿವೇಶಗಳು ಬಂದಿದೆ. ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ. ಎಲ್ಲಾ ಸಂಭರ್ಗಗಳಲ್ಲಿಯೂ ಅನುಮತಿ ಸಿಕ್ಕುವುದು ಕಷ್ಟ. ಅನುಮತಿ ಕೊಡುವ ಹಂತದಲ್ಲಿ ಚರ್ಚೆಯಾಗಿದೆ. ತಾವು ಅನುಮತಿ ಕೊಡುವುದಕ್ಕೆ ಇರತಕ್ಕಂಥ ತೊಡಕು ಹೇಳಿದಿರಿ. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಾಗ ಸವಿಸ್ತಾರವಾಗಿ ಪ್ರಸ್ತಾಪಮಾಡಿ ಎಂದು ಹೇಳಿದಿರಿ. ಪೋಲೀಸರ ಕರ್ತವ್ಯ ಏನಿದೆ. ಅವರು ಎಲ್ಲೆಕಟ್ಟು ಮೀರಿ ವರ್ತಿಸಿದ್ದಾರೋ ಇಲ್ಲವೋ ಎನ್ನುವುದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕು ಎನ್ನುವುದು ವಿರೋಧಪಕ್ಷದ ನಿಲವು. ಪತ್ರಿಕೆಯಲ್ಲಿ ಬಂದಿರುವುದು ಸರಿ ಅಥವಾ ನಾವು ಹೇಳುವುದು ಸರಿ ಎಂದು ನಾನು ಹೇಳುವುದಿಲ್ಲ. ವಿರೋಧ ಪಕ್ಷಗಳಿಗೆ ಇರತಕ್ಕಂಥ ಒಂದು ಆಧಾರ ಅಂದರೆ ಪತ್ರಿಕೆಯಲ್ಲಿ ಬಂದಂಥ ವಿಷಯಗಳ ಮೇಲೆ ಅವರು ಅವಲಂಬನೆಯಾಗ ಬೇಕಾಗುತ್ತದೆ. ನಮಗೆ ಆಡಳಿತ ಇಲ್ಲ. ನೀವು ಸರ್ಕಾರ ನಡೆಸತಕ್ಕಂಥಾವರು ಅವರು ಕೊಡತಕ್ಕ ವರದಿಯನ್ನು ಸಮರ್ಥನೆ ಮಾಡಬಹುದು. ನಾನು ಪ್ರತಿಕೆಯಲ್ಲಿ ಬಂದಿರತಕ್ಕ ಎಲ್ಲಾ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ ತಾವು ಈ ನಿಲುವಳಿ ಸೂಚನೆಗೆ ಅನುಮತಿ ಕೊಡತಕ್ಕಂಥಾದ್ದಕ್ಕೆ ಇರತಕ್ಕಂಥ ಅಡ್ಡಿ ಏನು, ಕೆಲವು ಅಡಚಣೆಗಳಿವೆ ಎಂದು ಹೇಳಿದಿರಿ. ಬಹುಶಃ ನಾನು ಏನು ವಿವರಣೆಗಳನ್ನು ಕೊಟ್ಟಿದ್ದೇನೆ, ಇದರಿಂದ ಅಡ್ಡಿಯೇನೂ ಬರಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ದಯಮಾಡಿ ಈ ಒಂದು ನಿಲುವಳಿ ಸೂಚನೆಗೆ ಸಂಪೂರ್ಣವಾದಂಥ ಅನುಮತಿಯನ್ನು ಕೊಡಬೇಕು ಮತ್ತು ಈ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಬೇಕು ಎಂದು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ —ಮಾನ್ಯ ಸಭಾಧ್ಯಕ್ಷರೆ, ತಾವು ಏನು ಒಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಿರಿ......

ಅಧ್ಯಕ್ಷರು.—ನಾನು ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಈ ವಿಷಯವನ್ನು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ರೈಸ್ ಮಾಡಬಹುದು, ರೈಸ್ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ ಎಂದು ಹೇಳಿದಿರಿ.

SRI KAGODU THIMMAPPA.—That is a new point.

SRI A. LAXMI SAGAR.—I do not understand why my friend Sri Kagodu Thimmappa is indulging in frequent interruption. Let him allow us to go instead of opposing. Opposition has not died.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇದೇ ವಿಚಾರವನ್ನು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡುವಾಗ ಡಿಸ್ಕಸ್ ಮಾಡಬಾರದು ಎಂದು ಇಲ್ಲ. ಮಾಡಬಹುದು. ಆದರೆ ಇದು ಅರ್ಜೆಂಟ್ ಪಬ್ಲಿಕ್ ಇಂಪಾರ್ಟೆನ್ಸ್ ಇದ್ದಾಗ ಇಂಥಾ ಒಂದು ಪ್ರಾವಿಜನ್‌ನ್ನು ನಮ್ಮ ರೂಲ್ಸ್‌ನಲ್ಲಿ ಮಾಡಿದ್ದೇವೆ ಎಂದು ನಮ್ಮ ಅಭಿಪ್ರಾಯ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದು ಯಾವುದೆಂದರೆ, proviso to rule೫೮, ಸ್ಪಷ್ಟಪಡಿಸುತ್ತದೆ

ಯಾವುದೇ ಇಂಥಾ ಅಡ್ಜರ್ನ್‌ಮೆಂಟ್ ಮೋಷನ್ ಬಂದಾಗ ಈ ಸಭೆ ಅಥವಾ ಅಧ್ಯಕ್ಷರು, ಯಾವುದೇ ಇಂಥಾ ಅಡ್ಜರ್ನ್‌ಮೆಂಟ್ ಮೋಷನ್ ಬಂದಾಗ ಈ ಸಭೆ ಅಥವಾ ಅಧ್ಯಕ್ಷರು ಯಾವರೀತಿ ಇದಕ್ಕೆರೂಲಿಂಗ್ ಕೊಡಬೇಕು ಎನ್ನುವುದನ್ನು ಇಲ್ಲಿ ಸೂಚಿಸಿದ್ದಾರೆ. Proviso to Rule 54

> "Provided that where the Speaker has refused his consent under Rule 50 or is of the opinion that the matter proposed to be discussed is not in order".

So, consent may be with-held when it is found that the matter proposed is not in order. That is a first condition. The discretion is not much. It is specifically provided here.

> "Only if it is found that motion is not in order then permission or consent could be with-held."

Let us not say whether this is in order. Already these things have been read over.

MR. SPEAKER.—First portion is purely discretionary.

SRI B. SUBBAIAH SHETTY.—Now, let us say whether this is in order. Already these things have been read over by.........

MR. SPEAKER.—The first portion is purely discretionary.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಯಾವ ರೀತಿ discretion ಉಪಯೋಗ ಮಾಡಬೇಕು ಅಂತ ಪ್ರೊವಿಜೋ ಕೂಡ ಹಾಕಿದ್ದಾರೆ.

MR. SPEAKER.—You please read Rule 50. It is mentioned 'provided the Speaker gives his consent'. That is purely discretionary. The Speaker may excercise his discretion under that provision.

SRI B. SUBBAIAH SHETTY.—The proviso has also got the over riding effect. This is under rule 54 (1). This is my submission. ಇನ್ನೊಂದು ಸಂಶಯ ಏನು ಬಂದಿದೆ ಎಂದರೆ. Secondly, whether the motion anticipated a matter which has been previously appointed for consideration ? ಇದರ ಬಗ್ಗೆ ನಾವು ಇದನ್ನು ಇಡೀ ಓದಿದರೆ ಹಾಗೆ ಕಾಣುವುದಿಲ್ಲ. It says,

> "The motion shall not anticipate a matter which has been previously appointed for consideration. In determining whether a discussion is out of order.........."

> Sir, this point is essential. It further says:

> "......on the ground of anticipation, regard shall be had by the Speaker to the probability of the matter anticipated being brought before the Assembly within a reasonable time."

As a matter of fact, the reasonable time is that the Assembly was convened only after the incident occurred. So we could bring it within a reasonable time, only after the Assembly was convened and we have brought it within the earliest opportunity. We did not have any time to anticipate and it cannot be said that we have anticipated the subj-

ect which is under discussion in this House. Yesterday this motion was submitted to the Legislature and then, today only the matter was brought through calling attention. Therefore, under no stretch of imagination it can be said that was anticipated in this motion. Another two points were raised *i. e.*, if a law and order matter is brought, there are rulings of this House earlier, that it cannot be a matter for an adjournment motion. Now, my submission is that this is not a simple matter of law and order. In this, we can also rely some of the evidences which we are having at present. Direct evidence could only be brought by instituting a judicial enquiry. At present we are having the evidence of newspapers and we too have talked to the Members of the colony. They are all eye witnesses. We have known certain things and we would like to place those things before you so that you may be able to appreciate the faces better. Now, I would like to read a portion of the eye witness statement which has appeared in Deccan Herald on 22-1-1981.

MR. SPEAKER.—That will not be just relevant because we are not going in detail as such.

SRI B. SUBBAIAH SHETTY.—Sir this is just to convince you. I will say how it is relevant. When I read this portion you will definitely appreciate how this is relevant.

ಅಧ್ಯಕ್ಷರು.—ತಾವು ರೂಲ್ಸ್ ಪ್ರಕಾರ ಹೇಗೆ ಮಾಡಬಹುದು ಎಂಬುದನ್ನು ನೋಡಬೇಕೇ ವಿನಹ ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನೆ ಎಕ್ಸ್‌ಟ್ರೇನಿಯಸ್ ವಿಚಾರವನ್ನಾಗಿ ಗಮನಕ್ಕೆ ತೆಗೆದುಕೊಳ್ಳ ತಕ್ಕದ್ದು ಸರಿಯಲ್ಲ. ಅರ್ಜೆಂಟ್ ವಿಚಾರವೆಂದು ಮಾನ್ಯ ವಿರೋಧ ಪಕ್ಷದ ನಾಯಕರವರು ಪ್ರಸ್ತಾಪ ಮಾಡಿದಾಗ ಇದು ಇದರ ವ್ಯಾಪ್ತಿಯೊಳಗೆ ಬರತಕ್ಕಂಥದ್ದು ವಿಷಯವಲ್ಲ. ಇದರ ಬಗ್ಗೆ ರೂಲಿಂಗ್ ಏನು? ಹೇಗೆ ರೂಲಿಂಗ್ ಹಿಂದೆ ಬಂದಿದೆ ಎನ್ನುವುದನ್ನು ಈ ಸಭೆಯ ಗಮನವನ್ನು ಸೆಳೆದಿದ್ದೇನೆ ಅಷ್ಟೆ. ಆದುದರಿಂದ ಅದೆಲ್ಲಾ ಸಭೆಯ ರಿಕಾರ್ಡ್‌ಗೆ ಹೋಗತಕ್ಕಂಥದ್ದು ಅನುಚಿತ, ಬೇಡ, ಆದುದರಿಂದ ಅದನ್ನೆಲ್ಲಾ ರೆಫರ್ ಮಾಡುವುದು ಬೇಡ ಬೇರೆ ವಿಚಾರವಿದ್ದರೆ ಪ್ರಸ್ತಾಪ ಮಾಡಿ ಹೇಳಿ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಇದು ಲಾ ಅಂಡ್ ಆರ್ಡರ್‌ಲ್ಲೂ ಸ್ವಲ್ಪ ವೈಶಿಷ್ಟ್ಯದಿಂದ ಒಂದು ವಿಶೇಷ ಪ್ರಾಶಸ್ತ್ಯ ಬಂದಿರುವುದರಿಂದ ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಅಲೋ ಮಾಡುವುದಕ್ಕೆ ಸಕಾರಣಗಳಿವೆ ಎನ್ನುವುದನ್ನು ಮಾತ್ರ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತಿದ್ದೇನೆಯೇ ಹೊರತು ಅದೆಲ್ಲಾ ರಿಕಾಡ್ಸ್‌ನಲ್ಲಿ ಹೋಗಬೇಕೆಂದು ಹೇಳುತ್ತಿಲ್ಲ.

ಅಧ್ಯಕ್ಷರು.—ಇದನ್ನು ಏತಕ್ಕೆ ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದು ಕೊಳ್ಳಬಾರದು ಎನ್ನುವುದಕ್ಕೆ ಕೆಲವು ರೂಲಿಂಗ್ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ, ಅದು ನನ್ನ ವೈಯಕ್ತಿಕ ಅಭಿಪ್ರಾಯವಲ್ಲ. ಇದಕ್ಕೆ ಕನ್‌ಸೆಂಟ್ ಕೊಡಬೇಕೇ ಬೇಡವೇ ಎನ್ನುವ ವಿಚಾರದ ಬಗ್ಗೆ ವಿಚಾರ ಮಾಡೋಣ. ಆದುದರಿಂದ ಆ ವಿಚಾರವನ್ನೇ ಪುನಃ ನೀವು ರೆಫರ್ ಮಾಡುವುದು ಬೇಡ ಬೇರೆ ವಿಚಾರವನ್ನು ಹೇಳಿ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ತಮಗೆ ತಿಳಿದ ಪ್ರಕಾರ ಅಲ್ಲಿ ಏನು ನಡೆದಿದೆ ಎಂದರೆ ಸಾಮಾನ್ಯವಾದ ಲಾ ಅಂಡ್ ಆರ್ಡರ್ ನಡೆದಿಲ್ಲ. ಅಲ್ಲಿಯ ಕಾಲೋನಿಯವರು ಹಾಲನ್ನು ತೆಗೆದುಕೊಳ್ಳಬೇಕೆಂದು ಹೋಗಿದ್ದಾರೆ, ಆಗ ಪೀಸ್‌ಫುಲ್ ಆಗಿದ್ದವರನ್ನು ಡಿಸ್‌ಪರ್ಸ್ ಆಗಿ ಎಂದು ಹೇಳಿ, ಅವರ ಮೇಲೆ ಪೋಲೀಸಿನವರು ಕಲ್ಲು ಹೊಡೆದು, ಲಾಟಿ ಚಾರ್ಜ್ ಮಾಡಿದ್ದಾರೆ. ಮನೆ ಮನೆಗೆ ನುಗ್ಗಿ ಹೊಡೆದಿದ್ದಾರೆ.

ಒಬ್ಬ ಪತ್ರಿಕಾ ವರದಿಗಾರರ ಸಾಕ್ಷಿಯಂತೆ ಪೋಲೀಸಿನವರೇ ಕಲ್ಲು ತೂರಿದ್ದಾರೆಂದು ವರದಿಯಾಗಿದೆ. ಇಂಥಾ ಅಪಾದನೆಗಳಿರುವಾಗ, ಇಂಥಾ ಆಪಾದನೆಗಳು ಸತ್ಯವೇ, ಅಸತ್ಯವೇ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. ಇಂಥಾ ಒಂದು ವಿಚಾರ ಬಂದಾಗ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಅಗುವಂತಾ ವಿಚಾರವನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆಂದು ಮಾತ್ರ ತಿಳಿಸುತ್ತಿದ್ದೇನೆ. ಲಾ ಅಂಡ್ ಆರ್ಡರ್ ಎಂದರೆ ಏನು ? Law enforcement ಅಥಾರಿಟಿಯವರೇ, ಲಾ ಅಂಡ್ ಆರ್ಡರ್ ರೆಸ್ಟೋರ್ ಮಾಡುವಾಗ, ಈ ತರಹ ಪ್ರಾಬ್ಲಂ ಬರುವುದಿಲ್ಲ, ಆದುದರಿಂದ ಅದಕ್ಕಿಂತಹ ಒಂದು ಹೆಚ್ಚಿನ ದೌರ್ಜನ್ಯ ನಡೆದಿದೆಂದು ಅರ್ಥ ಬರುತ್ತದೆಯೇ ಹೊರತು ಇಲ್ಲಿ ಲಾ ಅಂಡ್ ಆರ್ಡರ್ ಪ್ರಶ್ನೆ ಬರುವುದಿಲ್ಲ. ಇದರ ಬಗ್ಗೆ ಸಾಕಷ್ಟು ಎವಿಡೆನ್ಸ್ ಕೂಡ ಇದೆ. ಆದುದರಿಂದ ಇದನ್ನು ತಾವು ಅಡಜರ್ನ್‌ಮೆಂಟ್ ಮೋಷನ್‌ಗೆ ಅಲೋ ಮಾಡಬೇಕು. ನಮ್ಮ ಜನತೆಗೆ ಆಡಳಿತದ ಬಗ್ಗೆ ಹೆಚ್ಚಿನ ಕಾನ್‌ಫಿಡೆನ್ಸ್ ಬರಬೇಕಾದರೆ ಇದು ಅಗತ್ಯವಿದೆ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

† SRI A. LAKSHMI SAGAR (Chickkapet).—Sir, as I sat listening to your posers and efforts at clarifications concerning the matters before you, two points strike me as important, One point you have been repeatedly telling us, is that there are alternative avenues open to the Members such as Governor's Address, Rule 63, Rule 312 etc. Ofcourse, you may even say, that we can ask questions and get answers, Therefore, according to you we have ample opportunities of ventilation of your grievances as effectively as you may be able to do by means of an Adjournment Motion. This is one thing you have been repeatedly telling us.

12.00 Noon

Another point about which you have been very vocal and vociferous that is, lathi charge. police firing are matters which are within the purview of law and order situation and therefore cannot be the subject matter of an adjournment motion. This is the second point which you have been telling us. Sir, taking the first point into consideration and the avenues available to the Members of this House under rule 63 and rule 312. that any matter can be brought under these rules if they are of public importance. I tried my level best to know and I also sought the assistance of the Secretary as to how distinction could be drawn between these two rules. He said rules are there and I cannot go beyond those rules. Then, a question arise what is the purpose of having a provision in the rules for moving an adjournment motion. What should be the consideration which should govern the admissibility or non-admissibility of an adjournment motion ?

MR. SPEAKER.—I said at a given point of time we have to consider that.

SRI A. LAKSHMISAGAR.—Sir, in which clarifications are sought, gives me mistakeable impression and if they are taken to the

logical ends, that there is no need for an adjournment motion at all in a matter like this. This appears to be the sum and substance of what you have been telling us. If it is so then what is the matter that can be brought under rule 50. Sir, I only try to draw your kind attention to this. This is from Kaul & Shakdhar 1972 edition. It reads :

> "Generally speaking, the subject-matter of an adjournment motion must have direct or indirect to the conduct or default on the part of the Government of India and must be in the nature of criticism of the action of the Government of India either for having done some action or for having omitted to do some action which was urgently necessary at the moment."

Sir, this is the sum and substance of consideration which weigh with you whether to admit or disallow the motions before you. The two motions if I may say so, substantially do not differ. The underlying point in both the motions before you is failure on the part of the Government to act under a given situation and therefore it has led to so many other consequences. This is a matter which should receive utmost consideration at your hands and if it is not there, there is no point in raising a motion under rule 50. I do not want to go into the details of the matter. Sir, you were kind enough to tell Mr. Subbayya Shetty not to quote from the newspaper.

MR. SPEAKER.—I did not say that. I said I have gone through that newspaper. ವರದಿ ಹೀಗಿದೆ ಎಂದು ಹೇಳಿದೆ

SRI A. LAKSHMISAGAR.—Sir, you have been a lawyer and hope my labour would be minimised. Sir, without stating facts can you argue a case. Please tell me can there be a argument in a vaccum. Therefore, any argument presupposes existence of facts. Facts are not in your hands or in my hands. You may say facts differently, I may say facts differently.

SRI G.B. SHANKAR RAO.—Facts cannot be different.

ಶ್ರೀ ಎ. ಲಕ್ಷ್ಮೀಸಾಗರ್.—ಹಗ್ಗ ನೋಡಿ ಹಾವು ಅನ್ನುವವರು ಇದ್ದಾರೆ, ಹಾವು ನೋಡಿ ಹಗ್ಗ ಅನ್ನುವವರು ಇದ್ದಾರೆ. ಸ್ವಲ್ಪ ಕೇಳಿ, ಅವಸರ ಮಾಡಬೇಡಿ. ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ,

ಅಧ್ಯಕ್ಷರು.—ದಯವಿಟ್ಟು ಯಾವುದೇ ಸದಸ್ಯರನ್ನು ಕುಳಿತುಕೊಳ್ಳಿ ಎಂದು ತಾವು ಹೇಳಕೂಡದು.

ಶ್ರೀ ಎ. ಲಕ್ಷ್ಮೀಸಾಗರ್.—ದಯಮಾಡಿ ಕುಳಿತುಕೊಳ್ಳಿ ಎಂದು ಹೇಳಬಹುದು. ಆ ಕೆಲಸವನ್ನು ತಾವೇ ಮಾಡಿ, ಬಹಳ ಸಂತೋಷ.

MR. SPEAKER.—Why I said was once it was seriouly contested by a Member of this House.

SRI A. LAKSHMISAGAR.—I take the clue from you. Therefore, minimum statement of facts governing the issue under consideration must be stated and the facts according to his knowledge and information must be placed. If this is also not done there is no need for an adjournment motion or any other motion for that matter. Sir, I am not going to dilate upon it because you have stated you have gone through the papers relating to all those days, the horrible days and therefore there is no need for me go to into and draw your attention to particular facts that should be borne in mind while considering the motion of this type. The sum and substance of the entire argument comes down to this, namely, that the Leader of Opposition had read the relevant rule and rule 51 also and principles that should govern the admissibility of motion of this type. You were good enough to say that *prima facie* the motion appears to be within the four corners of these rules. But then you went on seeking clarifications. Therefore, my only submission is you cannot quote 1953 decision of this House or any other decisions and say that decision holds good to this case. Sir, you know facts are different. Facts can never be similar from one instance to another instance. Therefore, my submission is that the previous ruling may not apply to this case because the facts in the present motion which is before you are different. There are certain points which I would like to bring to the notice of the Government which never happened in any police firing in the State of Karnataka. After all this is only the ventiliating chamber in which we wanted to ventilate the grievances by resorting to rule 50 considered to be strong one which we are entitled to make use of it on this occasion. Therefore, the subtance and the intention behind the motion that we have brought before this House is to protect the interest of the people. The interest of the people must be the highest interest and in order to safeguard the interest of the people we have brought forward this motion. Therefore, I request the Chair to consider this motion and give consent so that discussion may take place and it may also help the Government. Let not the Government be under the impression that we are making use of this to attack the Government. That is not our intention.

Last point is Government has announced a Magisterial Enquiry into these incidents. I have sad experience about the Magisterial enquiry which is done under the provisions of the Criminal Procedure Code. The Magisterial Enquiry can be conducted by a Tahsildar or Sub-Division Magistrate or the Deputy Commissioner.

Sir, they are all civil servants. There are judicious minded civil servants and civil servants otherwise. Unfortunately, I had a sad experience of a matter in which I participated on behalf of the

aggrieved party. There are series of limitations to an enquiry by an executive Magistrate in matters like this. I cannot challenge his finding which I did in Salam Sab's Case. The scope of inquiry is very limited. The cross-examination is generally not permitted. We have to take the permission to cross-examine the witnesses who are produced on the other side and the findings given by him are binding. When challenged the findings of the District Magistrate, the High Court observed, 'following a decision of the Supreme Court, there can be no reopening of such issues. You have no right to file an appeal, revision *etc.*, against a decision of an executive Magistrate'. Therefore, no useful purpose will be served by conducting a Magisterial Inquiry. It is merely an eye-wash to mislead the people and it appears to be the intention of the Government. Therefore, we are not going to accede to the announcement made by the Government for conducting a Magisterial Inquiry. This is my submission.

Lastly sir, kindly give your considered opinion, here & now, and see that opportunity is provided to us to express our point so that the Government may revise their opinion and come forward to announce the Judicial Inquiry into these incidents.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರ)—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಈ ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡಬೇಕೆಂದು ಅನೇಕರು ಮಾತನಾಡಿದ್ದಾರೆ. ಇದರ ಬಗ್ಗೆ ಸಾಕಷ್ಟು ವಿಷಯ ಗಳನ್ನು ತಮ್ಮ ಮುಂದೆ ಹೇಳಿದ್ದಾರೆ. ತಾವು ಯಾವುದೋ ಒಂದು ರೂಲಿಂಗನ್ನು......

ಅಧ್ಯಕ್ಷರು.—ಯಾವುದೋ ಒಂದು ರೂಲಿಂಗನ್ನು ಹೇಳಲಿಲ್ಲ, ಈ ಸಭೆಯ ರೂಲಿಂಗನ್ನು ಹೇಳಿದ್ದೇನೆ.

ಶ್ರೀ ಪಿ. ರಾಮದೇವ್.—ಈ ಸಭೆಯಲ್ಲಿ ಇಂಥ ಒಂದು ವಿಚಾರದಲ್ಲಿ ಕೊಟ್ಟಿರತಕ್ಕ ರೂಲಿಂಗನ್ನು ಸಭೆಯ ಮುಂದೆ ಇಟ್ಟಿದ್ದೀರಿ. ಆದರೆ ಆ ರೂಲಿಂಗನ್ನು ಬದಲಾವಣೆ ಮಾಡಬಾರದು ಎಂದೇನೂ ಇಲ್ಲ. ಹಿಂದೆ ಕೊಟ್ಟಿರತಕ್ಕದ್ದೇನೂ ಶಾಶ್ವತವಾದುದಲ್ಲ. ತಾವು ಎಲ್ಲಾ ತಿಳಿದಿರುವವರು, ತೀಕ್ಷ್ಣಮತಿಗಳು. ತಾವು ಇದನ್ನು ಬದಲಾವಣೆ ಮಾಡಿ ತಮ್ಮ ಕಾಲದಲ್ಲಾದರೂ ಕೆಲವು ಹೊಸ ರೂಲಿಂಗನ್ನು ಕೊಡತಕ್ಕ ಪ್ರಯತ್ನ ಮಾಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಾ ಈ ನಿಲುವಳಿ ಸೂಚನೆಗೆ ತಾವು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಸಕಾರಣವಾಗಿದೆ ಎಂದು ಹೇಳುವುದಕ್ಕೆ ಮೂರು ಕಾರಣಗಳನ್ನು ಕೊಡುತ್ತೇನೆ. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಯಾವರೀತಿ ಜರೂರಾಗಿದೆ ಎಂದರೆ......

ಅಧ್ಯಕ್ಷರು.—ತಮ್ಮ ಸೂಚನೆಯಲ್ಲಿದೆ ತಾವು ಹೇಳಿದ್ದೀರಿ. ಆ ಬಗ್ಗೆ ಬೇರೆಯವರೂ ಕೂಡ ಸಾಕಷ್ಟು ಹೇಳಿದ್ದಾರೆ.

ಶ್ರೀ ಪಿ. ರಾಮದೇವ್.—ಬೇರೆಯವರು ಸಾಕಷ್ಟು ತಮ್ಮ ಮುಂದೆ ಹೇಳಿದ್ದಾರೆ. ಆದರೆ ನಾನು ಸಾರ್ವಜನಿಕ ಹಿತದೃಷ್ಟಿಯಿಂದ ಏತಕ್ಕೆ ಜರೂರಾಗಿದೆ ಎಂದು ಹೇಳುತ್ತಿದ್ದೇನೆಂದರೆ......

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಸಾರ್ವಜನಿಕ ಹಿತದೃಷ್ಟಿಯಿಂದ ಜರೂರಾದ ವಿಷಯ ವಾಗಿದ್ದರೆ ಎಲ್ಲರೂ ಇಷ್ಟು ಹೊತ್ತು ಮಾತನಾಡಿ ಇಷ್ಟು ಸಮಯ ಕಳೆಯುತ್ತಿರಲಿಲ್ಲ.

ಶ್ರೀ ಪಿ. ರಾಮದೇವ್.—ಜರೂರಾದ ವಿಷಯ ಎಂಬುದನ್ನು ತಾವು ಒಪ್ಪಿಕೊಂಡರೆ ಸಾಕು. ನಿಮಗೆ ಸಮಯ ಎಷ್ಟು ಮುಖ್ಯವೋ ನಮಗೂ ಅಷ್ಟೇ ಮುಖ್ಯ. ಆದರೆ ನಿಮ್ಮ ರಕ್ತ ದಾಹವನ್ನು ಇಂಗಿಸಬೇಕು ಎಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಆ ದಾಹವನ್ನು ನೀವು ಬಿಡಿ. ಏತಕ್ಕೆ

ಜರೂರಾಗಿದೆ ಎಂದು ಹೇಳುತ್ತಿದ್ದೇವೆಂದರೆ ಇವತ್ತು ಮಾನ್ಯ ಪೋಲೀಸ್ ಕಮಿಷನರ್ ಶ್ರೀ ನಿಜಾಮುದ್ದೀನ್ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಆ ಪ್ರಕರಣ ನಡೆದ ದಿವಸ ಹೆಂಗಸರ ಮೇಲೆ ಅತಿರೇಕ ಮಾಡಿದ ಬಗ್ಗೆ ಕ್ಷಮಾಪಣೆ ಕೇಳುತ್ತೇನೆ ಎಂದು ಹೇಳಿದ್ದಾರೆ. ಮಹಿಳೆಯರ ಮಾನಭಂಗ ಪೋಲೀಸರಿಂದ ಆದಾಗ ಸರ್ಕಾರ ನ್ಯಾಯಾಂಗ ತನಿಖೆ ಮಾಡುವುದಿಲ್ಲ ಎಂದು ಹೇಳಿದರೆ ಎಲ್ಲರೂ ತಲೆ ತಗ್ಗಿಸಬೇಕಾಗಿದೆ. ಶ್ರೀ ನಿಜಾಮುದ್ದೀನ್ ಅವರು ನೀಡಿದ ಹೇಳಿಕೆ ಈ ರೀತಿ ಇದೆ.

"Police Commissioner A R. Nizamuddin, who briefed the newsmen in the evening on the incidents of the day, said he had apoligised to three women who received blows in the H. A. L. Colony when the policemen resorted to lathi charge".

ಶ್ರೀ ಕಾಗೋಡು ತಿಮ್ಮಪ್ಪ (ಲೋಕೋಪಯೋಗಿ ಮಂತ್ರಿ)—ಮಾನ್ಯ ಅಧ್ಯಕ್ಷರೇ, ಈಗ ಚರ್ಚೆ ಆಗುತ್ತಿರುವುದು ಈ ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡಬೇಕೇ ಬಿಡಬೇಕೇ ಎಂಬ ಬಗ್ಗೆ.

ಶ್ರೀ ಪಿ. ರಾಮ ದೇವ್.—ಹೆಂಗಸರು ಮತ್ತು ಮಕ್ಕಳ ಮಾನಭಂಗ ಪೋಲೀಸರಿಂದ ರಾಜ್ಯದಲ್ಲಿ ಆಗುತ್ತಿದೆ. ಆದರೂ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಿಲ್ಲ ಎಂದು ಹೇಳಿದರೆ ಹೇಗೆ? ಎರಡನೆಯದಾಗಿ ದಿನಕ್ಕೆ ಎರಡೂವರೆ ಕೋಟಿ ರೂಪಾಯಿಯಂತೆ ಸುಮಾರು ೧೦೦ ಕೋಟಿ ರೂಪಾಯಿ ನಷ್ಟ ಮುಷ್ಕರದಿಂದಾಗಿ ಆಗಿದೆ. ಕೇವಲ ಮೂರು ಕೋಟಿ ರೂಪಾಯಿ ಬೇಡಿಕೆಗೋಸ್ಕರ ನೂರು ಕೋಟಿ ರೂಪಾಯಿ ನಷ್ಟ ಆಗಿದೆ. ಆ ನಷ್ಟ ರಾಜ್ಯದ ಎಲ್ಲ ಜನರ ಮೇಲೆ ಬೀಳುತ್ತಿದೆ. ಆ ದೃಷ್ಟಿಯಿಂದ ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮೂರನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಸಹಾನುಭೂತಿಯಿದ್ದರೆ ಬಹಳ ಸಂತೋಷ. ಸರ್ಕಾರಕ್ಕೆ ಸಹಾನುಭೂತಿ ಇರಬಹುದು. ಫೈರಿಂಗ್ ಏನು ಆಗಿದೆ ಅದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದಾರೆ ಎಂದು ಅನ್ನಿಸುವುದಿಲ್ಲ. ಆದ್ದರಿಂದ ಇದರಲ್ಲಿ ಯಾರ ಕೈವಾಡ ಇದೆ, ಯಾವ ರೀತಿ ಆಯಿತು, ಪೋಲೀಸರು ಹೇಗೆ ವರ್ತಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನನಗನ್ನಿಸುತ್ತದೆ ಪೋಲೀಸರೇ ಉದ್ರಿಕ್ತರಾಗಿ ಜನಗಳ ಮೇಲೆ ದಾಳಿ ಮಾಡಿದ್ದಾರೆ ಎಂದು. ಕಾನೂನು ಮತ್ತು ಶಿಸ್ತು ಪಾಲನೆಯನ್ನು ಯಾರು ಕಾಪಾಡಬೇಕೋ ಅವರೇ ಇವತ್ತು ಸಮಸ್ಯೆಯನ್ನು ನಿರ್ಮಾಣ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಇದನ್ನು ವಿಚಾರ ಮಾಡಬೇಕು ಎಂದು ಹೇಳುತ್ತಿದ್ದೇನೆ. ಮುಷ್ಕರ ಪ್ರಾರಂಭವಾಗಿ ೪೦ ದಿವಸಗಳಾದರೂ ನೆಗೋಷಿಯೇಟಿಂಗ್ ಟೇಬಲ್‌ಗೆ ಕಾರ್ಮಿಕ ನಾಯಕರನ್ನು ಕರೆದಿಲ್ಲ ಈ ಎಲ್ಲ ದೃಷ್ಟಿಯಿಂದ ಈ ನಿಲುವಳಿ ಸೂಚನೆಗೆ ಮಾನ್ಯ ಅಧ್ಯಕ್ಷರು ಒಪ್ಪಿಗೆ ಕೊಟ್ಟು ಹೊಸ ಸಂಪ್ರದಾಯವನ್ನು ಹಾಕಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ)—ಮಾನ್ಯ ಅಧ್ಯಕ್ಷರೇ, ಇದುವರೆಗೂ ಮಾನ್ಯ ಮಿತ್ರರು ಹೇಳಿದಂಥ ವಿಷಯಗಳನ್ನು ಕೇಳಿದಾಗ ನನಗೆ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ಆಲಿವರ್ ಗೋಲ್ಡ್ ಸ್ಮಿತ್ ಎಂಬ ಸಾಹಿತಿ ಒಂದು ಪ್ರಬಂಧವನ್ನು ಬರೆದಿದ್ದಾನೆ. ಒಮ್ಮೆ ಲಂಡನ್ ನಗರದಲ್ಲಿ ೧೦ ಗಂಟೆ ರಾತ್ರಿಯಲ್ಲಿ ಒಬ್ಬ ವೃದ್ಧೆ ನಾಯಿಮರಿ ತೆಗೆದುಕೊಂಡು ಬಸ್ಸಿಗೆ ಹತ್ತುತ್ತಾಳೆ. ಆ ಬಸ್ಸಿನಲ್ಲಿ "Dogs are not allowed" ಎಂದು ಬೋರ್ಡಿರುತ್ತದೆ. ಕಂಡಕ್ಟರ್ ನಾಯಿಮರಿಯನ್ನು ಒಳಗೆ ಬಿಡುವುದಿಲ್ಲ ಎಂದು ಹೇಳುತ್ತಾನೆ. ಅದಕ್ಕೆ ವೃದ್ಧೆ 'ಈಗ ರಾತ್ರಿಯಾಗಿದೆ, ಜೊತೆಗೆ ಚಳಿ ಬೇರೆ ಆಗುತ್ತಿದೆ, ಆದ್ದರಿಂದ ನಾನು ಬಸ್ಸನ್ನು ಬಿಟ್ಟು ಕೆಳಗೆ ಇಳಿಯುವುದಿಲ್ಲ' ಎಂದು ಹೇಳುತ್ತಾಳೆ. ಕಂಡಕ್ಟರ್ ಇಳಿ ಎಂದು ಹೇಳುತ್ತಾನೆ ಕೊನೆಗೆ ಬಸ್ಸೂ ಮುಂದಕ್ಕೆ ಹೋಗುವುದಿಲ್ಲ, ವೃದ್ಧೆಯೂ ಕೆಳಗೆ ಇಳಿಯುವುದಿಲ್ಲ. ಹಾಗೆ ಕಾನೂನನ್ನು ಅನುಸರಿಸಬೇಕೆಂದರೆ ಎರಡೂ ಕೆಲಸ ನಡೆಯುವುದಿಲ್ಲ. ಈ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಈ ನಿಲುವಳಿ ಸೂಚನೆಯನ್ನು ತಂದಿರುವ ಉದ್ದೇಶ, ದೇಶದಲ್ಲಿ ಏನು ಅನಾಹುತ ಅಕಾರಣವಾಗಿ ಆಗಿದೆ ಅದರ ಬಗ್ಗೆ ನಮ್ಮ ಅನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶ ಕೊಡಬೇಕು ಎಂದು. ನಾವು ಶಾಸಕರಾಗಿ ಬಂದು ಮಾಡತಕ್ಕ ಕೆಲಸವೇನೆಂದರೆ ಸಮಾಜದಲ್ಲಿ ಆಗಿರುವುದನ್ನು, ಆಗುವುದನ್ನು ದೇಶದಮುಂದೆ, ಸದನದ ಮುಂದೆ ಇಡುತ್ತೇವೆ. ವಿರೋಧಪಕ್ಷದಲ್ಲಿ ನಾವು ನಮ್ಮ ಅನಿಸಿಕೆಗಳನ್ನು, ಭಾವನೆಗಳನ್ನು ಸಭೆಯ ಮುಂದೆ ಇಡುತ್ತೇವೆ. ನಾವು ಹೇಳುವುದನ್ನು ಹೇಳುತ್ತೇವೆ, ಸರ್ಕಾರ ಮಾಡುವುದನ್ನು ಮಾಡುತ್ತದೆ. ನಾವು ಹೇಳುತ್ತಲೇ ಬಂದಿದ್ದೇವೆ, ಸರ್ಕಾರ ಗುಂಡು ಹೊಡೆಯುತ್ತಲೇ ಇದೆ. ಈ ಸಮಸ್ಯೆಗೆ ಪರಿಹಾರ ಹುಡುಕಲು ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ತಂದು......

ಶ್ರೀ ಜೆ. ಹೆಚ್. ಪಟೇಲ್.—ಆ ಮುದುಕಿ ನಾಯಿಮರಿಯನ್ನು ಬಿಡುವುದಕ್ಕೆ ಯಾವ ರೀತಿ ತಯಾರಿಲ್ಲವೋ ಆ ರೀತಿ ಇವರು ಪೋಲೀಸರನ್ನು ಬಿಡುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು.—ತಾವು ಈ ಕಡೆ ಬಂದರೂ ಪೋಲೀಸರನ್ನು ಬಿಡುವುದಕ್ಕೆ ತಯಾರಿರುವುದಿಲ್ಲ.

ಶ್ರೀ ಹೆಚ್. ಗಂಗಾಧರನ್.—ಪ್ರಮುಖವಾದ ವಿಷಯ ಸಭೆಯ ಮುಂದಿದೆ. ದೇಶದಲ್ಲಿ ಎಲ್ಲಾ ವಸ್ತುಗಳ ಬೆಲೆ ಏರುತ್ತಿದೆ, ಆದರೆ ಮನುಷ್ಯನ ಜೀವನ ಬೆಲೆ ಮಾತ್ರ ಕಡಿಮೆಯಾಗುತ್ತಿದೆ. ಪೋಲೀಸರು ಅನೇಕ ಜೀವಗಳನ್ನು ತೆಗೆದುಕೊಂಡಿದ್ದಾರೆ, ಇದಕ್ಕೆ ಕಾರಣ ಏನು, ಏನು ನಡೆಯುತ್ತಿದೆ ಎಂಬುದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿದೆ. ಚರ್ಚೆಗೆ ಅವಕಾಶ ಕೊಡಬೇಕೇ ಬೇಡವೇ ಎಂಬ ಬಗ್ಗೆ ಎರಡು ಗಂಟೆಗಳ ಕಾಲ ವ್ಯಯ ಮಾಡಿದ್ದೇವೆ. ಆದರೂ ಸಮಸ್ಯೆ ಬಾಗಿಲಿನಿಂದ ಹೊರಗೆ ನಿಂತಿದೆಯೇ ಹೊರತು ವಿಷಯಕ್ಕೆ ಬರಲು ಅವಕಾಶವಾಗಿಲ್ಲ. ಇವತ್ತು ಸಣ್ಣ ಘಟನೆಯಾಗಿರಬಹುದು, ಸಣ್ಣ ವಿಷಯವಾಗಿರಬಹುದು. ಸರ್ಕಾರ ತನ್ನ ಕೈಯಲ್ಲಿದ್ದಂಥ ಅಸ್ತ್ರವನ್ನು ಸರಿಯಾಗಿ ಬಳಕೆ ಮಾಡಿಕೊಂಡಿದ್ದರೆ ಇಂಥ ದುರ್ಘಟನೆ ದೇಶದಲ್ಲಿ ಆಗುತ್ತಿರಲಿಲ್ಲ. ನಾಲ್ಕೈದು ಜೀವಗಳ ಕೊಲೆಯಾಗುತ್ತಿರಲಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಕೊಡಲಿಲ್ಲ. ಬಿ. ಹೆಚ್. ಇ. ಎಲ್. ಕಾರ್ಖಾನೆಯ ನೌಕರರಿಗೆ ನೀಡುವ ಸಮಾನವೇತನವನ್ನು ಹೆಚ್. ಎ. ಎಲ್., ಹೆಚ್. ಎಂ. ಟಿ. ಮುಂತಾದ ಕಾರ್ಖಾನೆಯ ನೌಕರರಿಗೂ ಕೊಡುತ್ತೇವೆಂದು ಒಪ್ಪಂದ ಮಾಡಿಕೊಂಡಿದ್ದರೂ......

ಅಧ್ಯಕ್ಷರು.—ಅದೆಲ್ಲ ವಿವರಗಳೂ ಈಗ ಬೇಡ.

ಶ್ರೀ ಹೆಚ್. ಗಂಗಾಧರನ್.—ಒಪ್ಪಂದ ಮಾಡಿಕೊಂಡಿದ್ದರೂ ಮತ್ತು ಸುಮಾರು ೩೦ ದಿವಸಗಳ ಕಾಲ ಕಾರ್ಮಿಕರು ಸತ್ಯಾಗ್ರಹ ಮಾಡಿದರೂ ಇದರ ಬಗ್ಗೆ ಕಾರ್ಮಿಕ ಇಲಾಖೆ ಕ್ರಮ ತೆಗೆದುಕೊಳ್ಳಲಿಲ್ಲ. ಕ್ರಮ ತೆಗೆದುಕೊಂಡಿದ್ದರೆ ಈ ಅನಾಹುತ ಆಗುತ್ತಿರಲಿಲ್ಲ. ಕೇಂದ್ರಾಧೀನ ಕಾರ್ಖಾನೆಗಳ ಕಾರ್ಮಿಕರು ಮುಷ್ಕರ ಹೂಡಿರುವುದರಿಂದ ರಾಷ್ಟ್ರದ ಆರ್ಥಿಕ ರಂಗದ ಮೇಲೆ ಏನು ಪರಿಣಾಮ ಬೀರುತ್ತದೆ ಎಂಬುದನ್ನು ನಾವು ಹೇಳಬೇಕಾಗುತ್ತದೆ. ಎರಡು ಗಂಟೆಗಳವರೆಗೆ ಅವಕಾಶ ಕೊಡುವುದರ ಬದಲು ಈ ವಿಷಯದಲ್ಲಿ ವಿವರಗಳನ್ನು ತಿಳಿಸಲು ಎರಡು ಗಂಟೆಗಳ ಕಾಲ ಅವಕಾಶ ಕೊಟ್ಟಿದ್ದರೆ ಎಲ್ಲ ವಿಷಯವನ್ನೂ ಹೇಳುವುದಕ್ಕೆ ನಮಗೆ ಸಾಧ್ಯವಾಗುತ್ತಿತ್ತು.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು ಈಗಾಗಲೇ ಮಾತನಾಡಿದ್ದಾರೆ ಮತ್ತು ಇತರ ಪಕ್ಷಗಳ ನಾಯಕರುಗಳೂ ಸಹ ಮಾತನಾಡಿದ್ದಾರೆ. ಅಲ್ಲಿಗೇ ಚರ್ಚೆಯನ್ನು ನಿಲ್ಲಿಸಿದ್ದರೆ ಎರಡು ಗಂಟೆಗಳವರೆಗೆ ಹೋಗುವ ಪ್ರಮೇಯವಿರುತ್ತಿರಲಿಲ್ಲ.

ಶ್ರೀ ಹೆಚ್. ಗಂಗಾಧರನ್—ನಿಲುವಳಿ ಸೂಚನೆ ಬಂದ ಕೂಡಲೇ ಸರ್ಕಾರಕ್ಕೆ ಗಾಬರಿಯಾಗುತ್ತದೆ. ಮಾನ್ಯ ಅಧ್ಯಕ್ಷರಿಂದ ಗಾಬರಿಯಾಗುತ್ತದೆ. ಇದನ್ನು ಬಿಡಬೇಕು. ಸಾಮರಸ್ಯದಿಂದ ಚರ್ಚೆ ಮಾಡಿದರೆ ಏನಾಗುತ್ತದೆ ? ವಿಚಾರವೇನೆಂಬುದನ್ನು ನಾವು ಹೇಳುತ್ತೇವೆ, ಮಂತ್ರಿಗಳು ಉತ್ತರ ಕೊಡುತ್ತಾರೆ. ಆದರೆ, ನಾವು ವಿಚಾರವನ್ನೇ ಹೇಳುವುದು ಬೇಡವೆಂದರೆ ಹೇಗೆ ? ಹಾಗೆಂದು ಏತಕ್ಕೆ ಹೇಳುತ್ತೀರಿ ? ನನಗೆ ಗೊತ್ತಿರುವ ವಿಷಯವನ್ನು ದೇಶಕ್ಕೆ ತಿಳಿಸಬೇಡವೆ ? ನಿಲುವಳಿ ಸೂಚನೆ ಮೂಲಕ ನನಗೆ ಗೊತ್ತಿರತಕ್ಕ ವಿಷಯವನ್ನು ತಿಳಿಸಲು ಅಡ್ಡಬರುವುದಾದರೆ ನಿಮ್ಮಲ್ಲೇನೋ ಕಳಂಕವಿರಬೇಕು. ಸುಮ್ಮನೆ ಆತಂಕವನ್ನೇಕೆ ಪಡುತ್ತೀರಿ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದ ಪ್ರಶ್ನೆ ಇನ್ನೂ ಉದ್ಭವವಾಗಿಲ್ಲ. ನಿಲುವಳಿ ಸೂಚನೆಗೆ ಅಂಗೀಕಾರ ಕೊಡಬೇಕೇ ಅಥವಾ ಬೇಡವೆ ಎನ್ನುವ ಹಂತದಲ್ಲಿದ್ದೇವೆ.

SRI H. GANGADHARAN.—I am sorry, I am asking—if the Government is honest, why should they prevent us from narrating the facts.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ಇಲ್ಲಿ ಸರ್ಕಾರದ ಪ್ರಶ್ನೆ ಬರುವುದಿಲ್ಲ. ನಿಲುವಳಿ ಸೂಚನೆಗೆ ಅಂಗೀಕಾರ ಕೊಡಬೇಕೇ ಅಥವಾ ಬೇಡವೆ ಎನ್ನುವ ಬಗ್ಗೆ ಈಗ ಚರ್ಚೆ ನಡೆಯುತ್ತಿದೆ. ಚರ್ಚೆಯನ್ನು ಕೇಳಿದ ಮೇಲೆ ಅದನ್ನು ಒಪ್ಪುವುದು ಬಿಡುವುದು ತಮಗೆ ಬಿಟ್ಟಿದ್ದು. ಆದುದರಿಂದ, ಮಾನ್ಯ ಸದಸ್ಯರು ನಿಲುವಳಿ ಸೂಚನೆ ಬಂದಾಕ್ಷಣ ಸರ್ಕಾರ ಅನುಮಾನ ಪಡುತ್ತದೆ ಅಥವಾ ಗಾಬರಿಪಡುತ್ತದೆಂದು ಹೇಳುವುದು ಅವರ ಗಾಬರಿಯನ್ನು ತೋರಿಸುತ್ತದೆಂದು

ನಾನು ಹೇಳಬೇಕಾಗುತ್ತದೆ. ಇಲ್ಲಿ ಕೇಸ್ ಇಲ್ಲದಿದ್ದರೂ ಹೆಚ್ಚು ಸದಸ್ಯರು ಬಂದರೆ ದೊಡ್ಡ ಕೇಸ್ ಮಾಡಬಹುದೆಂದು ಅವರು ಭಾವಿಸಿರಬಹುದು. ಆದರೆ mere numbers cannot make a case, it is the quality of your case which can make out a case.

ಶ್ರೀ ಜೆ. ಹೆಚ್. ಪಟೇಲ್.—ಹೌದು, ಜನರಿಗೆ ತೊಂದರೆ ಅಥವಾ ಸಾವು ನೋವು ಉಂಟಾದರೆ ನಮಗೆ ಗಾಬರಿಯಾಗುತ್ತದೆ, ಅವರಿಗೆ ಏನೂ ಗಾಬರಿಯಾಗುವುದಿಲ್ಲ !

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ನನ್ನ ವಿನಂತಿ ಇಷ್ಟೆ : ವಿಷಯಗಳನ್ನು ಅರಿತಿರುವ ಸದಸ್ಯರಿಗೆ ಅವುಗಳನ್ನು ಸಭೆಯ ಮುಂದಿಡಲು ಅವಕಾಶ ಕೊಡಬೇಕು. ವಿಷಯಗಳನ್ನು ಕೂಲಂಕಷವಾಗಿ ಮತ್ತು ನಿಷ್ಪಕ್ಷಪಾತವಾಗಿ ಚರ್ಚೆ ಮಾಡಿದರೆ ನಮಗಾಗುವ ನಷ್ಟವೇನು ? ಅನ್ಯಾಯ ವನ್ನು ತಡೆಯುವುದು ಸರ್ಕಾರದ ಕರ್ತವ್ಯವಾಗಿದೆ. ಇದರಲ್ಲಿ ಸರ್ಕಾರಕ್ಕೆ ಎಷ್ಟು ಹೊಣೆ ಇದೆಯೋ ಅಷ್ಟೇ ಹೊಣೆ ಸದಸ್ಯರಾದ ನಮಗೂ ಇದೆ. ಆದುದರಿಂದ, ಮಾನ್ಯ ಅಧ್ಯಕ್ಷರು ಸಹಕರಿಸಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಎಲ್ಲೋ......

ಶ್ರೀ ಹೆಚ್. ಗಂಗಾಧರನ್.—ತಾವು ನನ್ನನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ ವೆಂದು ಕಾಣಿಸುತ್ತದೆ. I am not discussing about the facts. I am explaining the reasons as to why you could have allowed us.

ಶ್ರೀ ಕಾಗೋಡುತಿಮ್ಮಪ್ಪ.—ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇವೆಲ್ಲವನ್ನೂ ಹೇಳುವುದಕ್ಕೆ ಸಾಕಷ್ಟು ಅವಕಾಶವಿರುತ್ತದೆ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ರಾಜ್ಯಪಾಲರ ಭಾಷಣ ಇಲ್ಲವೇ ಇಲ್ಲ, ಅದರ ಬಗ್ಗೆ ಹೇಳುವುದಕ್ಕೆ ಬೇರೆ ಕಾಲ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಗುಣಗಾನ ಆಗ ಮಾಡೋಣ !

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ದೇಶದ ಮುಂದೆ ಸತ್ಯಾಂಶವನ್ನು ಇಡುತ್ತೇವೆ. ಅದಕ್ಕೇಕೆ ನಾವು ಅಂಜಿಕೊಳ್ಳಬೇಕು ? ದೇಶದಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಸರ್ಕಾರದ ಗಮನಕ್ಕೆ ತಂದು ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಹಾಗೆ ಅವುಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದಾಗ, ಹಾಗೆ ತರಬಾರದೆಂದು ಹೇಳುವುದು ಸರಿಯಲ್ಲ. ಯಾವುದಾದರೊಂದು ಕಾನೂನಿನ ಚೌಕಟ್ಟಿನಲ್ಲಿ ಇದನ್ನು ನಾವು ತರಬೇಕಾಗು ತ್ತದೆ. ಯಾವ ತಟ್ಟೆಯಲ್ಲಿ ಊಟ ಮಾಡಿದರೂ ಹೊಟ್ಟೆ ತುಂಬುವುದು ಮುಖ್ಯವಲ್ಲವೆ ? ನಿಯಮ ೬೩ ರಲ್ಲಿ ಚರ್ಚೆ ಮಾಡಿ ೩೧೨ ರಲ್ಲಿ ಚರ್ಚೆಮಾಡಿ ಎಂದು ಹೇಳಿದರೆ ಹೇಗೆ ? ಈ ನಿಯಮದ ಪ್ರಕಾರ ತಂದರೆ ನಮಗೆ ಹೆಚ್ಚು ಕಾಲಾವಕಾಶ ಸಿಗುತ್ತದೆ; ಅದರಿಂದ ಹೆಚ್ಚು ಸಮರ್ಪಕವಾಗಿ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ, ಮಾನ್ಯ ಅಧ್ಯಕ್ಷರು ಇದಕ್ಕೆ ಅನುಮತಿ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಂ. ಚಂದ್ರಶೇಖರ್ (ಜಯನಗರ) —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರನೇಕರು ಈ ನಿಲುವಳಿ ಸೂಚನೆ ಕುರಿತು ಮಾತನಾಡಿದ್ದಾರೆ. ನಾನು ಇದರ ತೀವ್ರತೆ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ರೈತರ ಹೋರಾಟ ಸಮಯದಲ್ಲಿ ಪೋಲೀಸರ ಅತಿರೇಕದಿಂದ ನರಗುಂದದಲ್ಲಿ ಹತ್ತಿ ಕೊಂಡ ಕಿಚ್ಚು ಇನ್ನೂ ಬೆಳೆಯುತ್ತಿದೆ. ಅಂತಹ ಸಮಯದಲ್ಲಿ ಕಾರ್ಮಿಕ ರಂಗದಲ್ಲಿ ಕೂಡ ಕಿಚ್ಚು ಹೆಚ್ಚಿದ್ದು ರೈತ ಮತ್ತು ಕಾರ್ಮಿಕರ ಎರಡು ಕಿಚ್ಚುಗಳೂ ಬೆಳೆದಾಗ ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಎಷ್ಟರಮಟ್ಟಿಗೆ ಇರುತ್ತದೆಂಬುದನ್ನು ಮತ್ತು ಅದರ ತೀವ್ರತೆಯನ್ನು ನಾವು ಸುಲಭವಾಗಿ ತಳ್ಳಿಹಾಕು ವುದಕ್ಕಾಗುವುದಿಲ್ಲ. ಇದಕ್ಕೆ ಏನಾದರೂ ಪರಿಹಾರ ಹುಡುಕಲೇಬೇಕು. ನರಗುಂದದಲ್ಲಿ ರೈತರು ಪ್ರದರ್ಶನ ಬಂದಾಗ ಸ್ಥಳೀಯ ತಹಶೀಲ್ದಾರರು ಸರಿಯಾದ ರೀತಿಯಲ್ಲಿ ನಡೆದುಕೊಂಡಿದ್ದರೆ ಅಲ್ಲಿನ ಪ್ರದರ್ಶನ ಹನ್ನೆರಡು ಮಂದಿಯ ಸಾವಿನೊಂದಿಗೆ ಮುಗಿಯುತ್ತಿರಲಿಲ್ಲ. ಅದೇ ರೀತಿ ಬೆಂಗಳೂರಿನಲ್ಲೂ ಕೂಡ, ಹಾಲು ತೆಗೆದುಕೊಂಡು ಹೋಗಲು ಗುಂಪು ಸೇರಿದ್ದರೆ, ಸೆಕ್ಷನ್ ೩೫ ನ್ನು ಜಾರಿಗೊಳಿಸಿರು ವುದರಿಂದ ನಾಲ್ಕು ಜನರ ಮೇಲೆ ನಿಲ್ಲಬಾರದೆಂದು ಹೇಳಿ, ಅವರ ಮೇಲೆ ಲಾಠಿ ಚಾರ್ಜ್ ಮಾಡುವುದೇ ? ಅವರೇನು ತೊಂದರೆ ಉಂಟು ಮಾಡುವುದಕ್ಕೆ ನಿಂತಿದ್ದರೆ ? ಹಾಲು ತೆಗೆದುಕೊಂಡು ಹೋಗುವ ನಿತ್ಯ

ವ್ಯವಹಾರಕ್ಕೆ ಅವರು ಅಲ್ಲಿ ನಿಂತಿದ್ದರು. ಪೋಲಿಸರು ಲಾಠಿ ಚಾರ್ಜ್ ಮಾಡಿದಾಗ ಅವರು ಪಾತ್ರೆಗಳನ್ನು ಅಡ್ಡ ಹಿಡಿದು ರಕ್ಷಣೆ ಮಾಡಿಕೊಳ್ಳಬೇಕಾಗಿ ಬಂತು. ಅನಂತರ ಪೋಲಿಸರು ಪ್ರಚೋದನೆಯಿಂದ ಕಲ್ಲು ಹೊಡೆದದ್ದು ನಿಜ. ಅದು ಸ್ವಾಭಾವಿಕ.

ಅಧ್ಯಕ್ಷರು.—ತಾವು ವಿಷಯಕ್ಕೆ ಹೋಗುತ್ತಿದ್ದೀರಿ.

ಶ್ರೀ ಎಂ. ಚಂದ್ರಶೇಖರ್.—ಪೋಲಿಸರು ಸರಿಯಾಗಿ ವರ್ತಿಸಿದ್ದರೆ ಪರಿಸ್ಥಿತಿ ಕೈಮೀರಿ ಹೋಗುತ್ತಿರಲಿಲ್ಲ. ಪೋಲಿಸರ ಪ್ರಚೋದನೆಯಿಂದ ಮೂರು ಸಾವುಗಳಾದವು. ಇಂತಹ ವಿಚಾರಗಳನ್ನು ವಿವರವಾಗಿ ಚರ್ಚೆ ಮಾಡುವುದಕ್ಕೆ ಗಮನ ಸೆಳೆಯುವ ಸೂಚನೆಯಲ್ಲಿ ಅವಕಾಶವಿಲ್ಲ. ಆದುದರಿಂದ, ನಿಲುವಳಿ ಸೂಚನೆಗೆ ತಾವು ಅವಕಾಶ ಕೊಡಬೇಕು. ಅಲ್ಲದೆ, ಕಾರ್ಮಿಕರ ಮುಷ್ಕರ ಇಂದಿಗೇ ಮುಗಿದಂತೆ ಕಾಣುತ್ತಿಲ್ಲ; ನಾಳೆ ಅವರು ಬೇರೊಂದು ತೀರ್ಮಾನ ತೆಗೆದುಕೊಳ್ಳುವವರಿದ್ದಾರೆ. ರೈಲುಗಳನ್ನು ನಿಲ್ಲಿಸುವುದು ಅಥವಾ ಅಂಚೆ ಕಛೇರಿಗಳನ್ನು ಬಂದ್ ಮಾಡಿಸುವುದು, ಕಛೇರಿಗೆ ಘೇರಾವ್ ಮಾಡುವುದು—ಮುಂತಾದ ಕ್ರಮಗಳನ್ನು ಕೈಗೊಳ್ಳುವವರಿದ್ದಾರೆ. ಆದುದರಿಂದ, ಸರ್ಕಾರದವರು ಇವುಗಳ ಬಗ್ಗೆ ಈ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾದರೆ, ತಾವು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟು, ಮಾನ್ಯ ಸದಸ್ಯರು ನೀಡುವ ಸಲಹೆ ಮತ್ತು ವಿಷಯಗಳ ಮೇಲೆ ಸೂಕ್ತ ಕ್ರಮವನ್ನು ಸರ್ಕಾರ ಕೈಗೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆ ಉದ್ದೇಶದಿಂದಲೇ ನಾವು ನಿಲುವಳಿ ಸೂಚನೆಯನ್ನು ತಂದಿರುವುದು.

SRI C. M. ARUMUGHAM.—Mr. Speaker, Sir, I have no authority or any document to say whether at any time an adjournment motion was allowed in this Karnataka Legislative Assembly. According to my memory in this House such adjournment motion is not allowed. I seek the advice of Sri H. D. Devegowda, who has been the Member of this House for the last 20 to 22 years to tell me whether an adjournment motion was allowed in the past or not. If there are any instance, I only appeal to you to allow this adjournment motion. that is my point.

SRI A. LAKSHMI SAGAR.—Convenient memory of remembering the things and convenient memory of forgetting the things have become so handy that he somehow makes it a point.

SRI C. M. ARMUGHAM.—Today, I am seeing the distinction of having you as the Speaker. If any adjournment motion has to be raised, the Speaker should allow all details to be mentioned.

MR. SPEAKER.—Kindly excuse me. With all humility I would request the Hon'ble Member that it may not be fair to make such a...

SRI C. M. ARUMUGHAM.—Sir, kindly bear with me. I am making out a case. You are arguing with me and I may forget. What I am trying to express is that you have not allowed all the details to be mentioned.

12-30 P.M.

The previous Speakers were allowing to place the details. But I am feeling from the way in which you have allowed discussion to go on, that you are going to allow the Adjournment Motion. Therefore, what I am trying to say is since you have not allowed members to

place before you the details, you will have to allow the Adjournment Motion. That is my submission. When you give a Ruling, the Ruling is yours and on your Ruling there is no appeal. So, before you give the Ruling, we must have the opportunity to place before you the facts and details and then only the Speaker will be in a position to give his Ruling. Unless you allow us to place before you the details and facts, it will not be possible for you to read between the lines. What the House wants to discuss, you may not know; what I want to discuss, you may not know. You are only insisting ; how within the framework of the Rule 50, the Adjournment Motion can be allowed. That is all. You have not allowed Sri B Subbaiah Shetty to read from the newspaper. In fact majority of us depend upon newspapers. They collect the details We do not have an independent bureau to supply information to us whereas the Government has got it. What I submit is, if you allow an adjournment motion, we may, in course of the discussion, convince the Government and that may help the Government to take a decision; in the course of the discussion, we may convince our Chief Minister, who is also the the Home Minister. After all, there is no rule that if there is a police firing, immediately there must be a judicial enquiry. If you give a chance, we may convince the Government and the Chief Minister that the Police have committed blunders in taking certain actions, and creating problems for the Government. Let the Government agree for the judical probe. In one instance of firing at H.A.L.. killing a doctor, I may prove that he was want only shot dead. Then the ChiefMinister may agree and in course of time I may say, the person who died in the firing Dr. Srinivasa, he was married six month back. I may convince the Chief Minister that the compensation he has announced *i.e.*, Rs. 5,000 is nothing; it is a very small amount. I may appeal to him for enhancing the compensation. I may appeal to provide a job for the widow of the deceased. Therefore, unless you allow the adjournment motion, it will not be possible for the House to convince the Government. Therefore, my submission is, please allow the adjournment motion; we will bring out the facts and other details. It is not a censure motion, Not at all. I may be in a position to convince the Chief Minister, because I have the facts.

Mr. Speaker.—Even if you were to say that it is not a censure motion, in fact it is so.

Sri S. R. Bommai.—In certain cases, the Government has consented. The adjournment motions have been allowed and discussed in serious matters. There are instances.

SRI C. M. ARUMUGHAM.—So far as labour problem is concerned, the Chief Minister took up the responsibility and went to Delhi. We compliment him. Therefore, my submission to you is please allow the adjournment motion. We will bring out the facts. We will bring out the other details. You have been asking us to tell about the Rules and you are sticking to rules. I welcome this decision to stick to the Rules of procedure.

MR. SPEAKER.—That is because the Rules are framed by the House, by us only.

SRI C. M. ARUMUGHAM.—But you are strictly implementing it. We thank you for that and we hope to follow it in future also.

SRI H. T. KRISHNAPPA.—His intention, perhaps, is to allow the subject to be discussed without the adjournment motion being allowed.

SRI C. M. ARUMUGHAM.—This, we have brought a day after your taking over the august post of Speaker. You said by your performance, we will came to know. For the first time, we are appealing to you kindly allow this motion. Let us see what is going to happen, what details we are going to discuss; what are the details we place before the House; and how they will be relevant and how they will be helpful to the Government. If all the grounds fail, I will appeal to you on humanitarian grounds. The Chief Minister said about the legal position and the Constitution. Let us not go according to them. Let us keep aside the Rules of Procedure and the Constitution. We want to raise it, we want to bring the details before the House. Please consider it and allow. Thank you.

† SRI AZIZ SAIT.— Sir, it is a matter of reality. Sir,, you may remember, that in this very House, when there was firing incident in Shimoga in 1968, an Adjournment motion was allowed; we discussed and a judicial inquiry was ordered.

ಶ್ರೀ ಎಂ. ರಾಮಪ್ಪ.— ಮಾನ್ಯ ಅಜೀಜ್ ಸೇಠ್‌ರವರು ಕನ್ನಡದಲ್ಲಿ ಮಾತನಾಡಿದರೆ ಚೆನ್ನಾಗಿರುತ್ತದೆ.

SRI AZIZ SAIT.—Those who ask me to speak in Kannada must be ashamed of themselves because they have not given me compulsory education of Kannada in Urdu schools. * * * Sir, I remember one day when......

ಶ್ರೀ ಎಂ. ರಾಮಪ್ಪ.— * * ಎಂದು ಹೇಳುವುದಕ್ಕೆ ಅವರಿಗೆ ಏನು ಹಕ್ಕು ಇದೆ.

ಅಧ್ಯಕ್ಷರು.— ಅದನ್ನು ಅಷ್ಟು ಸೀರಿಯಸ್ ಆಗಿ ಗಮನಿಸಬೇಡಿ.

---

* * * As ordered by the Chair the words are expunged.

ಶ್ರೀ ಎಂ. ರಾಮಪ್ಪ.— ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಅಜೀಜ್ ಸೇಟ್.—ನಾನು ಕೂಡ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.— ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.— ಅಧ್ಯಕ್ಷರೇ, ರಾಮಪ್ಪನವರು ಕನ್ನಡದಲ್ಲಿ ಮಾತನಾಡಿ ಎಂದು ಹೇಳಿದ್ದೇ ಈ ಉದ್ದೇಶದಿಂದ, ಇಂಗ್ಲೀಷಿನಲ್ಲಿ ಮಾತನಾಡಿದರೆ ಇದೆಲ್ಲಾ ಬರುತ್ತೆ.

Sri Aziz Sait.— I will speak in English only because I do not know Kannada.

ಅಧ್ಯಕ್ಷರು.— ವೈಯಕ್ತಿಕವಾಗಿ ಅಂದಿದ್ದೀರಿ ಎಂದು ಅವರ ತಲೆಯಲ್ಲಿ ಬಂದಿದೆ.

ಶ್ರೀ ಅಜೀಜ್ ಸೇಟ್.— ನಾನು ವೈಯಕ್ತಿಕವಾಗಿ ಅಂದಿಲ್ಲ.

ಅಧ್ಯಕ್ಷರು.— ಅವರು ವೈಯಕ್ತಿಕವಾಗಿ ಅಂದಿಲ್ಲ, ಉರ್ದು ಶಾಲೆಯಲ್ಲಿ ಕನ್ನಡ ಕಲಿಸುವುದಕ್ಕೆ ವ್ಯವಸ್ಥೆ ಮಾಡಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ರಾಮಪ್ಪ.— ಅವರು ಇಂಗ್ಲೀಷಿನಲ್ಲಿಯೇ ಹಿಂದಕ್ಕೆ ತೆಗೆದುಕೊಳ್ಳಲಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. "ಬಾಯಿ ಮುಚ್ಚಿ" ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಿಸಿದರೆ, ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು.— ನೋಡುತ್ತೇನೆ. He never meant any disrespect to any Member of this August House.

(INTERRUPTION)

Let us end the matter here itself.

ಶ್ರೀ ಎಂ. ರಾಮಪ್ಪ.— ಅಧ್ಯಕ್ಷರೆ, ಇದು ನಮ್ಮ ಮರ್ಯಾದೆಯ ಪ್ರಶ್ನೆ ಆಗುತ್ತದೆ. ಅವರು ಹಾಗೆ ಹೇಳುವುದು ಸರಿಯೇ ?

ಅಧ್ಯಕ್ಷರು.— ಅದರ ಬಗ್ಗೆ ನಾನು ರೆಕಾರ್ಡ್ ನೋಡಿಸುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ್.— ಅಧ್ಯಕ್ಷರೆ, ಮಾನ್ಯ ಅಜೀಜ್ ಸೇಟ್ ಅವರು ಡೈರೆಕ್ಟ್ ಆಗಿ ರಾಮಪ್ಪನವರಿಗೆ ಷಟ್ ... ಅಂತ ಹೇಳಿದರು. ಈಗ ಅವರು ಅದನ್ನು ವಾಪಸ್ಸು ತೆಗೆದುಕೊಂಡು ಓಪನ್ ಯುವರ್ ಮೌತ್ ಎಂದು ಹೇಳಬೇಕು.

ಶ್ರೀ ಎಂ. ರಾಮಪ್ಪ.— ಅಧ್ಯಕ್ಷರೇ, ಇದು ನಮ್ಮ ಮರ್ಯಾದೆ ಪ್ರಶ್ನೆ ಇದೆ.

ಅಧ್ಯಕ್ಷರು.— ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ಮಾನ್ಯ ಸದಸ್ಯರಾದ ಹೆಚ್. ಟಿ. ಕೃಷ್ಣಪ್ಪನವರು ರೆಕಾರ್ಡ್‌ನಿಂದ ತೆಗೆಸುವ ಬಗ್ಗೆ ತಿಳಿಸಿದ್ದಾರೆ. ನಾನು ರೆಕಾರ್ಡ್ ತೆಗೆಸಿ ನೋಡುತ್ತೇನೆ. ಅದರಲ್ಲಿ ಬೇರೆ ಅರ್ಥ ಬರುವ ರೀತಿಯಲ್ಲಿ ಇದ್ದರೆ ಅದನ್ನು ತೆಗೆಸಿಬಿಡುತ್ತೇನೆ.

ಶ್ರೀ ಎಂ. ರಾಮಪ್ಪ.— ಮಾನ್ಯ ಅಧ್ಯಕ್ಷರು ಅನಂತರ ರೆಕಾರ್ಡ್ ನೋಡಿ ತೆಗೆಸಿದರೆ ಅದು ಒಳಗಡೆ ತೆಗೆಸಿದಂತೆ ಆಗುತ್ತದೆ. ಈಗ ಅವರು ಹೇಳಿರುವುದನ್ನು ಈ ಸದನದ ಸದಸ್ಯರೆಲ್ಲರೂ ಕೇಳಿದ್ದಾರೆ. ಆದ್ದರಿಂದ, ಅವರು ಹೇಳಿರತಕ್ಕದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಅಜೀಜ್ ಸೇಠ್.— ಅಧ್ಯಕ್ಷರೆ, ನಾನು ಹೊರಗೆ ಹೋದ ಎಂಜಲನ್ನು ಒಳಗೆ ನುಂಗಲಿಕ್ಕೆ ಆಗುತ್ತದೆಯೇ ?

Mr. Speaker.— You take back that.

Sri Aziz Sait.— How can I ?

Mr. Speaker.— That will be expunged from the record.

† SRI AZIZ SAIT.— Sir, my voice has gone in the air. Scientists are trying to bring back old voices. ಶಬ್ದ ಹೊರಗಡೆ ಹೋಗಿದೆ ವಾಪಸ್ಸು ಹೇಗೆ ತೆಗೆದುಕೊಳ್ಳಲಿಕ್ಕೆ ಆಗುತ್ತದೆ.

Sir, I was trying to tell you that there was an incident of firing in Shimoga. We were here in the Opposition then, including yourself as the constitutional adviser to the Opposition Party. You read out so many constitutional things and convinced the Government–I think Sri Nijalingappa was the Chief Minister and made them to agree to accept that adjournment motion. I remember to have participated and I think Sri S Bangarappa was also there. Then, a judicial enquiry was ordered. Similar was the case at Madhugiri. At that time I went to the extreme step of saying to Sri S. Nijalingappa that 'your government in quality is buffalo. Among the animals, buffalo is the strongest. He never cares for any thing. ಬಫೆಲೋಗೆ ಒಂದು ಛಾಟಿಯಿಂದ ಎಷ್ಟು ಹೊಡೆದರೂ ಏನಾಗುವುದಿಲ್ಲ. ನೀವು ಒಂದು ಸಾರಿ, ಎರಡು ಸಾರಿ, ಮೂರು ಸಾರಿ, ನಾಲ್ಕು ಸಾರಿ, ಐದನೇ ಸಾರಿ ಹೊಡೆದಾಗ ಅದು ಮೇಲೆ ಏಳುತ್ತದೆ ಎಂದು ಮಾನ್ಯ ಕಾಗೋಡುತಿಮ್ಮಪ್ಪನವರು ಹೇಳುತ್ತಿದ್ದರು. ಹಾಗೆ ಅವು ರಸ್ತೆ ಮಧ್ಯೆ ಇದ್ದಾಗ, ಟ್ರಕ್ ಬರಲಿ ವ್ಯಾನ್ ಬರಲಿ, ಬಸ್ಸುಗಳು ಬರಲಿ, ಪೋಲೀಸ್‌ನವರು ಬರಲಿ ಅವು ಅಲ್ಲಾಡುವುದಿಲ್ಲ. ಅದೇ ಸೆನ್‌ಸಿಟೀವ್ ಇರುವವರು ಓಡಿ ಹೋಗುತ್ತಾರೆ. The new trend in our country has been that when you talk anything against policemen, the ruling party says "we cannot demoralise the police who kill handful of people',. ಈಗ ಸತ್ತು ಹೋಗಿ ಒಂಬತ್ತು ದಿವಸಗಳಾಗಿವೆ ಎಂದು ಹೇಳುವುದಾದರೆ ನೆನ್ನೆ ರಾತ್ರಿ ಸ್ಕೂಲು ಸುಟ್ಟು ಹಾಕಿದ್ದಾರೆ ಲಾ ಆಂಡ್ ಆರ್ಡರ್ ಸಿಚ್ಯುಯೇಷನ್ ನಮ್ಮ ರಾಜ್ಯದಲ್ಲಿ ಒಂದು ವರ್ಷದಿಂದ ಸರಿ ಇಲ್ಲ. ಈ ಒಂದು ವರ್ಷದಲ್ಲಿ ೧೧ರಿಂದ ೧೭ರವರೆಗೆ ಕಮ್ಯುನಲ್ ಕ್ಲಾಷ್ ಆಗಿದೆ. ಆದರೂ ಏನೂ ಮಾತನಾಡಬೇಡಿ ಅಂತ ಹೇಳುತ್ತಾರೆ. ಆದರೆ ಗವರ್ನರ್ ಅಡ್ರೆಸ್ ಮೇಲೆ ಏನು ಬೇಕಾದರೂ ಮಾತನಾಡಿ ಎಂದು ಹೇಳುತ್ತಾರೆ. ಐದು ನಿಮಿಷದಲ್ಲಿ ಏನು ಏನು ಹೇಳಲಿಕ್ಕೆ ಸಾಧ್ಯ. Now I am remained of the Akbar and Birabal Story. ಒಂದು ಸಾರಿ ಅಕ್ಬರ್ ಬೀರಬಲ್‌ನಿಗೆ ಯಾರು ಯಾರು ಅಳಿಯಂದಿರು ಇದ್ದಾರೆ ಅವರನ್ನೆಲ್ಲಾ ಗಲ್ಲು ಹಾಕಿಸಲು ಗಲ್ಲು ತಯಾರು ಮಾಡಲಿಕ್ಕೆ ತಿಳಿಸಿದನಂತೆ. ಆಗ ಬೀರಬಲನು ಒಂದು ಚಿನ್ನದ ಗಲ್ಲು ಒಂದು ಬೆಳ್ಳಿಯ ಗಲ್ಲು ತಯಾರಿಸಿದ್ದನಂತೆ. ಆ ಸಂದರ್ಭದಲ್ಲಿ ಅಕ್ಬರ್ ಬೀರಬಲನಿಗೆ ಈ ಚಿನ್ನದ ಗಲ್ಲು, ಬೆಳ್ಳಿ ಗಲ್ಲು ಏತಕ್ಕೆ ಎಂದು ಕೇಳಿದನಂತೆ. ಆಗ ಬೀರಬಲ ತಾವು ಒಬ್ಬರು ಅಳಿಯಂದಿರು ನಾನು ಒಬ್ಬ ಅಳಿಯ ಆಗುತ್ತೇನೆ ಆದ್ದರಿಂದ ತಮಗೆ ಒಂದು ಗಲ್ಲು. ನನಗೆ ಒಂದು ಗಲ್ಲು ಎಂದು ತಿಳಿಸಿದನಂತೆ. ಅದೇ ರೀತಿ ಇವೊತ್ತು ಮಾನ್ಯ ಗುಂಡೂರಾವ್ ಅವರ ಕಾಲದಲ್ಲಿ ಗುಂಡಿಗೆ ಲೆಕ್ಕ ಇಲ್ಲ. ಕೂತರೆ ಗುಂಡು, ನಿಂತರೆ ಗುಂಡು. ನಾನು ಹೇಳುವುದು ಇಷ್ಟೆ ಈಗ ಹನ್ನೆರಡು ಮುಕ್ಕಾಲು ಗಂಟೆಯಾಗಿದೆ, ಚರ್ಚೆ ನಡೆಯುತ್ತಿದೆ. ಸ್ವಾರಸ್ಯವಾಗಿ ಕೇಳುತ್ತಿದ್ದೇವೆ. ಇದಕ್ಕೆ ಕೊನೆ ಹಂತ ಏನು ಎಂದು. ನನಗೆ ಆಗಲೇ ಗೊತ್ತಾಗಿದೆ. "operation successful but patient dead,.. ಆಗಲೇ ತಾವು ಉತ್ತರ ರೆಡಿ ಮಾಡಿ ಇಟ್ಟುಬಿಟ್ಟಿದ್ದೀರಿ. ಈಗಾಗಲೇ ೧೯೫೭ರಲ್ಲಿ, ೧೯೬೭ರಲ್ಲಿ, ೧೯೭೭ರಲ್ಲಿ ಯಾವರೀತಿ ಆಗಿದೆ ಎನ್ನುವುದನ್ನೆಲ್ಲಾ ತಾವು ರೆಡಿ ಮಾಡಿಕೊಂಡು ಇಟ್ಟಿದ್ದೀರಿ. ಈಗ ಒಂದು ಸ್ಥಾನ ಇರುತ್ತದೆ ಅದು ಅಧ್ಯಕ್ಷರ ಸ್ಥಾನ ಆಗಲಿ, ಮುಖ್ಯ ಮಂತ್ರಿಗಳ ಸ್ಥಾನ ಆಗಲಿ, ಆ ಕುರ್ಚಿಯ ಮೇಲೆ ಕುಳಿತುಕೊಂಡರೆ ಆ ಕುರ್ಚಿ ಹೇಳಿಸುತ್ತದೆಯೋ ಹೊರತು ಆ ಕುರ್ಚಿಯಲ್ಲಿ ಕುಳಿತವರು ಏನು ಹೇಳುವುದಿಲ್ಲ. ನಾವು ಕುರ್ಚಿಗೆ ಗೌರವ ಕೊಡುತ್ತೇವೆ. ಮಾನ್ಯ ರಂಗನಾಥ್ ಅವರು ಅಧ್ಯಕ್ಷರಾಗಿದ್ದಾರೆ ಎಂದರೆ ನಾವು ಅವರ ಕುರ್ಚಿಗೆ ಗೌರವ ಕೊಡುತ್ತೇವೆ. ಆ ಕುರ್ಚಿಯಲ್ಲಿ ಇರುವವರೆಗೆ ಹೇಳುವುದು, ಅನಂತರ ನಾವು ಮಾಡುವುದು ನಾವು ಮಾಡುತ್ತೇವೆ, ತಾವು ಮಾಡುವುದು ತಾವು ಮಾಡುತ್ತೀರ. "What I say you do and what I do you don't do" ಇಂತಹ ಒಂದು ಕನ್‌ವೆನ್‌ಷನ್ ಇಟ್ಟುಕೊಂಡು ಜನರಿಗೆ ಹುಚ್ಚು

ರನ್ನಾಗಿ ಮಾಡಿಕೊಂಡು ತಿರುಗಾಡುತ್ತಿದ್ದೇವೆ. ಇವೊತ್ತು ಪ್ರಜಾಪ್ರಭುತ್ವದಲ್ಲಿ ಫಿಲಾಸಫಿ ಇರುವುದರಿಂದ ಧರ್ಮಕ್ಕೆ ಬೆಲೆ ಇರುವುದರಿಂದ ನಾವು ಸತ್ಯವನ್ನು ತೋರಿಸಬೇಕಾಗಿದೆ. ನ್ಯಾಯವಾಗಿ ಯಾರು ಮಾಡಿದ್ದಾರೆ ತಪ್ಪು ಯಾರು ಮಾಡಿದ್ದಾರೆ. ಅದನ್ನು ತಿಳಿಯಬೇಕಾಗುತ್ತದೆ. ಈಗ ಸ್ಟ್ರೈಕ್ ಆಗದೇ ಇದ್ದರೆ, ಫೈರಿಂಗ್ ಆಗುತ್ತಾ ಇರಲಿಲ್ಲ. ಸಾಮಾನ್ಯವಾಗಿ ಯಾವಾಗಲೂ ಫೈರಿಂಗ್‌ನಲ್ಲಿ ಇನೋಸೆಂಟ್ ಸಾಯುತ್ತಾರೆ. ಆದರೆ ಇಲ್ಲಿ ಒಬ್ಬರು ಡಾಕ್ಟರ್ ಸತ್ತಿದ್ದಾರೆ.

ಅಧ್ಯಕ್ಷರು.— ತಾವು ಹೇಳುವ ವಿಚಾರಗಳನ್ನೆಲ್ಲಾ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

ಶ್ರೀ ಅಜೀಜ್ ಸೇಠ್.— ಅಧ್ಯಕ್ಷರೆ, ಅವರು ಯಾವ ರೀತಿ ಹೇಳಬೇಕು, ಆ ರೀತಿಯಲ್ಲಿ ಹೇಳಿದ್ದಾರೆ ಆದರೆ ಕೆಲವರ ಲಾಂಗ್ವೇಜ್ ಅರ್ಥವಾಗುವುದಿಲ್ಲ. ಉದಾಹರಣೆಗೆ ಹೇಳಬೇಕು ಎಂದರೆ, ನಮ್ಮ ಮನೆಗೆ ಯಾರಾದರೂ ಬಂದರೆ, ಬನ್ನಿ ಸ್ವಾಮಿ ಕುಳಿತುಕೊಳ್ಳಿ ಎಂದು ಹೇಳಿದರೆ ಗೌರವ. ಆದರ ಬದಲು ಬಾರಯ್ಯ, ಕುಳಿತುಕೊಳ್ಳಯ್ಯ ಅಂದರೆ ಏನಪ್ಪ, ಅಜೀಜ್ ಸೇಟ್ ಇಂತಹ ಭಾಷೆಯಲ್ಲಿ ಮಾತನಾಡುತ್ತಾನೆ ಎಂದು ಹೇಳುತ್ತಾರೆ. ಮಾನ್ಯ ದೇವರಾಜ್ ಅರಸ್ ಅವರ ಭಾಷೆ ಅರ್ಥವಾಗಬೇಕಾದರೆ, ಇಲ್ಲಿ receiving end ಎಲ್ಲೂ ಇಲ್ಲ. ನಮ್ಮಂತಹರ ಭಾಷೆ ಸ್ವಲ್ಪ ಅರ್ಥವಾಗುತ್ತದೆ. ಏಕೆಂದರೆ ನಾವು ಸ್ವಲ್ಪ ''ಡಬ,, ''ಡಬ,, ಅಂತ ಕಿವಿ ಹೊಡೆಯುವ ಹಾಗೆ ಹೇಳುತ್ತೇವೆ. ನಾನು ಮಿನಿಸ್ಟರ್‌ಗಿರಿಯಿಂದ ಇಳಿಯುವಾಗ ೧೯೭೩ನೇ ಡಿಸೆಂಬರ್ ೧೧ ಅಥವಾ ೧೪ನೇ ತಾರೀಖಿನ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಓದಿದೆ. ಒಂದು ಎಂ.ಎಲ್‌ಎ.......

ಶ್ರೀ ಪಿ. ವೆಂಕಟರಮಣ.—ಮಾನ್ಯ ಸದಸ್ಯರು ಈ ತರಹ ಕನ್ನಡದಲ್ಲಿ ಮಾತನಾಡುವುದಕ್ಕಿಂತಲೂ ಇಂಗ್ಲೀಷಿನಲ್ಲಿ ಮಾತನಾಡುವುದು ಒಳ್ಳೆಯದು

ಅಧ್ಯಕ್ಷರು.— ಒಂದು ಎಂ.ಎಲ್.ಎ. ಎಂದು ಹೇಳಬೇಡಿ, ಒಬ್ಬ ಎಂ.ಎಲ್.ಎ. ಅವರು ಎಂದು ಹೇಳಿ.

SRI AZEEZ SAIT.—One member of the Representative Assembly went to United States. He had a tumour. He got operated. The Doctor found a fault that while removing tumour he had removed his brain also. He wrote him a letter " Dear... ....I have removed your brain. Please come and get it fixed ". The Member wrote back. " I am extremely thankful to you doctor for your kind request. I do not require any more brain since I have become Minister" .

I request you kindly to accept the adjournment motion and allow it for discussion instead of adjourning the House and sending us home.

SRI D. DEVARAJ URS.—Lastly, I would like to submit only three points which I did not mention earlier. You were pleased to say now and then that we are discussing this question and the calling attention motion is there and perhaps it could be discussed under that. If I have understood you correctly..............

MR SPEAKER.—Alternative avenues are there.

SRI D. DEVARAJ URS.—First of all, if we want to take this up under Call Attention Motion, I would remind the House, through you Sir, that is, ' the motion shall not anticipate a matter which has been previously appointed for consideration'. The question, I would

request the Hon. Speaker to carefully consider is We, from the opposition side, did we anticipate this?

MR. SPEAKER.—In fact, this programme is put by the office. I see the point.

SRI D. DEVARAJ URS.—Therefore, we are not bringing this Adjournment Motion only by anticipating a Calling Attention to be brought to-day. This, I want to make it abundantly clear. Therefore, Sir, if on any account.........

MR. SPEAKER.--I never said that...........

SRI D. DEVARAJ URS.—I am clarifying the position. If on any account an umbrage could be taken under this provision (v) to rule 52, I am afraid, it is besides to what he say ...... We did not know whether the Call Attention would come today. When the motion was sent on the Opposition side, we were not aware, the House was not aware at all, that there would be a Call Attention today on the same subject. Whatever it is, your office was pleased to put it today. But, kindly remember this point, namely that we are not aware. On that score we have not been trying to circumvent or overcome the Call Attention being taken up on the very subject matter and we are brought the Adjournment Motion. This is the point which you will have to kindly bear in mind.

Then in Chapter X, according to rule 63 (1),

" A Member may with the previous permission of the Speaker, call the attention of a Minister to any matter of urgent public importance and the Minister may make a brief statement or ask for time to make a statement at a latter hour or date ".

Rule 63 (2) says specifically

" There shall be no debate on such statement at the time it is made ".

" 63 (3) Not more than one such matter shall be raised at the same sitting".

" 63 (4) In the event of more than one matter being presented for the same day, priority shall be given to the matter which is, in the opinion of the Speaker, more urgent and important " .

" 63 (5) The proposed matter shall be raised after the questions............"

Therefore, Sir, it clearly rules out the possibility of any debate on the Calling Attention Motion on which a Minister could make a

statement. Any Member may ask clarification. So, I appeal to you to consider this point that Calling Attention Motion cannot have the same scope and the spirit of an Adjournment Motion. Therefore, Sir, you will appreciate that it is not proper for us to think in terms of this subject being discussed under Calling Attention Motion, because there is no scope for any discussion.

Sir, the most relevant and most important point is that rules 50, 51, 52 have laid down certain conditions. Those conditions, if fulfilled, an adjournment Motion, how it should be referred, is or rejected, also mentioned in the subsequent rules. I must submit to you Sir. with all humility, and I am sure you won't mistake me if the Adjournment Motion that we have sent fulfills these conditions, I am afraid, it is the House which has to take a decision and not Speaker in his discretion. This is the point I want to make out.

MR. SPEAKER.—What do you say for rule 54 ?

SRI D. DEVARAJ URS.—I am coming to that. Speaker Sir. you have to read rule 53 first. Rule 53 gives discretion to the Speaker.

MR. SPEAKER.—The particular point is this, which you have mentioned. If we are to satisfy these conditions, if I have understood you properly, the Speaker has no point to...........

SRI D. DEVARAJ URS — Rule 53 specifically says that discretion of the Speaker could be used in the proviso where, if any, argument is brought out.

> "No motion seeks to raise discussion on a matter pending before any statutory Tribunal or statutory authority performing any judicial or quasi-judicial functions or any commission or court of enquiry appointed to enquiry in to or investigate any matter shall ordinarily be permitted to be moved ".

That means here, it *suomoto* rejects under this condition. The proviso gives power to the Speaker. It empowers the speaker.

> "Provided that the Speaker may in his discretion allow such matter being raised in the Assembly as is concerned with the procedure or subject or stage of enquiry if the Speaker is satisfied that it is not likely to prejudice the consideration of such matter by the statutory tribunal, statutory authority, commission or court of enquiry ".

Sir, this proviso gives you some authority and power. In spite of rule 53, which is normally *suo moto*, if it is in court, statutory body, an enquiry is there or some court procedure is there, then

only such a matter cannot be taken up as an Adjournment Motion. Even then, no extra power is given to the Speaker under the provision to over-rule. Speaker may in his discretion allow this to come up. That is all the discretion given to the Speaker. But, if other conditions are being fulfilled, of course under rule 53 in your discretion you can say " No, no, this is also being refferred to a Commission, or a court of enquiry and therefore I shall not allow this" Yes, you have every right to say. But, the situation we have already submitted is that there is no statutory court, or court of enquir or commission to say under rule 53 the Speaker can either reject or give consent that does not arise at all.

1-00 P.M.

I have already said so far as Rule 52 (v) is concerned. About the calling attention notice, what is the scope of a calling attention notice ? I have stated that, the Speaker, if he gives consent under Rule-50 and if all the provisions contained in rule 50, 51 and 52 are fulfilled then only the Speaker can give consent. If these conditions are not satisfied, of course, the Speaker will decide. If the conditions are satisfied the procedure is different. Then the procedure under rule-54 says :

> "The Speaker, if he gives consent under rule-50 and hold that the matter proposed to be discussed is in order, shall, after the questions and before the list of business is entered upon, call the member concerned who shall rise in his place and ask for leave to move the adjournment motion of the Assembly ;
>
> Provided that where the Speaker has refused his consent under rule 50 or is of opinion that the matter proposed to be discussed is not in order, he may, if he thinks it necessary, read the notice of motion and state reasons for refusing consent or holding the motion as not being in order.
>
> If objection to leave being granted is taken, the Speaker shall request those members who are in favour of leave being granted to rise in their places, and if not less than twenty members rise accordingly, the Speaker shall intimate that leave is granted. If less than twenty members rise, the Speaker shall inform the member that he has not the leave of the Assembly. The Motion shall be taken one hour before."

That is different.

Therefore, Sir, I would request you to look into this question very carefully because it is a very very important issue. It only speaks how the rules are framed and what is the scope under these rules and the discretion of the Speaker is curtailed or controlled. This is a very important issue. Now you have a right to reject. According to Rule 50:

> " subject to the provisions of these rules, motion for an adjournment of the business of the Assembly for the purpose of discussing a definite matter of urgent public importance may be made with the consent of the Speaker."

If you stick to the words "not subject to provisions of these rules" then you have abandoned the discretion straight away. But there is the first sentence which starts as "Subject to the provisions of these rules......" That means the Speaker is given the authority to go into this question, as per the subsequent rules wherein certain conditions are laid down when the adjournment motion could be considered. If the provisions of these rules are fulfilled for taking up adjournment motion, the Speaker has no discretion to say "I reject it." The Speaker has been given the discretion to allow the motion in respect of which provision is there. The Speaker cannot reject this simply beca use for any other reason than these mentioned in Rules 51 and 52. This is my submission.

SRI P VENKATARAMANA.—I am just submitting that the question now before the House is in the preliminary stage. My submission is, only after giving consent by the Speaker, this procedure should be followed.

MR. SPEAKER - One more question to the Leader of the Opposition......In J Mohammed Imam and S. Srinivasa Iyengar case, they had raised the same issue. I think you can go through this......

SRI D. DEVARAJ URS.—Thank you very much. You have been good enough to mention this point. I will read the same.

> "Adjournment Motion: Matter in the ordinary course of administration – Motion inadmissible.
>
> Sarvashri's J. Mahammed Imam and S. Srinivasa Iyengar sought to move the adjournment of the House to discuss shooting by the police at K.G.F. resulting in several casualties. The Speaker ruling the motion out of order observed:-
>
> I have given deep consideration to the several points urged in favour of holding that a *prima facie* case for admitting this motion has been made out. But I have come to the conclusion that the motion is not in order.

With the advent of Responsible Government it has become necessary for not to consider an adjournment motion as an ordinary or a routine method of introducing a subject for debate and thus interrupting the appointed programme of business. The aspect of the matter has been dealt with by the Speaker of the Constituent Assembly of India when functioning as the Indian Legislature, in what is known as Mir Laik Ali Case...... It has there been stated that "since the Ministry is now fully responsible to the House and members have now ample opportunities of discussing various matters, any impression that an adjournment motion continues to be normal device for raising a discussion on any important matter as in the past would be incorrect." I might also refer to a ruling of the Speaker of the Bombay Legislative Assembly on the 19th January 1938 wherein it has been stated that "the principle of the fixity of the day's programme has to be considered to be at least as important if not more important than the right to move an adjournment motion and it is in the conflict of two principles that admissibility of an adjournment motion has to be considered." Finally I would invite attention to the ruling of the President of the Indian Legislative Assembly given on 16th July, 1930, which is as follows :-

The subject matter involved is more than the ordinary administration of law. The fact appeared to be prohibitory order and further there is no more maintenance of law and order is involved in the adjournment motion. The matter contained in the adjournment motion has to be given priority ,and has to be considered equally important as business of the day."

That is one thing.

MR. SPEAKER.—That is because the business of the day is fixed by the Business Advisory Committee which consists of members of the House representing various parties. Of course, it is the privilege of the members of this August House that the adjournment motion also can be postponed and the matter could be taken up. Even then at a given point of time or in circumstances like this where we are caught at the moment, a call attention motion could be given by the very members, and further discussion on the motion of the Governor's address is there.

SRI D. DEVARAJ URS.—Sir, it is for you to make up your mind one way or the other. I am not here to compel.

MR. SPEAKER.—I only sought your......

SRI D. DEVARAJ URS.—I have gone through what has been referred to. Now the question of taking it as call attention notice is not of much consequence which we consider important.

Sir, strictly if you go by the Rules we should also go by the rules as pointed out by our Ex-Speaker. So if you want to go by the rules according to the rule calling attention motion will not allow any discussion or debate. That is in the rule. Therefore, the speaker suggesting us that it should be taken up through a calling attention motion, will defeat the purpose. Under the rule it is clearly stated that no debate is allowed.

SRI VEERAPPA MOILY.—Under Rule 52 it is about a definite matter. That matter can come under different forms.

SRI D. DEVARAJ URS.—When it is not possible to go according to the rule, why that rule should be there ? That rule can be removed. Why it should be there at all. Therefore, here it is not merely a question of law and order. This is a case where something more than maintenance of law and order is involved–that is our point. I did not want to go into the detail. As you pointed out at this stage it will not be proper on our part to go into the details. Therefore, we have tried to do our best under the existing scope at this stage, and we have merely confined to certain remarks. Here people are involved, people who have nothing to do with the strike have died and to what extent the Government is responsible, whether this Government or the management. All these questions are involved here. In my opinion Sir, supposing if the strike was not there, perhaps the firing would not have been there. If the strike were to be there, there was possibility of averting the strike. I am not going into the details and I know my responsibility. I Known to what extent the State Government can come into the picture and to what extent the management of the centrally located industries in our State come into the picture. These are matters which we could discuss by allowing discussuing on the adjournment motion. You are referring again and again to what is called "address by the Governor"

MR. SPEAKER.—I only said that there also you can discuss ......

SRI D. DEVARAJ URS.—Then I would like to know sir, with what spirit the provision for allening or disallening on adjournmentmotion was provided in the rules. Let us remove this provision from the rules. I do not think beyond this. If such a situation cannot be discussed in an adjournment motion, then, what kind of matter could be discussed in an adjournment motion. I fail to understand.

SRI M. VEERAPPA MOILY.—Other than this.

SRI S.R. BOMMAI.—As already said by the Leader of the House the very purpose of this rule will be defeated if the consent is not given to discuss such a serious matter. There are a number of instances where adjournment motions have been permitted.

MR. SPEAKER.—Not permitted.

SRI S.R. BOMMAI.—Unfortunately the book published by our Legislature Secretariat contains only the rulings. where they have been rejected in this House. If time is given I will show where adjournment motions have been allowed. Unfortunately they have not been referred to in this book. Hon.Speaker will have to take into consideration the gravity of the situation before giving the con sent. It has already been brought to the notice that

> "Subject matter of an adjournment motion must have a direct or indirect relation on the part of the Government and must be in the nature of a criticism of the action of the Government either for having done some action or for having omitted some action. The adjournment motion is not permissible unless there was failure on the part of the Government to perform their duties enjoined by the Constitution and under the law"

This is the guiding prir ciple It is for the Speaker to take a decision whether to give consent or not. Here in this case there is strike for the last 45 days, which has involved in loss of production to the tune of Rs. 50 to 60 crores, which has adversely affected the economy of the country. We are losing production to the tune of Rs. one and a half crores per day. This may result in economic cri-is, not only in the State but in the entire country. If it is continued what is the effect such a serious question is involved. There is a failure on the part of the State Government in not effectively adopting the consiliatory measures. The results are there and We do not want to give now all the details, while seeking the consent of the Speaker, it is a fit case wherein the consent of the speaker is absolutely necessary. Hon. Speaker should exercise his discretion in favour of the adjournment motion. I hope Hon.Speaker having the experince in being in opposi tion, and havingbeen a member of the Government, should give his first ruling.

SRI M. VEERAPPA MOILY.—You want his first ruling without applying the rule today.

SRI S.R. BOMMAI.—With all humility, I would like to bring to your notice Sir, our Finance Minister who is bubbling with much

spirit and getting up every now and then, When he was with me for a short time, in the Opposition, he was advancing the same argument Sir, this is the fittest occasion where the consent should be given.

† ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸುಮಾರು ೩-೩½ ಗಂಟೆ ಕಾಲ ಬಹು ಅತ್ಯಂತ ಗಂಭೀರವಾದಂಥಾ ವಿಷಯದ ಬಗ್ಗೆ ಮಾತನಾಡಿದ್ದಾರೆ. ಯಾವಾಗಲೂ ನಡೆಯದೇ ಇದ್ದಂಥಾ ವಿಷಯ ಮತ್ತು ಇದರಲ್ಲಿ ಏನೋ ಆಗಿಹೋಗಿದೆ ಎನ್ನತಕ್ಕಂಥಾ ವಿಷಯವನ್ನು ಚರ್ಚೆ ಮಾಡಲಿಕ್ಕೋಸ್ಕರವಾಗಿ ಈ ಒಂದು ನಿಲುವಳಿ ಸೂಚನೆಗೆ ತಾವು ಅವಕಾಶ ಕೊಡಬೇಕು ಎಂದು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಜನ ಮಿತ್ರರೂ ಮಾತನಾಡಿದ್ದಾರೆ. ಇವರಲ್ಲಿ ಬಹಳ ಹಿರಿಯ ಸದಸ್ಯರೂ ಮತ್ತು ಈ ಸದನದಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿ ಅಧಿಕಾರದಲ್ಲಿದ್ದಂಥಾವರೂ ಸರ್ಕಾರ ನಡೆಸಿದಂಥಾವರು ಕೂಡ ಮಾತನಾಡಿದ್ದಾರೆ. ಅವರೆಲ್ಲಾ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೂಲ್‌ಗೆ ಅನುಕೂಲವಾಗುತ್ತದೆ ಆ ರೀತಿ ಮಾತನಾಡುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಆ ರೀತಿ ಮಾಡಿಲ್ಲಾ.

ಶ್ರೀ ಆರ್, ಗುಂಡೂರಾವ್.—ಯಾರೇ ಅಧಿಕಾರದಲ್ಲಿರಲಿ, ಅದಕ್ಕೆ ನೀವು ಬೆಂಬಲ ಕೊಟ್ಟಿದ್ದೀರಲ್ಲಾ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳಿದರು ರಾಜ್ಯ ಸರ್ಕಾರ ಈ ಬಗ್ಗೆ ಒಂದು ಮುನ್ನೆಚ್ಚರಿಕೆ ತೆಗೆದುಕೊಂಡಿದ್ದರೆ, ಈ ರೀತಿ ಮುಷ್ಕರ ನಡೆಯುತ್ತಾ ಇರಲಿಲ್ಲ ಎಂದು ಹೇಳಿದರು. ಯಾವ ಕಾರ್ಮಿಕ ಮಂತ್ರಿಯೋ ಏನೋ ನನಗೆ ಗೊತ್ತಿಲ್ಲ ಅವರು ಸರಿಯಾದಂಥಾ ಒಂದು ತೀರ್ಮಾನ ಕೊಟ್ಟಿದ್ದರೆ ಈ ಮುಷ್ಕರ ನಡೆಯುತ್ತಾ ಇರಲಿಲ್ಲ, ಅಥವಾ ಬಂದ್ ನಡೆಯುತ್ತಾ ಇರಲಿಲ್ಲಾ, ಅಥವಾ ಈ ಗೋಲಿಬಾರ್ ನಡೆಯುತ್ತಾ ಇರಲಿಲ್ಲಾ, ಮತ್ತು ಜನ ತೀರಿ ಹೋಗುವ ಸಂದರ್ಭ ಬರುತ್ತಾ ಇರಲಿಲ್ಲ, ಅನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ಇದರಲ್ಲಿ ಕಾರ್ಮಿಕರ ಬೇಡಿಕೆ ಏನು ಇದೆ ಮತ್ತು ಅವರಿಗೂ ಕೇಂದ್ರ ಸರ್ಕಾರದ ಮಾಲೀಕರಿಗೂ ಇರತಕ್ಕಂಥಾ ವ್ಯತ್ಯಾಸ ಏನು ಇದೆ ಅದನ್ನು ವಿವರವಾಗಿ ಚರ್ಚೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಆದರೂ ಕೂಡ ಅವರು ಏನು ಒಂದೆರಡು ವಿಷಯಗಳನ್ನು ಎತ್ತಿದ್ದಾರೆ ಆ ದಿಶೆಯಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇಂದಿಗೆ ಅವರು ಸತ್ಯಾಗ್ರಹ ಮತ್ತು ಮುಷ್ಕರಗಳನ್ನು ಪ್ರಾರಂಭ ಮಾಡಿ ೩೫-೩೬ ದಿನಗಳಾದವು. ಸುಮಾರು ೭-೮ ಸಾರಿ ಕಾರ್ಮಿಕ ಇಲಾಖೆಯವರು, ಕಮೀಷನರು, ಮಂತ್ರಿಗಳು, ಕಾರ್ಯದರ್ಶಿಗಳು ಮ್ಯಾನೇಜ್‌ಮೆಂಟಿನವರೊಂದಿಗೆ ಅಂದರೆ ಮ್ಯಾನೇಜಿಂಗ್ ಡೈರೆಕ್ಟರೊಂದಿಗೆ ಕೆಲವು ಕಾರ್ಮಿಕ ನಾಯಕರನ್ನು ಕರೆಸಿ ಚರ್ಚೆ ಮಾಡಿದ್ದಾರೆ. ಅವರು ಹೇಳಿದ್ದಾರೆ ಇದು ಈವೊತ್ತಿನ ದಿವಸ ರಾಷ್ಟ್ರಕ್ಕೆ ಒಂದು ದೊಡ್ಡ ಜವಾಬ್ದಾರಿಯಾಗಿರತಕ್ಕಂಥಾ ಸಮಸ್ಯೆಯಾಗಿದೆ. ಇದು ಒಂದು ಕಾಫೀ ತೋಟದ ಮಾಲೀಕರ ಪ್ರಶ್ನೆಯಾಗಿರುವುದಿಲ್ಲ ಅಥವಾ ಯಾವುದೇ ಒಂದು ಅಕ್ಕಿ ಗಿರಣಿಯ ಕಾರ್ಮಿಕರ ಪ್ರಶ್ನೆಯಾಗಿರುವುದಿಲ್ಲ, ಇದು ರಾಷ್ಟ್ರದ ಒಂದು ರಕ್ಷಣಾ ಇಲಾಖೆಗೆ ಸಂಬಂಧ ಪಟ್ಟಂಥಾ ಪ್ರಶ್ನೆಯಾಗಿದೆ. ಇದರ ಜೊತೆಗೆ ಪ್ರತಿಯೊಬ್ಬ ಪ್ರಜೆಗೂ ಪ್ರತಿದಿವಸವೂ ಪ್ರಯೋಜನವಾಗುವಂಥಾ ಒಂದು ಕಾರ್ಖಾನೆಯಾಗಿದೆ. ಈ ಕಾರ್ಖಾನೆಯಲ್ಲಿ ಸುಮಾರು ೮೦-೯೦ ಸಾವಿರಕ್ಕೂ ಮೇಲ್ಪಟ್ಟು ಜನ ಕೆಲಸ ಮಾಡುತ್ತಿದ್ದಾರೆ. ಇದನ್ನು ಬೇರೆ ಯಾವುದೇ ಒಂದು ಕಾರ್ಮಿಕ ಇಲಾಖೆಗೆ ಹೋಲಿಸದೆ ತಮ್ಮತಮ್ಮಲ್ಲೇ ಒಂದು ತೀರ್ಮಾನ ಮಾಡಿಕೊಂಡು ಹೋಗುವುದು ಒಳ್ಳೆಯದು. ಈ ರೀತಿ ಮುಷ್ಕರ ವಗೈರೆ ಮಾಡುವುದು ಸರಿಯಲ್ಲ ಅಥವಾ ಬಂದ್ ವಗೈರೆ ಮಾಡಿಕೊಂಡು ಹೋಗುವುದು ಸರಿಯಲ್ಲ ಇದಕ್ಕೆ ಪ್ರಯತ್ನ ಮಾಡಬೇಡಿ ಎಂದು ಹೇಳಿದ್ದಾರೆ. ತಮಗೆ ನಾನು ಈ ಸಂದರ್ಭದಲ್ಲಿ ಹೇಳಬೇಕಾದರೆ ಇದು ಒಂದು ಕಾರ್ಮಿಕರ ಪ್ರಶ್ನೆಯಾಗಿ ಉಳಿದಿಲ್ಲ. ಇದಕ್ಕೆ ಮತ್ತೊಂದು ರೀತಿಯಲ್ಲಿ ರಾಜಕೀಯ ಪ್ರವೇಶವಾಗಿದೆ. ಇದನ್ನು ಯಾವ ಆಧಾರದ ಮೇಲೆ ಹೇಳಬಹುದು ಎಂದರೆ ಈ ಬಗ್ಗೆ ಅನೇಕ ಜನರ ಭಾಷಣಗಳಲ್ಲಿ, ಅನೇಕ ಜನರ ಹೇಳಿಕೆಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧವಾಗಿ ಹೇಳಿರುವುದು ಗೊತ್ತಾಗುತ್ತದೆ. ಅನೇಕ ಜನ ಮಾನ್ಯ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರೂ ಕೂಡ ಅನೇಕ ವಿಷಯಗಳನ್ನು ಈ ಬಗ್ಗೆ ಇಲ್ಲಿ ಹೇಳಿದ್ದಾರೆ. ಆದರೆ ಆ ಕಾರ್ಮಿಕರ ಉದ್ದೇಶ ಏನು ಇದೆ ಅನ್ನುವುದು ಜನರಿಗೆ ಗೊತ್ತಿದೆ. ಅನೇಕ ಜನ ಕಾರ್ಮಿಕ ನಾಯಕರು ನನ್ನ ಹತ್ತಿರ ಬಂದು ಮಾತನಾಡಿದ್ದಾರೆ. ಕೆಲವು ನಿಷ್ಠಾವಂತ ನಾಯಕರು ಹೇಳಿದ ಹಾಗೆ ಅವರಿಗೆ ಹೋಗುವುದಕ್ಕೆ ಅವಕಾಶ ಕೊಟ್ಟರೆ ನಾಳೆ ದಿವಸವೇ ಸುಮಾರು ೧೦೦ಕ್ಕೆ ೮೦ರಷ್ಟು ಜನ ಬಂದು ಈ ಕಾರ್ಖಾನೆಗಳಲ್ಲಿ

ಕೆಲಸ ಮಾಡುವುದಕ್ಕೆ ತಯಾರಾಗಿದ್ದಾರೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಈವೊತ್ತು ಅವರು ಹೆದರಿಕೊಂಡು ಹೋಗುತ್ತಿಲ್ಲ. ಆದುದರಿಂದ ಅವರು ಬಂದು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಕಾರಣ ಇದರಲ್ಲಿ ರಾಜಕೀಯ ಪ್ರವೇಶವಾಗಿದೆ. ಅವರನ್ನು ಹೆದರಿಸುತ್ತಿದ್ದಾರೆ. ಇದರಲ್ಲಿ ಪ್ರಧಾನ ಮಂತ್ರಿಯವರನ್ನೂ ಮುಖ್ಯ ಮಂತ್ರಿಗಳನ್ನೂ ದೂರಲಾಗಿದೆ. ಈ ಬಗ್ಗೆ ತಮ್ಮ ಒಂದು ಅಗ್ರೀಮೆಂಟ್ ಏನು ಇದೆ, ತಮ್ಮ ಒಂದು ಬೇಡಿಕೆ ಏನು ಇದೆ, ತಮಗೆ ಏನೊಂದು ಅನ್ಯಾಯವಾಗಿದೆ ಆ ವಿಷಯವನ್ನೇ ಬಿಟ್ಟು ಬೇರೆ ಮಾತನಾಡುತ್ತಿದ್ದಾರೆ. ಪ್ರತಿ ದಿವಸ ಸಾಯಂಕಾಲ ನೋಡಿದರೆ ಅವರ ಬೇಡಿಕೆ ಬಗ್ಗೆ ಏನೂ ಚರ್ಚೆ ಇಲ್ಲ, ಮಾಲೀಕರ ಬಗ್ಗೆ ಚರ್ಚೆ ಇಲ್ಲ, ಕಾರ್ಮಿಕ ಇಲಾಖೆಯಲ್ಲಿ ನ್ಯಾಯ ಸಿಗಲಿಲ್ಲ ಎನ್ನುವ ಬಗ್ಗೆ ಚರ್ಚೆ ಇಲ್ಲ. ಮತ್ತೆ ಯಾವುದರ ಮೇಲೆ ಚರ್ಚೆ ಇದೆ ಎಂದರೆ ಈ ಸರ್ಕಾರವನ್ನು ಉರುಳಿಸಬೇಕು, ಆ ಸರ್ಕಾರವನ್ನು ಉರುಳಿಸಬೇಕು ಎನ್ನುವುದೇ ಒಂದು ಚರ್ಚೆಯಾಗಿದೆ. ನ್ಯಾಯ ಇರಲಿ ಇಲ್ಲದೇ ಇರಲಿ ಈ ಸರ್ಕಾರ ಉರುಳಿಸಬೇಕು, ಆ ಸರಕಾರ ಉರುಳಿಸಬೇಕು ಅಂತ ಅವರು ಭಾಷಣ ಮಾಡುತ್ತಾ ಹೋದರೆ ಇದು ಏನಾಗುತ್ತದೆ ಹೇಳಿ. ಈ ವಿಷಯ ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ಸಂಬಂಧಪಟ್ಟಂಥಾ ವಿಷಯವಲ್ಲ. ಅಲ್ಲಿಗೆ ಇದು ಬೇರೆ ವಿಷಯವಾಗುತ್ತದೆ. ಆವಾಗ ಇದು ಲಾ ಅಂಡ್ ಆರ್ಡರ್ ಪ್ರಶ್ನೆಗೆ ಬರುತ್ತದೆ, ಕಾರ್ಮಿಕರ ನ್ಯಾಯವಾದ ಒಂದು ಉದ್ದೇಶ ಏನು ಇದೆ ಆ ಬಗ್ಗೆ ಚರ್ಚೆ ಇಲ್ಲ. ಇವರ ಉದ್ದೇಶ ಏನು ಎಂದರೆ ಕಾರ್ಮಿಕರ ಹೆಸರಿನಲ್ಲಿ ಈ ದೇಶದಲ್ಲಿ ಅಶಾಂತಿಯನ್ನು ತರಬೇಕು ಮತ್ತು ಕಾರ್ಮಿಕರ ಹೆಸರಿನಲ್ಲಿ ಈ ದೇಶದ ಒಂದು ಉತ್ಪನ್ನವನ್ನು ಕಡಿಮೆ ಮಾಡಬೇಕು ಮತ್ತು ಕಾರ್ಮಿಕರ ಹೆಸರಿನಲ್ಲಿ ಈ ದೇಶದಲ್ಲಿ ಒಂದು ಅಶಾಂತಿಯನ್ನು ಮೂಡಿಸಬೇಕು ಎಂದು ಪ್ರಯತ್ನಪಟ್ಟರೆ, ಈ ಒಂದು ರಾಜಕೀಯದ ಹಿನ್ನೆಲೆಯಲ್ಲಿ ಈ ಒಂದು ಪರಿಸ್ಥಿತಿಯನು ಉಂಟು ಮಾಡುತ್ತಿದ್ದಾರೆಯೋ ಹೊರತು ಇದು ಕೇವಲ ಕಾರ್ಮಿಕರ ಒಂದು ಬೇಡಿಕೆಗಾಗಿ ಏನು ಒಂದು ಪ್ರಯತ್ನ ಮಾಡಬೇಕೋ ಅದರ ಬಗ್ಗೆ ಚರ್ಚೆ ಮಾಡುತ್ತಾ ಇಲ್ಲ. ನಿಮಗೆ ಈವೊತ್ತಿನ ದಿವಸ ಅವರ ಒಂದು ನಿಜವಾದ ಪರಿಸ್ಥಿತಿ ಹೇಳಬೇಕಾದರೆ ಈವೊತ್ತು ಕಾರ್ಮಿಕರ ಸಾವಿರಾರು ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕಾದರೆ ಆ ತಂದೆತಾಯಿಗಳು ಅಳುತ್ತಾ ಇದ್ದಾರೆ, ಅವರು ಅಂಥಾ ಕಷ್ಟದಲ್ಲಿದ್ದಾರೆ. ಅವರು ಈವೊತ್ತು ಕಾರ್ಖಾನೆಗಳಿಗೆ ಬಂದು ಕೆಲಸ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ಅದಕ್ಕೆ ಅವಕಾಶ ಇಲ್ಲವಾಗಿದೆ. ಕಾರಣ ಕೆಲವು ಮುಖಂಡರು ಅವರ ಮನೆ ಮನೆಗೆ ಹೋಗಿ ಕೆಲಸಕ್ಕೆ ಹೋದರೆ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಅವರನ್ನು ಹೆದರಿಸುತ್ತಿದ್ದಾರೆ. ಅಷ್ಟೇ ಅಲ್ಲ ಕೆಲಸ ಮಾಡುತ್ತೇವೆಂದು ಹೇಳಿದರೆ ಅವರಿಗೆ ಚೈನು ಚೂರಿ ತೋರಿಸುತ್ತಾರೆ. ನ್ಯಾಯವಾದ ವಿಚಾರವನ್ನು ಹೇಳದೆ ಪೋಲೀಸರು ಹಾಗೆ ಮಾಡಿದ್ದಾರೆ ಹೀಗೆ ಮಾಡಿದ್ದಾರೆ ಗೂಂಡಾಗಿರಿ ಮಾಡಿದ್ದಾರೆ ಅನ್ನುವ ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ನಿಷ್ಠಾವಂತ ಕಾರ್ಮಿಕರು ಹೀಗೆ ಹೇಳಿದ್ದಾರೆ. ಹೀಗೆ ನಮ್ಮನ್ನು ಹೆದರಿಸುತ್ತಾ ಇರುವುದರಿಂದ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಇದರಿಂದಾಗಿ ಆ ಮಕ್ಕಳಿಗೆ ಶಾಲೆಗಳಿಗೆ ಹೋಗುವುದಕ್ಕೆ ಬಸ್ ಇಲ್ಲದೇ, ಅವರಿಗೆ ಸರಿಯಾಗಿ ಕೆಲಸ ಇಲ್ಲದೆ ಬಹಳ ಕಷ್ಟ ಪಡುತ್ತಿದ್ದಾರೆ. ತಮಗೆ ಹೇಳಬೇಕಾದರೆ ಅವೊತ್ತಿನ ದಿವಸ ಬಸ್ಸುಗಳು ಹೋದರೆ ಆ ಬಸ್ಸುಗಳಿಗೆ ಕಲ್ಲು ಹೊಡೆದು ಪುಡಿ ಪುಡಿ ಮಾಡಿದ್ದಾರೆ, ಅಷ್ಟೇ ಅಲ್ಲದೆ ರೈಲು ನಿಲ್ದಾಣಕ್ಕೆ ಹೋಗುವಂಥಾ ಕಾರುಗಳಿಗೆ ಮತ್ತು ವಿಮಾನ ನಿಲ್ದಾಣಕ್ಕೆ ಹೋಗುವಂಥಾ ಕಾರುಗಳಿಗೆ ಹಾಲು ತರುವವರ ಮೇಲೆ ಸ್ಕೂಲಿಗೆ ಹೋಗುವವರ ಮೇಲೆ ಕಲ್ಲು ಹೊಡೆದಿದ್ದಾರೆ. ಕಲ್ಲು ಹೊಡೆದು ಪುಡಿಪುಡಿ ಮಾಡಿದ್ದಾರೆ. ಆ ಜನರು ಹೀಗೆ ಮಾಡುತ್ತಾ ಹೋದರೆ ಆ ಸಂದರ್ಭದಲ್ಲಿ ಸರಕಾರವಾಗಲಿ, ಪೋಲೀಸಿನವರಾಗಲಿ ಕೈಕಟ್ಟಿಕೊಂಡು ನೋಡಬೇಕೇ? ಈ ಕಾರ್ಮಿಕರಿಗೂ ಮತ್ತು ಬಾಂಬೆಯಿಂದ, ಡೆಲ್ಲಿಯಿಂದ ಬರತಕ್ಕಂಥಾ ಪ್ರಯಾಣಿಕರಿಗೂ ಏನು ಸಂಬಂಧ ಇದೆ? ಅಥವಾ ಈ ರಾಜ್ಯದಲ್ಲಿ ಇರತಕ್ಕಂಥಾ ೩½ ಕೋಟಿ ಜನಕ್ಕೂ ಮತ್ತು ಈ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥಾ ೧½ ಲಕ್ಷ ಜನಕ್ಕೂ ಏನು ಸಂಬಂಧ ಇದೆ, ಇವರ ಸಮಸ್ಯೆ ಏನು ಇದೆ ಅದನ್ನು ಸಹಾನುಭೂತಿಯಿಂದ ಬಗೆಹರಿಸಬೇಕೇ ವಿನಾ ಬಂದ್ ಮಾಡಿದರೆ, ಮುಷ್ಕರ ಮಾಡಿದರೆ ಬಗೆ ಹರಿಯುತ್ತದೆಯೋ? ನೀವು ಬಂದ್‌ನ್ನು ಕರೆಯಬೇಡಿ, ಶಾಂತಯುತವಾಗಿ ಇರುವುದಿಲ್ಲ, ಎಂದು ಪೋಲೀಸ್ ಇಲಾಖೆಯವರು ಅವರನ್ನು ಕರೆಸಿ ಹೇಳಿದ್ದಾರೆ. ತಮಗೆ ಏನಾದರೂ ಅನುಭವ ಇದ್ದರೆ ಇವರು ಬಂದ್ ಹೇಳಿದ ತಕ್ಷಣ ಯಾರಾದರೂ ಕೂಡ ಸಹಾನುಭೂತಿಯಿಂದ ತಮ್ಮ ಅಂಗಡಿಯ ಬಾಗಿಲನ್ನು ಹಾಕಿಕೊಳ್ಳುತ್ತಾರೆಯೋ ಹೇಳಿ. ಆ ದಿವಸ ಕಾರ್‌ನಲ್ಲಿ ಆಟೋರಿಕ್ಷಾದಲ್ಲಿ ಕಲ್ಲುಗಳನ್ನು ಇರಿಸಿಕೊಂಡು ನಾವು ಬಂದ್ ಕರೆದಿದ್ದೇವೆ ನೀವು ಅಂಗಡಿ ಬಾಗಿಲು ಹಾಕಿಕೊಳ್ಳಿ ಇಲ್ಲದೇ ಹೋದರೆ

ಹೊಡೆಯುತ್ತೇವೆ ಎಂದು ಹೆದರಿಸಿದರೆ, ಹಾಲು ತರುವವರ ಮೇಲೆ ಬಸ್ ಓಡಿಸುವವರ ಮೇಲೆ, ಪ್ರಯಾಣಿಕರ ಮೇಲೆ ತಮ್ಮ ಒಂದು ಗೂಂಡಾಗಿರಿಯನ್ನು ತೋರಿಸಿದರೆ ಮತ್ತು ರೈಲು ನಿಲ್ದಾಣದಲ್ಲಿ ಬರತಕ್ಕಂಥಾ ಪ್ರಯಾಣಿಕರ ಮೇಲೆ ಮತ್ತು ವಿಮಾನ ನಿಲ್ದಾಣದ ಮೇಲೆ ಈ ಒಂದು ಹೆದರಿಕೆಯನ್ನು ಉಂಟು ಮಾಡಿದರೆ ಇದರ ಪರಿಣಾಮ ಏನಾಗುತ್ತದೆ. ಲಾ ಅಂಡ್ ಆರ್ಡರ್ ಕೇವಲ ಸರ್ಕಾರದ ಒಂದು ರಕ್ಷಣೆಗೋಸ್ಕರ ಮಾಡುತ್ತಾ ಇಲ್ಲ, ಅಥವಾ ಕೇವಲ ಒಬ್ಬ ವ್ಯಕ್ತಿಗೋಸ್ಕರ ಮಾಡುತ್ತಾ ಇಲ್ಲ. ಬೆಂಗಳೂರು ನಗರಕ್ಕೆ ಹೊರಗಡೆಯಿಂದ ಬಂದಂಥಾ ಜನಕ್ಕೆ ಬೆಂಗಳೂರಿನಲ್ಲಿ ಬಂದ್ ಆಗಿದೆ, ಅಂಗಡಿ ಬಾಗಿಲು ಹಾಕಿಕೊಂಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ.

೧-೩೦ ಪಿ.ಎಂ.

ಮದುವೆಗೆ ಬರುತ್ತಾರೆ, ಸಾವಿಗೆ ಬರುತ್ತಾರೆ. ಕಾಯಿಲೆ ಇರುವವರನ್ನು ನೋಡಲಿಕ್ಕೆಂದು ಬರುತ್ತಾರೆ. ಕಾಯಿಲೆ ಸೀರಿಯಸ್‌ಯಾಗಿರುವ ರೋಗಿಗಳನ್ನು ಅಡ್ಮಿಟ್ ಮಾಡುವುದಕ್ಕೆ ಕರೆದು ಕೊಂಡು ಬರುತ್ತಾರೆ. ಇಂತಹ ಸಂದರ್ಭಗಳಲ್ಲಿ ಬಸ್ಸುಗಳಿಗೆ ಕಲ್ಲು ಹೊಡೆಯುವುದು ಕಾರುಗಳಿಗೆ ಕಲ್ಲು ಹೊಡೆಯುವುದು, ಬೆಂಕಿ ಹಚ್ಚುವುದು ಇಂತಹವುಗಳನ್ನೆಲ್ಲಾ ನೋಡಿದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್‌ಗಳಿಗೆ ಒಬ್ಬ ಕಾರ್ಮಿಕ ನಾಯಕರು ಜವಾಬ್ದಾರಿಯುತವಾಗಿ ಹೇಳಿಕೆ ಕೊಟ್ಟಿಲ್ಲ. ಇವತ್ತು ಈ ರಾಜ್ಯದಲ್ಲಿ ಹೀಗಿರಬೇಕಾದರೆ?

SRI D. DEVARAJA URS.—Let the Hon'ble Leader of the House please refer to the statement I have made. Nobody gave such a statement. I would like to bring to the notice of the Chief Minister through you Sir, that I did give a statement not to resort to violence.

SRI R. GUNDU RAO.—If it is so, it is good. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಮೂರು ಗಂಟೆ ಕಾಲ ಹೇಳಿದ್ದಾರೆ. ನಾವು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಕಾರ್ಮಿಕರು ಹೂಡಿರುವ ಮುಷ್ಕರ ಅವರ ಬೇಡಿಕೆ, ಅವರ ಒಪ್ಪಂದ ಇವುಗಳ ಡಿಟೈಲ್ಸ್‌ಗಳಿಗೆ ಹೋಗಿಲ್ಲ. ಅವರು ಯಾವ ರೀತಿ ನಡೆದುಕೊಂಡಿದ್ದಾರೆ ಎಂಬುದರ ಬಗ್ಗೆ ವಿವರಗಳನ್ನು ಕೊಟ್ಟಿಲ್ಲ. ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಸಂಪು ಹೂಡಿದ್ದಾರೋ ಅಧಿಕಾರಕ್ಕಾಗಿ ಸಂಪು ಹೂಡಿದ್ದಾರೋ ಎನ್ನುವ ವಿಚಾರವನ್ನು ಹೇಳಿಲ್ಲ. ರಾಜಕೀಯವಾಗಿ ಎಂದು ಹೇಳಿರುವುದು ಸರಿಯಲ್ಲ. ಮುಖ್ಯ ಮಂತ್ರಿಗಳು ಹೇಳುತ್ತಿರುವುದು ಕಾರ್ಮಿಕರಿಗೆ ದೊಡ್ಡ ಅಪಚಾರವನ್ನು ಮಾಡಿದಂತಾಗುತ್ತದೆ.

MR. SPEAKER.—Why do you draw inference ?

SRI S. R. BOMMAI.—Then give us the consent to move the motion, Otherwise, let the Chief Minister restrict himself to the point before the House.

SRI A. LAKSHMI SAGAR.—The Chief Minister made accusation against the Labour leaders. You were careful while we were speaking. We were not allowed to say anything about the labour leaders. Now, the Chief Minister has been given a free hand.

SRI AZEEZ SAIT (Mysore).—Sir, I raise a point of order, My point of order is when the Leader of the Opposition and other Members tried to persuade the Chair about the admissibility of the adjournment motion the chair was kind enough to caution them not

to come out with details. In fact when Hon'ble Member Subbayya Shetty wanted to quote some relevant facts from the Newspapers the Chair said 'No' Therefore, my submission is that the yardstick applied to us should also be made applicable to the Chief Minister. Now, the Chief Minister can submit the facts whether to give consent or not to give consent to the motion before us and nothing else. Therefore, my point of order is that the Chief Minister should not be allowed to go into the merit or demerit of the workers or tell about the loyal workers and their problems. All those things are not relevant now. The Chief Minister may be asked to confine to the admissibility of the adjournment motion moved by us. I hope the Hon'ble Speaker will apply the same yardstick applied to us to the Chief Minister also.

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಸಮರ್ಥನೆ ಮಾಡುತ್ತಾ ಹೇಳಿದರು ಲೇಬರ್ ಕನ್‌ಸಿಲಿಯೇಷನ್ ಒಪ್ಪಂದ ಆಗಿದ್ದ ಪಕ್ಷದಲ್ಲಿ ಅಸಹಕಾರ ಮಾಡತಕ್ಕಂಥಹ ವಾತಾವರಣ ಬರುತ್ತಿರಲಿಲ್ಲ ಎನ್ನುವ ಮಾತನ್ನು ಹೇಳಿದರೆ ಹೊರತು ಡಿಟೈಲ್ಸ್ ಆಗಿ ಹೇಳಿಲ್ಲ ; ಮತ್ತೇನು ಇಲ್ಲ.

SRI D. DEVARAJ URS —In my view it is not fair to go into the merits and demerits of the labour leaders. If the Hon'ble Chief Minister go into the details then the Opposition can also go into the details

SRI R GUNDU RAO.—It is not my intention. I was only giving the background and how it has happened. ಲಾ ಅಂಡ್ ಆರ್ಡರ್ ಎಷ್ಟರ ಮಟ್ಟಿಗೆ ಇತ್ತು ಎಂಬುದನ್ನು ಹೇಳಿದ್ದೇವೆ ಹೊರತು ಇನ್ನೇನನ್ನು ಹೇಳಿಲ್ಲ. ಡಿಟೈಲ್ಸ್ ಹೇಳಬೇಕಾದರೆ ೧೦ ಗಂಟೆ ಹೇಳಿದರು ಸಾಲದು. ಡಿಟೈಲ್ಸ್ ಹೇಳಿ ಅಂದರೆ ಹೇಳುತ್ತೇವೆ. ಯಾರೇ ಆದರೂ ಸಮಾಧಾನದಿಂದ ಇರಬೇಕು. ಇಂತಹ ಪರಿಸ್ಥಿತಿ ನಗರದಲ್ಲಿರುವಾಗ ಆಡಳಿತ ನಡೆಸುವ ಸರ್ಕಾರ ಜೇಜವಾಬ್ದಾರಿಯುತ ಕ್ರಮವನ್ನು ತೆಗೆದುಕೊಂಡಿಲ್ಲ. ಸರ್ಕಾರದವರು ಸಂಬಂಧಪಟ್ಟ ಕಾರ್ಮಿಕ ಇಲಾಖೆಯವರ ಸಭೆಯನ್ನು ಕರೆದು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಮುಷ್ಕರ ಹೂಡಬೇಡಿಯೆಂದು ಹೇಳಿದ್ದಾರೆ. ಏಕೆ ಹೇಳುತ್ತೇನೆ ಎಂದರೆ ಎಚ್.ಎ.ಎಲ್. ರಕ್ಷಣಾ ಇಲಾಖೆಗೆ ಸೇರಿದ್ದು, ಬಿ.ಇ.ಎಲ್. ರಕ್ಷಣಾ ಇಲಾಖೆಗೆ ಸೇರಿದ್ದು. ಐ.ಟಿ.ಐ. ದೇಶದ ಪ್ರತಿಯೊಬ್ಬರಿಗೂ ಬೇಕಾಗಿರತಕ್ಕಂಥದ್ದು, ಹೀಗಿರುವಾಗ ರಾಷ್ಟ್ರದ ಹಿತದೃಷ್ಟಿಯಿಂದ ಸತ್ಯಾಗ್ರಹ ಮಾಡುವುದು ಸರಿಯಲ್ಲ. ಆರ್ಥಿಕ ಪರಿಸ್ಥಿತಿಯ ಮೇಲೆ ಯಾವ ಪರಿಣಾಮ ಉಂಟಾಗುತ್ತದೆಂಬುದನ್ನು ಆಲೋಚನೆ ಮಾಡಿ. ಏಳೆಂಟು ಸಾರಿ ಸಭೆಯನ್ನು ಕರೆದು ಮುಷ್ಕರ ಮಾಡುವುದು ಬೇಡವೆಂದು ಪ್ರಯತ್ನ ಮಾಡಿದರು. ಕಾರ್ಮಿಕ ನಾಯಕರೆಲ್ಲರೂ ಕಠಿಣವಾಗಿ ವರ್ತಿಸಿದ್ದಾರೆ. ಮುಷ್ಕರವನ್ನು ನಿಲ್ಲಿಸುವುದಕ್ಕೆ ಎಷ್ಟು ಪ್ರಯತ್ನ ಮಾಡಿದರು ಕೂಡ ಅವರು ಮುಷ್ಕರವನ್ನು ನಿಲ್ಲಿಸಿಲ್ಲ. ಕೊನೆಗೆ ಯಾವುದಕ್ಕೂ ಒಪ್ಪದಿದ್ದಾಗ. ನಾನು ಬೇರೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದ ಕಾರ್ಯಕ್ರಮವನ್ನು ಮುಂದಕ್ಕೆ ಹಾಕಿ ಬಂದು ಸಭೆಯಲ್ಲಿ ಭಾಗವಹಿಸಿದ್ದೇನೆ. ಅದು ನನಗೆ ಸಂಬಂಧಪಟ್ಟಿದ್ದಲ್ಲ. ಕಾರ್ಮಿಕ ಇಲಾಖೆಯವರಿದ್ದಾರೆ, ಕಾರ್ಮಿಕ ಮಂತ್ರಿಗಳಿದ್ದಾರೆ, ಅಲ್ಲದೆ ಕೇಂದ್ರ ಸರ್ಕಾರದ ಮಂತ್ರಿಗಳಿದ್ದಾರೆ, ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು ಆದರೆ, ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿರುವುದರಿಂದ, ಕರ್ನಾಟಕ ರಾಜ್ಯದಲ್ಲಿ ನಾಳೆಯಿಂದ ಮುಷ್ಕರ ಹೂಡಿದರೆ ಕಾನೂನು ಪರಿಸ್ಥಿತಿ ಯಾವ ರೀತಿಯಾಗುತ್ತದೆಂದು ಕಂಡುಕೊಂಡು ನಿನ್ನೆ ನಾನು ಕಾರ್ಮಿಕ ನಾಯಕರುಗಳಿಗೆ ಹೇಳಿಕಳುಹಿಸಿ ನೀವು ಬಂದ್ ಮಾಡಬೇಡಿ ಎಂದು ಹೇಳಿದೆ. ಅಲ್ಲದೆ ನಾನು ದೆಹಲಿಗೆ ಹೋಗಿ ಇಲಾಖೆಯ ಮಂತ್ರಿಗಳನ್ನು ಸಾಧ್ಯವಾದರೆ ಪ್ರಧಾನ ಮಂತ್ರಿಗಳವರನ್ನು ಭೇಟಿಮಾಡಿ ಪರಿಸ್ಥಿತಿಯನ್ನು ವಿವರಣೆ ಮಾಡು

ತ್ತೇನೆ. ಅದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯೋಣವೆಂದು ಹೇಳಿದೆ. ಅವರು ಕೇಳಲಿಲ್ಲ, ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬೇಕಾದಷ್ಟು ಮಾರ್ಗಗಳಿವೆ, ಬಂದ್ ಮುಖಾಂತರವೇ ಅಲ್ಲ. ಬಂದ್ ಮಾಡುವುದರಿಂದ ಮೆಚ್ಚಿಗೆಯಾಗುವುದಿಲ್ಲ. ಪ್ರತಿಯೊಬ್ಬ ನಾಗರೀಕರಿಗೂ ತೊಂದರೆಯಾಗುತ್ತದೆ. ಕಾರ್ಮಿಕರ ವಿಷಯದಲ್ಲಿ ಕೇಂದ್ರ ಸರ್ಕಾರದ ಗಮನಕ್ಕೆ ಮತ್ತು ಮಾಲೀಕರ ಗಮನಕ್ಕೆ ತಂದು ಆಗಿದೆ. ಕಾರ್ಮಿಕರು ಮಾಲೀಕರ ನೀತಿಯಿಂದ ಅಸಂತೋಷಪಟ್ಟಿದ್ದಾರೆ, ಅವರಿಗೆ ತೃಪ್ತಿಯಾಗಿಲ್ಲ. ಈಗ ಮುಷ್ಕರ ಮಾಡಿ ಇಡೀ ದೇಶದ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇನ್ನು ಮೇಲೆ ನೀವು ಕೆಲಸಕ್ಕೆ ಹೋಗಿ, ನಿಮ್ಮ ಪರವಾಗಿ ನಾನು ಪ್ರಯತ್ನ ಮಾಡಿ ಮಾತುಕತೆ ನಡೆಸುತ್ತೇನೆ, ನೀವು ನನಗೆ ಬೆಂಬಲ ಕೊಡಿ, ಈ ವಿಚಾರವನ್ನು ಮುಖ್ಯ ಮಂತ್ರಿಯವರಿಗೆ ಬಿಟ್ಟಿದ್ದೇವೆಂದು ಸುಮ್ಮನೆ ನಿಮ್ಮ ಪಾಡಿಗೆ ನೀವು ಇರಿ, ಏಕೆಂದರೆ ಈ ವಿಚಾರ ಕೇವಲ ಒಂದು ಗಂಟೆಯಲ್ಲಾಗಲಿ ಅಥವಾ ಒಂದು ದಿನದಲ್ಲಾಗಲಿ ಇತ್ಯರ್ಥವಾಗುವ ವಿಚಾರವಲ್ಲವೆಂದು ತಿಳಿಸಿ ನನ್ನ ಪ್ರತಿಷ್ಠೆಯನ್ನೂ ಕೂಡ ಮರೆತು, ಅವರಿಗೆ ಹೇಳಿಕಳುಹಿಸಿದೆ. ನಾನು ಏತಕ್ಕೆ ಈ ಮಾತನ್ನು ಹೇಳಿದೆ ಎಂದರೆ, ನಾನೂ ಕೂಡ ಒಬ್ಬ ಕಾರ್ಮಿಕ ನಾಯಕನಾಗಿ ಕೆಲಸ ಮಾಡಿದ್ದೇನೆ. ಆದ್ದರಿಂದ ನಾನೇ ಖುದ್ದಾಗಿ ಅವರಿಗೆ ಹೇಳಿ ಕಳುಹಿಸಿದೆ ; ಮತ್ತು ನೀವು ಏನು ಬೆಂಗಳೂರು "ಬಂದ್"ಗೆ ಕರೆ ನೀಡಿದ್ದೀರಿ ಅದು ಬೇಡ, ನಿಮ್ಮ ಸತ್ಯಾಗ್ರಹವನ್ನು ನಿಲ್ಲಿಸಿ ಎಂದು ಸ್ಪಷ್ಟವಾಗಿ ಹೇಳಿದೆ. ಆದರೆ ನಾವು ನಿಲ್ಲಿಸುವುದಿಲ್ಲವೆಂದು ಅವರು ಹೇಳಿದರು. ಇಲ್ಲಿ ಯಾವುದಾದರೂ ಒಂದು ನಾಯಕತ್ವ ಇದ್ದಿದ್ದರೆ ನಾವು ಒಪ್ಪಿಕೊಳ್ಳಬಹುದಿತ್ತು, ಏನಾದರೂ ಪ್ರಯತ್ನ ಮಾಡಬಹುದಿತ್ತು. ಆದರೆ ಅಲ್ಲಿ ಹಲವಾರು ನಾಯಕತ್ವ ಇವೆ. ಅವರು ಹೋಗುವಾಗ ಏನು ಹೇಳಿದರು ಅಂದರೆ ನಾವು ಮೊದಲು ಮೀಟಿಂಗ್ ಮಾಡಿ ಬಂದ್‌ನ್ನು ಪೋಸ್ಟ್‌ಪೋನ್ ಮಾಡುವಂತಿದ್ದರೆ ನಿಮಗೆ ತಿಳಿಸುತ್ತೇವೆಂದು ಹೇಳಿ ಅನಂತರ ೧೬ನೇ ತಾರೀಖು ಇದ್ದ ಬಂದ್‌ನ್ನು ೨೧ನೇ ತಾರೀಖಿಗೆ ಇಟ್ಟಿದ್ದೇವೆಂದು ಹೇಳಿದರು. ಅದಕ್ಕೆ ನಾನು ಏನು ಹೇಳಿದೆ ಎಂದರೆ ನಿಮ್ಮ ವಿಚಾರವನ್ನು ನಾನು ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡುತ್ತೇನೆ. ಇಷ್ಟು ಹತ್ತಿರದಲ್ಲಿ ಈ ಬಂದ್‌ಗೆ ಕರೆ ನೀಡಬೇಡಿ. ನಾನು ದೆಹಲಿಯಿಂದ ಬಂದಮೇಲೆ ನಿಮಗೆ ತಿಳಿಸುತ್ತೇನೆ. ಏಕೆಂದರೆ ನಾನು ಹೋದ ದಿವಸ ಪ್ರಧಾನ ಮಂತ್ರಿಗಳು ಸಿಕ್ಕದಿರಬಹುದು, ಅಥವಾ ಕೇಂದ್ರದ ಹಣಕಾಸಿನ ಸಚಿವರು ಆಗಲಿ ಇಲ್ಲವೇ ಕಾರ್ಮಿಕ ಮಂತ್ರಿಗಳಾಗಲಿ ಸಿಕ್ಕದಿರಬಹುದು, ನೀವು ಇಷ್ಟೊಂದು ಅವಸರ ಮಾಡಿದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂದು ಹೇಳಿದರೂ ಕೇಳದೆ ೨೧ನೇ ತಾರೀಖು ಬೆಂಗಳೂರು ಬಂದ್ ಮಾಡಿಯೇ ಮಾಡುತ್ತೇವೆಂದು ಹೇಳಿ ಹೊರಟುಹೋದರು. ಅನಂತರ ನಾನೂ ಕೂಡ ಈ ವಿಚಾರಕ್ಕೆ ಹೆಚ್ಚು ಗಮನ ಕೊಡಲಿಲ್ಲ. ನಾನು ದೆಹಲಿಗೆ ಹೋಗಿ ಅಲ್ಲಿ ಸಂಬಂಧಪಟ್ಟವರೊಡನೆ ಮಾತನಾಡುವಾಗ ಎಷ್ಟು ವಿರೋಧ ಮಾಡಬಹುದಿತ್ತೋ ಅಷ್ಟು ವಿರೋಧವನ್ನು ಮಾಡಿದ್ದೇನೆ. ಕಾರ್ಮಿಕ ನಾಯಕರು ನನಗೆ ಏನು ಹೇಳಿದ್ದರು ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದರು. ಅವತ್ತು ಸಾಯಂಕಾಲವೇ ಪತ್ರಿಕೆಯಲ್ಲಿ ಬಂತು. ಇಲ್ಲಿನ ಮಾಲೀಕರು ಏನು ಹೇಳಿದ್ದರೋ, ಮಾನ್ಯ ಸ್ಟೀಫನ್‌ರವರು ಏನು ಹೇಳಿದರೋ ಅದರ ಮೇಲೆ ನಾನು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದೆ. ಅವತ್ತು ಸಾಯಂಕಾಲಕ್ಕೆ ಬಸ್ಸುಗಳ ಮೇಲೆ, ಕಾರುಗಳ ಮೇಲೆ, ಅಂಗಡಿಗಳ ಮೇಲೆ ಕಲ್ಲುಗಳು ಬೀಳುವುದಕ್ಕೆ ಪ್ರಾರಂಭವಾಯಿತು. ಅವತ್ತಿನ ಮಾರನೇ ದಿವಸ ಬೆಂಗಳೂರು ಬಂದ್ ಶಾಂತಿಯುತವಾಗಿ ನಡೆಯುತ್ತದೆಂದು ನಾವು ತಿಳಿದಿದ್ದೆವು, ಆದರೆ ಅದು ಹಾಗಾಗಲಿಲ್ಲ. ಶಾಲೆಗೆ ಹೋಗುವ ಮಕ್ಕಳ ಮೇಲೆ, ಮನೆಗಳ ಮೇಲೆ, ಅಂಗಡಿಗಳ ಮೇಲೆ, ಬಸ್ಸುಗಳ ಮೇಲೆ, ಕಲ್ಲು ತೂರಿದರು. ಆಗ ಪೋಲೀಸರು ಮೊದಲು ಟಿಯರ್ ಗ್ಯಾಸ್ ಮಾಡಿ ಅನಂತರ ಗೋಲಿಬಾರ್ ಮಾಡಬೇಕಾಯಿತು. ಆದರೆ ಗೋಲೀಬಾರ್ ಮಾಡಬೇಕೆಂದು ಪೋಲೀಸರು ಮಾಡಲಿಲ್ಲ. ಗೋಲೀಬಾರ್ ಮಾಡಿದ ಪೋಲೀಸರಿಗೆ ಪ್ರೊಮೋಷನ್ ಕೊಡುತ್ತಾರೆಂದು ಯಾರೂ ತಿಳಿಯಬಾರದು. ಯಾರ ಕಾಲದಲ್ಲೂ ಗೋಲೀಬಾರ್ ಮಾಡಿದ ಪೋಲೀಸರಿಗೆ ಪ್ರೊಮೋಷನ್ ಕೊಟ್ಟಿಲ್ಲ.

SRI D. DEVARAJ URS.—I am sorry to intervene sir. Again and again, I appeal to the Hon'ble Speaker, if the Hon'ble Leader of the House wants to go into these details......

SRI R. GUNDU RAO.—I am not going into the details.

SRI D. DEVARAJ URS.—Are you discussing the motion now or giving a reply to the debate that has taken place ? we have discussed about the case only whether it should be admitted by the Speaker as an adjournment motion or not. If the Hon'ble Chief Minister feels that the motion could be admitted, let him say yes ; if not let him say No. Therefore, if such arguments were to be putforth, I must say sir, we could also have adduced so many things. But, we strictly confined ourselves to the Hon'ble Speaker's direction. We have strictly confined to the rules and regulations. We have not at all discussed the merits of the case. Therefore, I appeal, through you sir, to the Hon'ble Chief Minister, not to go on dilating on this issue. We have not been given any opportunity at all.

SRI R. GUNDU RAO.—Please have patience. Hear me patiently first and then........

ಶ್ರೀ ಡಿ. ದೇವರಾಜ ಅರಸ್.—ಅವರು ಏತಕ್ಕೆ ಅಷ್ಟೊಂದು ಕೂಗಾಡುತ್ತಾರೋ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ನೀವು ಸಮಾಧಾನವಾಗಿಲ್ಲದಿದ್ದರೆ ನಾನು ಏನು ಮಾಡುವುದಕ್ಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನೀವು ದಾರಿ ಬಿಟ್ಟು ಹೋಗುತ್ತಿದ್ದೀರಿ, ಆದ್ದರಿಂದ ನಿಮ್ಮನ್ನು ದಾರಿಗೆ ತರುವಂತೆ ನಾನು ಸ್ಪೀಕರ್‌ರವರಿಗೆ ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪೋಲೀಸರಿಂದ ಕಾರ್ಖಾನೆಯ ಕಾರ್ಮಿಕರ ಮೇಲೆ ಅತ್ಯಾಚಾರ ನಡೆದಿದೆ; ಇದನ್ನು ಹೇಳಲು ಮಾನ್ಯ ಸದಸ್ಯರಾದ ಶ್ರೀಮಾನ್ ಫರ್ನಾಂಡೀಸ್‌ರವರು ಈಗ ಸದನದಲ್ಲಿಲ್ಲ. ಆದ್ದರಿಂದ ಮಾನ್ಯ ದೇವರಾಜ ಅರಸ್ ರವರೇ ಹೇಳಬೇಕಾಗಿದೆ. ಮುಖ್ಯ ಮಂತ್ರಿಯವರು ಕಾರ್ಮಿಕರ ಬಗ್ಗೆ ಹೇಳಿರುವ ಆಪಾದನೆಗಳನ್ನೆಲ್ಲಾ ನಾನು ಸಂಪೂರ್ಣವಾಗಿ ತಳ್ಳಿಹಾಕುತ್ತೇನೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೆ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಅನ್ನುವಂತೆ ಇವರು ಏತಕ್ಕೆ ಹೀಗೆ ಮಾತನಾಡುತ್ತಾರೆ. ಕಾರ್ಮಿಕರು ಕಲ್ಲು ತೂರಿದ್ದಾರೆಂದು ನಾನೇನೂ ಹೇಳಲಿಲ್ಲ; ಅಥವಾ ಕಾರ್ಮಿಕ ನಾಯಕರು ಕಲ್ಲು ತೂರಿದ್ದಾರೆಂದೂ ಕೂಡ ನಾನು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಈ ರೀತಿ ಮಾತನಾಡುವುದಾದರೆ ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ನಾವೂ ಅಷ್ಟೆ, ಮನಸ್ಸು ಮಾಡಿದರೆ ನಿಮ್ಮನ್ನೂ ಮಾತನಾಡುವುದಕ್ಕೆ ಬಿಡುವುದಿಲ್ಲ. ನಾನೂ ಆ ಕಡೆಯೂ ಮತ್ತು ಈ ಕಡೆಯೂ ಕೂತು ಅನುಭವ ಪಡೆದಿದ್ದೇನೆ. ನೀವೇನು ಮಾಡುತ್ತೀರಿ, ನಿಮಗೆ ಸಂಸಾರ ತಾಪತ್ರಯವಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಪಾಪ ಅಂಥವರ ಕೈಗೆ ಸಿಕ್ಕಿಕೊಂಡು ನೀವು ಒದ್ದಾಡುತ್ತಿದ್ದೀರಲ್ಲಾ ಎಂದು ನಮ್ಮ ಯೋಚನೆ. ಮದುವೆಯಾಗದಿರುವವರ ಕಷ್ಟ ನಿಮಗೆ ಏನು ಗೊತ್ತು?

ಶ್ರೀ ಆರ್. ಗುಂಡೂರಾವ್.—ಮದುವೆ ಆಗದಿರುವವರ ಕಷ್ಟದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದರೆ ಅದನ್ನು ಮೂವ್ ಮಾಡುವುದಕ್ಕೆ ನಿಮ್ಮನ್ನೂ ಮತ್ತು ಸೆಕೆಂಡ್ ಮಾಡುವುದಕ್ಕೆ ಪ್ರಮೀಳಾರವರನ್ನೂ ಬಿಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಕಡೆ ಇದ್ದ ಪ್ರಮೀಳಾರವರನ್ನೂ ಪುಸಲಾಯಿಸಿ ನಿಮ್ಮ ಕಡೆ ಕರೆದುಕೊಂಡು ಬಿಟ್ಟಿದ್ದೀರಿ. ಹಿಂದೆ ಒಂದು ಸಾರಿ ನನ್ನನ್ನೂ ನಿಮ್ಮ ಜೊತೆ ಹೆಲಿಕ್ಯಾಪ್ಟರ್‌ನಲ್ಲಿ ಕರೆದುಕೊಂಡು ಹೋಗಿ ಎಂದು ಪ್ರಮೀಳಾರವರು ಕೇಳಿದ್ದರು. ಅವರನ್ನು ಕರೆದುಕೊಂಡು ಹೋಗಿದ್ದರೂ ಹೋಗಿರಬಹುದು.

ಶ್ರೀ ಆರ್. ಗುಂಡೂರಾವ್.—ಸ್ವಾಮಿ, ಈ ವಿಚಾರದಲ್ಲಿ ಮಾತನಾಡಲು ನನಗೆ ಬೇಕಾದಷ್ಟು ಅವಕಾಶಗಳು ಸಿಕ್ಕುತ್ತವೆ. ಆದರೆ ನಾನು ಇದರಲ್ಲಿ ಯಾವ ಲಾಭವನ್ನೂ ಪಡೆಯಬೇಕೆಂಬ ಇಚ್ಛೆ ಇಲ್ಲ. ಅಪತ್ತಿನ ದಿವಸ ಪೋಲೀಸರು ಶಾಂತಿಯುತವಾಗಿ ವರ್ತಿಸಿದ್ದಾರೆ ಆದರೆ ಜನಗಳು ಹಿಂಸಾಚಾರಕ್ಕೆ ಇಳಿದಾಗ ಪೋಲೀಸರು ಟಿಯರ್ ಗ್ಯಾಸ್ ಸಿಡಿಸಿದರು, ಆಗಲೂ ಜನ ಚದರದೇ ಹೋದಾಗ ಗಾಳಿಗೆ ಗುಂಡನ್ನು ಹಾರಿಸಿದರು, ನಂತರವೂ ಜನ ಚದುರಲಿಲ್ಲ. ಜೊತೆಗೆ ನಾನು ಏನು ಹೇಳುತ್ತೇನೆ ಎಂದರೆ ನಾರ್ಮಲ್ ಕೋರ್ಸ್‌ನಲ್ಲಿ ಲಾ ಅಂಡ್ ಆರ್ಡರ್ ಪ್ರಶ್ನೆ ಬರುತ್ತದೆ. ಹಿಂದೆ ಯಾವಾಗಲಾದರೂ ಫೈರಿಂಗ್ ಆಗಿದ್ದಾಗ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಿಲ್ಲ. ಎಂತೆಂತಹ ಸಂದರ್ಭಗಳಲ್ಲಿ ಇದಕ್ಕಿಂತ ಹೆಚ್ಚಿನ ಗೋಲೀಬಾರ್, ಲಾಠಿಚಾರ್ಜ್ ಆದಾಗಲೂ ಅದು ಎಷ್ಟು ಗೋಲೀಬಾರ್ ಆಯಿತು, ಯಾವ ರೀತಿ ವಿಚಾರಣೆ ಆಯಿತು ಎನ್ನುವ ಬಗ್ಗೆ ಸ್ಟ್ಯಾಟಿಕ್ಸ್ ನನ್ನಲ್ಲಿ ಇದೆ. ಆ ಬಗ್ಗೆ ನಾನು ಇಲ್ಲಿ ಈ ಸದನದ ಹೆಚ್ಚು ಸಮಯವನ್ನು ತೆಗೆದುಕೊಂಡು ಹೇಳುವುದಕ್ಕೆ ಹೋಗುವುದಿಲ್ಲ. ಈ ಕಾನೂನು ಮತ್ತು ಶಾಂತಿ ಪಾಲನೆಯ ಪರಿಸ್ಥಿತಿಯ ಬಗ್ಗೆ ಮಾತನಾಡುವುದಕ್ಕೆ ಅವರಿಗೆ ಬೇಕಾದಷ್ಟು ಆಸ್ಪದಗಳು ಇವೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡತಕ್ಕಂಥ ಕಾಲದಲ್ಲಿ ಅವರಿಗೆ ಇದನ್ನು ಮಾತನಾಡುವುದಕ್ಕೆ ಅವಕಾಶವಿದೆ. ಈ ಬಗ್ಗೆ ನಾನು ರೆಫರೆನ್ಸ್ ಕೊಟ್ಟು ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್‌ನಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಒಂದು ನಿಮಿಷ ಇಲ್ಲಿ ಓದಿಬಿಡುತ್ತೇನೆ. According to practice and Procedure of Parliament "A matter is urgent only if it is of very recent occurrence and must be raised at the first available opportunity." ಎಂದು ಹೇಳಿದ್ದಾರೆ. ಪುನಃ ಅದರಲ್ಲಿ ಏನು ಹೇಳುತ್ತಾರೆ ಎಂದರೆ "A matter even of very recent occurrence is not urgent if an opportunity for its discussion will arise in the ordinary course of business within a reasonable period of time" ಎಂದು ಹೇಳಿದ್ದಾರೆ. ಇದು ಬಹಳ ಮುಖ್ಯ. "It is also held that an Adjournment Motion on a matter can be raised during Motion of Thanks on the President's Address." ಅಂತಹ ವಿಷಯಗಳನ್ನು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿಣರ್ಯದ ಮೇಲೆ ಮಾತನಾಡತಕ್ಕಂಥ ಕಾಲದಲ್ಲಿ ಹೇಳುವುದಕ್ಕೆ ಅವಕಾಶವಿದೆ. "Similarly a matter which can be raised under any other procedural devices-Calling Attention notices, Short notice questions, Half an hour discussions, President's address *i.e.*, Governor's address." ಆದ್ದರಿಂದ ಇಷ್ಟು ಕ್ಲಿಯರ್ ಆಗಿ ಇರಬೇಕಾದರೆ ಇದರಲ್ಲಿ ಕಾನೂನು ಮತ್ತು ಶಾಂತಿಪಾಲನೆಯ ಬಗ್ಗೆ ಚರ್ಚೆ ಮಾಡಬಹುದು. ಅವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದಾರೆ. ಅದರಲ್ಲಿ ಈ ಬಗ್ಗೆ ಚರ್ಚೆ ಮಾಡಬಹುದು. ಆದ್ದರಿಂದ ಈ ಒಂದು ಪರಿಸ್ಥಿತಿಗೋಸ್ಕರ ವಿಶೇಷವಾಗಿ ಸಭೆಯನ್ನು ಅಡ್ಜರ್ನ್ ಮಾಡಿ ಈ ವಿಷಯವನ್ನು ತೆಗೆದುಕೊಳ್ಳುವಂಥ ಪರಿಸ್ಥಿತಿ ಉಂಟಾಗಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಕಾನೂನಿನಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ಅದನ್ನು ನಾನು ಈಗಾಗಲೇ ಕ್ವೋಟ್ ಮಾಡಿದ್ದೇನೆ. ಆ ಬಗ್ಗೆ ಚರ್ಚೆ ಮಾಡಬೇಕಾದರೆ ಪಾರ್ಲಿಮೆಂಟ್ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್‌ನಲ್ಲಿ ಸಹ ಬೇರೆ ಮಾರ್ಗಗಳು ಇರಬೇಕಾದರೆ ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತಂದುಬಿಟ್ಟು ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸ್ನೇಹಿತರುಗಳು ಏನು ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತಂದಿದ್ದಾರೆ ಅದನ್ನು ತಾವು ಒಪ್ಪಬೇಕಾಗಿಲ್ಲ, ಅದಕ್ಕೆ ಅಪ್ಪಣೆ ಕೊಡಬೇಕಾಗಿಲ್ಲ. ಬೇರೆ ನಾರ್ಮಲ್ ಕೋರ್ಸ್‌ನಲ್ಲಿ ಅದನ್ನು ತೆಗೆದುಕೊಳ್ಳೋಣ ಎಂದು ಹೇಳಿ ನಾನು ಅದನ್ನು ವಿರೋಧಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ನಾವು ಅವರು ಹೇಳಿದ ಹಾಗೆ ಎಲ್ಲವನ್ನೂ ಸಾವಧಾನವಾಗಿ ಕೇಳಿದ್ದೇವೆ. ಇಲ್ಲಿ ನಾವು ತಂದಿರತಕ್ಕಂಥ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಒಪ್ಪ

ಬೇಕಾದ್ದು ಇಲ್ಲ ಎಂದು ಅವರು ಹೇಳಿದ್ದಾರೆ. ಲಾ ಅಂಡ್ ಆರ್ಡರನ್ನು ಮೈನ್‌ಟೈನ್ ಮಾಡಬೇಕಾದ್ದು ಸರ್ಕಾರದ ಕರ್ತವ್ಯ; ಸರ್ಕಾರದ ಕರ್ತವ್ಯವನ್ನು ನಿರ್ವಹಣೆ ಮಾಡುವ ಪ್ರಯತ್ನದಲ್ಲಿ ಸಂದರ್ಭ ಬಂದಾಗ ಗುಂಡು ಹೊಡೆಯಬೇಕಾಗಿ ಬಂತು; ಇಂತಿಂತಹ ಕಾರಣಗಳಿಂದ ಗೋಲೀಬಾರ್ ಮಾಡಬೇಕಾಗಿ ಬಂತು, ಮತ್ತೊಂದನ್ನು ಮಾಡಬೇಕಾಗಿ ಬಂತು ಎಂದು ಇಷ್ಟೆಲ್ಲಾ ಅವರು ಹೇಳಿದ್ದಾರೆ. ಸರ್ಕಾರ ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಪಟ್ಟರೂ ಕೂಡ ಕಾರ್ಮಿಕ ವರ್ಗದವರು ಹಾಗೂ ಮುಖಂಡರುಗಳ ಆಟಿಟ್ಯೂಡ್ ಅನ್‌ರೀಸನ್‌ಬಲ್ ಆಗಿ ಕಂಡು ಬಂತು, ಅದರ ಸಲುವಾಗಿ ಗಲಾಟೆ ಆಯಿತು, ಜನರ ಹಿತವನ್ನು ರಕ್ಷಣೆ ಮಾಡುವ ಕಾರಣದಿಂದ ಲಾಠಿ ಚಾರ್ಜ್ ಮತ್ತು ಗೋಲೀಬಾರ್ ಮಾಡುವ ಪರಿಸ್ಥಿತಿ ಬಂತು ಎಂದು ಅವರು ಹೇಳಿದ್ದಾರೆ. ಇಷ್ಟೆಲ್ಲಾ ಸರಿಯಾಗಿದ್ದರೆ ನಾನು ಅವರನ್ನು ಒಂದು ಮಾತನ್ನು ಕೇಳುತ್ತೇನೆ. 'Justice should not only be done but must appear to have been done'. ಹಾಗಿದ್ದರೆ ಈ ಬಗ್ಗೆ ಅವರು ನ್ಯಾಯಾಂಗ ವಿಚಾರಣೆಗೆ ಏತಕ್ಕೆ ಒಪ್ಪಿಕೊಳ್ಳುವುದಿಲ್ಲ ಅನ್ನುತ್ತಾರೆ? ಇಷ್ಟೆಲ್ಲಾ ಸರಿಯಿರುವಾಗ, ಕಾರ್ಮಿಕರದು ತಪ್ಪು, ಕಾರ್ಮಿಕರ ಮುಖಂಡರದು ತಪ್ಪು; ಪೋಲೀಸರದು ಸರಿಯಾಗಿದೆ; ಹೀಗಿದ್ದರೂ ವಿರೋಧಪಕ್ಷದವರು ಅಡ್ಜರ್ನ್‌ಮೆಂಟ್ ಮೋಷನ್ ತರುತ್ತಿದ್ದಾರೆ, ಇದು ಸರಿಯಲ್ಲ ಎಂದರೆ ಅವರು ಹೇಳಿರುವುದು ಒಂದು ವೇಳೆ ಸರಿ ಇರಬಹುದು ಎಂದು ಇಟ್ಟುಕೊಳ್ಳೋಣ. ಇದು ಒಂದು ಕಡೆಯ ಅಭಿಪ್ರಾಯ. ಇನ್ನೊಂದು ಕಡೆ ಇದರಲ್ಲಿ ಯಾರ ತಪ್ಪು ಏನು ಎಂಬುದನ್ನು ತಿಳಿಯುವುದಕ್ಕೆ ಒಬ್ಬರು ಬೇಕಲ್ಲವೇ? ಇನ್ನು ಎರಡನೆಯದಾಗಿ ಯಾವ ಒಂದು ಪಕ್ಷಪಾತವಿಲ್ಲದೇ ಒಬ್ಬ ವ್ಯಕ್ತಿಯು ಕಮಿಷನ್ ಮಾಡಿ ಅವರಿಂದ ಒಂದು ರಿಪೋರ್ಟ್ ಬಂದಿದ್ದರೆ, ಅವರು ಹೇಳುವುದು ಸರಿ ಎಂದು ಹೇಳಿದರೆ ಅದನ್ನು ಒಪ್ಪಬೇಕಾದ್ದು ನಿಜ. ಉದಾಹರಣೆಗೆ ಮಧುಗಿರಿ ಪ್ರಕರಣದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಆಯಿತು; ಸರ್ಕಾರ ಮಾಡಿದ್ದು ಸರಿ ಎಂದು ವರದಿ ಬಂತು. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಈ ವಿಚಾರದಲ್ಲಿ ಕೂಡ ಅವರು ಒಂದು ನ್ಯಾಯಾಂಗ ವಿಚಾರಣೆ ಮಾಡಿ ಒಂದು ವರದಿ ಬಂದಾಗ, ಈಗಲೂ ಸರ್ಕಾರ ಮಾಡಿರುವುದು ಸರಿ ಎಂದು ಬಂದರೆ ನಾವು ಒಪ್ಪಿಕೊಳ್ಳುತ್ತೇವೆ. ಹಾಗೆ ನ್ಯಾಯಾಂಗ ವಿಚಾರಣೆಗೆ ಒಪ್ಪುವುದಿಲ್ಲ ಎಂದರೆ ಈ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತಳ್ಳಿಹಾಕಬೇಕು ಎಂದು ಹೇಳಿದರೆ ನಾವು ಅವರ ವಾದಕ್ಕೆ ಬೆಲೆ ಕೊಡುವುದಕ್ಕೆ ಸಾಧ್ಯವಿಲ್ಲ. ಕ್ಷಮಿಸಬೇಕು ಮಾನ್ಯ ಅಧ್ಯಕ್ಷರೇ, ನಾವು ತಮಗೆ ಎಷ್ಟು ಗೌರವವನ್ನು ಕೊಡಬೇಕೋ ಅಷ್ಟು ಗೌರವವನ್ನು ಕೊಡುವುದರಲ್ಲಿ ಯಾವ ವಿಚಾರದಲ್ಲಿಯೂ ನಾವು ಹಿಂದೆ ಹೋಗುವವರಲ್ಲ, ಆದರೆ ಸರ್ಕಾರದ ಈ ಒಂದು ನೀತಿಯನ್ನು, ಅವರ ಒಂದು ನಿಲುವನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತೇವೆ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈ ದಿವಸ ಈ ಸಭೆಯ ಮುಂದೆ ಈ ಒಂದು ಗಹನವಾದ ವಿಚಾರ ಚರ್ಚೆಗೆ ಬಂದು ನಡವಳಿಕೆ ಕೂಡ ಉನ್ನತಮಟ್ಟದಲ್ಲಿ ನಡೆದಿದೆ ಎಂದು ಹೇಳುವುದಕ್ಕೆ ನಾನು ಸಂತೋಷ ಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಬೇರೆ ಪಕ್ಷದವರು ಕೊಟ್ಟಿರತಕ್ಕಂಥ ನಿಲುವಳಿಸೂಚನೆಯನ್ನು ನಾನು ನೋಡಿದ್ದೇನೆ. ಇವರಲ್ಲಿ ತಕ್ಕಂಥ ಕೆಲವು ವಿಚಾರಗಳ ಬಗ್ಗೆ ನಾವು ಗಮನಹರಿಸ ತಕ್ಕಂಥಾದ್ದು ಇದೆ. ಸರ್ಕಾರದವರು ಕೂಡ ಅದು ನಡೆದಿಲ್ಲ ಎಂದು ನಿರಾಕರಣೆ ಮಾಡಿಲ್ಲ. ಸಂದರ್ಭ ಏನಿದೆ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ದಿವಸ ನಾನು ಏತಕ್ಕೆ ಈ ಸಮಯದಲ್ಲಿ ನಿಲುವಳಿ ಸೂಚನೆಯು ಪ್ರಸ್ತಾಪ ಆಗುವುದಕ್ಕೆ ಅವಕಾಶ ಕೊಟ್ಟೆ ಎಂದರೆ ಇಂತಹ ಸಮಯದಲ್ಲಿ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಪ್ರಸ್ತಾಪವಾಗತಕ್ಕಂಥ ದಿವಸ ಇಂತಹ ಲಾ ಅಂಡ್ ಆರ್ಡರ್ ಮೈನ್‌ಟೈನ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಈ ನಿಲುವಳಿ ಸೂಚನೆ ಬಂದಾಗ ಅಂತಿಮ ನಿರ್ಣಯ ಮಾಡಿಕೊಡತಕ್ಕಂಥ ಯೋಚನೆ ಮಾಡಿ, ಈ ತೀರ್ಮಾನವನ್ನು ಕೊಟ್ಟು ಮತ್ತೆಮತ್ತೆ ಇಂತಹ ವಿಚಾರಗಳು ಇಲ್ಲಿ ಬರದೇ ಇರತಕ್ಕಂಥ ರೀತಿಯಲ್ಲಿ ಈ ಒಂದು ತೀರ್ಮಾನ ಇರಲಿ ಎನ್ನುವ ದೃಷ್ಟಿಯಿಂದ ಅದಕ್ಕೆ ಸಹಾಯಕವಾಗುವ ರೀತಿಯಲ್ಲಿ ಅದರ ಪ್ರಸ್ತಾಪಕ್ಕೆ ಅವಕಾಶ ಕೊಟ್ಟಿದ್ದೇನೆ. ಈ ಹಿನ್ನಲೆಯಲ್ಲಿ ೧೯೫೩ನೇ ಇಸವಿ ಮಾರ್ಚ್ ೧೧ನೇ ತಾರೀಖಿನಲ್ಲಿ ಈ ಸದನದಲ್ಲಿ ಕೊಟ್ಟಂಥ ಏನೊಂದು ತೀರ್ಮಾನ ಇದೆ ಅದನ್ನು ಬದಲಾವಣೆ ಮಾಡುವುದಕ್ಕೆ ಯಾವ ವಿಧವಾದ ಕಾರಣಗಳೂ ಇಲ್ಲ ಎಂದು ನನ್ನ ಅಭಿಪ್ರಾಯ. ಆ ತೀರ್ಮಾನ ಬಹಳ ಪ್ರಾಮುಖ್ಯವಾದುದು. ಅದನ್ನು ಯಾವಾಗಲೂ ಪಾಲನೆ ಮಾಡತಕ್ಕಂಥಾದ್ದು

ಒಳ್ಳೆಯದು ಎಂದು ಹೇಳುತ್ತಾ, ಮತ್ತೆ ಅದರಲ್ಲಿ ಉಲ್ಲೇಖವಾಗಿರತಕ್ಕಂಥ ಎರಡು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಇಂತಹದೇ ಒಂದು ಸಂದರ್ಭದಲ್ಲಿ ಈ ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಕೆ.ಜಿ.ಎಫ್. ನಲ್ಲಿ ಗೋಲೀಬಾರ್ ಆದಾಗ ಅಲ್ಲಿ ಒಬ್ಬರ ಮರಣ ಕೂಡ ಆಗಿತ್ತು ಎಂದು ಕಾಣುತ್ತದೆ: ಅದು ಆದಾಗ ಹಿಂದೆ ವಿರೋಧಪಕ್ಷದ ನಾಯಕರಾಗಿದ್ದ ಶ್ರೀ ಮಹಮದ್ ಇಮಾಮ್ ರವರು, ದಿವಂಗತ ಶ್ರೀ ಶ್ರೀನಿವಾಸ ಐಯ್ಯಂಗಾರ್‌ರವರು ಅದನ್ನು ಪ್ರಸ್ತಾಪ ಮಾಡಿದ್ದರು.

೨–೦೦ ಪಿ.ಎಂ.

ಇದುವರೆಗೂ ಯಾವರೀತಿ ವಿಷಯಗಳು ಪ್ರಸ್ತಾಪವಾಗುತ್ತಾ ಇದ್ದುವು ಅದೇ ರೀತಿಯಲ್ಲಿ ಇವತ್ತು ಹೆಚ್ಚು ವಿಷಯಗಳು ಪ್ರಸ್ತಾಪವಾಗಿದೆ. ಇದು ಲಾ ಅಂಡ್ ಆರ್ಡರ್, ಕಾನೂನು ಮತ್ತು ಕಾನೂನಿನ ನಿರ್ವಹಣೆ ಮಾಡತಕ್ಕ ಪ್ರಸಂಗವಾದುದರಿಂದ ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳ ಬಾರದು ಎಂದು ನಿರ್ಣಯ ಕೊಡುವಾಗ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಸದಸ್ಯರು ಕಾನ್‌ಸ್ಟಿಟ್ಯೂಯಂಟ್ ಅಸೆಂಬ್ಲಿ ಅಧ್ಯಕ್ಷರ ಮಾತನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮತ್ತೆ ಹೇಳತಕ್ಕಂಥಾದ್ದು ಉತ್ತಮ ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಮತ್ತೆ ಅದೇ ಸಮಯದಲ್ಲಿ ೧೯೩೦ ನೇ ಇಸವಿ ಜುಲೈ ೧೬ ನೇ ತಾರೀಖು ಇಂಡಿಯನ್ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ನಡೆದಂಥ ಒಂದು ಮಾತನ್ನು ಕೂಡ ಹೇಳಿದ್ದಾರೆ. ಆ ಮಾತನ್ನು ಪುನಃ ಪ್ರಸ್ತಾಪ ಮಾಡಿ ನಾನು ಇವತ್ತು ನಮ್ಮ ಈ ಸಭೆಯ ಮುಂದೆ ಇರತಕ್ಕ ಈ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ. ಅಲ್ಲಿ ಪ್ರಸ್ತಾಪ ಮಾಡಿರತಕ್ಕ ವಿಷಯ ಏನೆಂದರೆ,

> "With the advent of responsible Government, it has become necessary for not to consider Adjournment Motion as an ordinary or a routine method of introducing a subject for debate and thus interrupting the appointed programme of the business."

ಇವತ್ತಿನ ದಿವಸ ಸಭೆಯ ಮುಂದಿರತಕ್ಕ ನಿರ್ದಿಷ್ಟವಾದಂಥ ಕಾರ್ಯಕ್ರಮಗಳನ್ನು ಮುಂದೆ ಹಾಕಿ ಇಂಟರ್‌ಪ್ಟ್ ಮಾಡತಕ್ಕ ಅವಕಾಶವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

> "This aspect of the matter has been dealt with by the Speaker of the Constituent Assembly of India when functioning as the Indian Legislature, in what is known as Mir Laik Ali Case........."

ಮತ್ತೆ ಬೊಂಬಾಯಿನ ಅಸೆಂಬ್ಲಿಯಲ್ಲಿ ನಡೆದಂಥ ಒಂದು ತೀರ್ಮಾನವನ್ನೂ ಕೂಡ ಉಲ್ಲೇಖ ಮಾಡಿದ್ದಾರೆ. ಅದರಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು.

> "The principle of the fixity of the day's programme has to be considered to be at least as important, if not more important than the right to move an adjournment motion and it is in this conflict of two principles that admissibility of an adjournment motion has to be considered."

ಇದು ಬಹಳ ಮುಖ್ಯವಾದ್ದು ಎನ್ನುವ ಮಾತನ್ನು ಹೇಳುತ್ತಾ, ಮತ್ತೆ ಇಂಥದೇ ಒಂದು ಸಮಯದಲ್ಲಿ ಮತ್ತೊಂದು ಉಲ್ಲೇಖ ಮಾಡಿದ್ದಾರೆ. ಏನೆಂದರೆ,

> "In the present case it is possible that the subject of the adjournment motion could be debated during the ordinary parliamentary opportunities available to members and such being the case, there appears to be no need to upset the

day's business to take up this question on an adjournment motion. It is not as if the debate will brook no delay. The shooting took place some days ago. Any delay of a few hours or days in discussing........."

ಇದು ಬಹಳ ಮುಖ್ಯವಾದುದು. ಏಕೆಂದರೆ, ಇವತ್ತಿನ ದಿವಸ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥ ಅವಕಾಶವಿತ್ತು.

"Any delay of a few hours or days in discussing the subject will not interfere with the fair debate of the question, nor will it result in worsening of the existing situation. There is thus no urgency within the technical meaning of our rules."

ಆದುದರಿಂದ ಈ ಒಂದು ತೀರ್ಮಾನ ಏನಿದೆ ಇದಕ್ಕೆ ನಾವು ಬದ್ಧರಾಗಿರಬೇಕು ಎಂದು ಹೇಳಿ ನಮ್ಮ ಮುಂದಿರತಕ್ಕ ಈ ನಿಲುವಳಿ ಸೂಚನೆಗೆ ನನ್ನ ಅಭಿಮತವನ್ನು, ನನ್ನ ಅಪ್ಪಣೆಯನ್ನು ನಿರಾಕರಣೆ ಮಾಡಿದ್ದೇನೆ. ಮತ್ತೆ ಅದೇ ಸಮಯದಲ್ಲಿ ಅಂದಿನದಿವಸ ದುರದೃಷ್ಟಕರವಾದಂಥ ಪರಿಸ್ಥಿತಿಗೆ ತುತ್ತಾಗಿರತಕ್ಕಂಥ ಸತ್ತ ಮಿತ್ರರು ಏನಿದ್ದಾರೆ ಅವರ ಬಗ್ಗೆ ನಮ್ಮ ಅತೀವವಾದಂಥ ದುಃಖ ಕೂಡ ಇದೆ ಇದನ್ನು ನಾನು ವ್ಯಕ್ತ ಮಾಡುತ್ತಾ ಇದ್ದೇನೆ. ಸರ್ಕಾರ ಕಾನೂನನ್ನು ಪರಿಪಾಲನೆ ಮಾಡುವಾಗ ಇಂಥಾ ಪರಿಸ್ಥಿತಿಗಳು ಅನಿವಾರ್ಯವಾಗಿ ಒದಗಿಬರುತ್ತವೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತಾ, ಇಂತಹ ಪರಿಸ್ಥಿತಿಯಲ್ಲಿ ಕಾರ್ಯಕ್ರಮ ಪಟ್ಟಿಯನ್ನು ಬಿಟ್ಟು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅಪ್ಪಣೆ ಕೊಡತಕ್ಕಂಥಾದ್ದು ಸೂಕ್ತ ಕ್ರಮವಾಗಲಾರದು ಎನ್ನುವ ತೀರ್ಮಾನವನ್ನು ಕೊಟ್ಟು ನನ್ನ ಅಪ್ಪಣೆಯನ್ನು ನಿರಾಕರಣೆ ಮಾಡಿದ್ದೇನೆ.

I suggest to the House that the Motion of Thanks to Governor's Address may be moved today and the discussion can take place on Monday. So, I request Sri Veera Shetty Kushnoor to move the motion.

Motion of Thanks to Governor's Address.

SRI VEERA SHETTY KUSHNOOR (Bidar).—Mr. Speaker, I beg to move:

"That we, the Members of the Karnataka Legislative Assembly assembled in this Session, beg leave to thank the Governor for the Address delivered to the Members of the Legislature on 28th January, 1981."

SRI M. MANCHE GOWDA (Maddur).—Sir, I second the motion.

The question was proposed.

MR. SPEAKER.—The House now stands adjourned to meet on Monday, at 1.00 P.M.

(The House adjourned at Ten Minutes pas Two of the Clock to meet again at One of the Clock on Monday, the 2nd February 1981.)